ಬೆಂಗಳೂರು
ಶುಕ್ರವಾರ, 27 ಫೆಬ್ರವರಿ 2026
ಸಂಪುಟ 33, ಸಂಚಿಕೆ 119, ಪುಟಗಳು 18+4+4
ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹಿಂದು ಧರ್ಮಕ್ಕೆ ಮತಾಂತರವಲ್ಲ, ಘರ್‌ವಾಪ್ಸಿ!
• ಪುಟ ೨



ಬೆಂಗಳೂರು

ಶುಕ್ರವಾರ, 27 ಫೆಬ್ರವರಿ 2026

ಸಂಪುಟ 33, ಸಂಚಿಕೆ 119, ಪುಟಗಳು 18+4+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94
REG No.KA/BG GPO/2532/2021-23

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಇಂದು ಭಾರತದ ವಾಯು ಶಕ್ತಿ ದರ್ಶನ | ೧೪
ಕಂಟೆಂಟ್ ಕ್ರಿಯೇಟರ್‌ಗಳಿಗೆ ಹಣ ಸಿಗಲಿ | ೧೪
ಭಾರತದ ಸೆಮಿಫೈನಲ್ ಹಾದಿ ಸುಗಮ | ೧೬

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಆರ್ದ್ರ

ದಿನದ ಮಾತು

ನಡೆಯೊಳಗೆ ನುಡಿ ತುಂಬಿ, ನುಡಿಯೊಳಗೆ ನಡೆ ತುಂಬಿ, ನಡೆನುಡಿ ಎರಡನು ಪರಿಪೂರ್ಣ ತುಂಬಿ.
▲ ಷಣ್ಮುಖ ಸ್ವಾಮಿ

ರಾಷ್ಟ್ರೋತ್ಥಾನ ಪರಿಷತ್ ಸಮಾಜ ಸೇವೆಗೆ 60ರ ಸಂಭ್ರಮ

ಲೇಖನ

• ರಾಜೇಶ್ ಪದ್ಮಾರ್

• ಪುಟ ೬

ಹಿಂದು ಧರ್ಮಕ್ಕೆ ಮತಾಂತರವಲ್ಲ, ಘರ್‌ವಾಪ್ಸಿ!

• **ತಿರುವನಂತಪುರ:** ಕೇರಳದಲ್ಲಿನ ಲವ್ ಜಿಹಾದ್ ಆರೋಪಗಳು ಮತ್ತು ದಿ ಕೇರಳ ಸ್ಟೋರಿ 2 ಚಿತ್ರ ಬಿಡುಗಡೆಯಾಗುವ ಹೊತ್ತಲ್ಲೇ, ಮತಾಂತರ ಕುರಿತಂತೆ ಹೊಸ ವಾದಗಳು ಸೃಷ್ಟಿಯಾಗಿದ್ದು, ಲವ್ ಜಿಹಾದ್ ಕುರಿತ ಆರೋಪಗಳೇ ತಪ್ಪು, ಹಿಂದುಗಳಾಗಿ ಮತಾಂತರವಾದವರೇ ಹೆಚ್ಚು ಎಂಬ ನರೇಟಿವ್ ಸೃಷ್ಟಿಸುವ ಪ್ರಯತ್ನ ಆರಂಭವಾಗಿದೆ.

ಕೇರಳ ಮೂಲದ ಆಂಗ್ಲ ವೆಬ್‌ಸೈಟ್‌ವೊಂದು, ಕೇರಳ ಗೆಜೆಟ್ ದಾಖಲೆಗಳನ್ನು ಮುಂದಿಟ್ಟುಕೊಂಡು, ಮತಾಂತರದ ಹೊಸ ವಾದ ಶುರು ಮಾಡಿದೆ. 10 ಸಾವಿರ ಪುಟಕ್ಕೂ ಹೆಚ್ಚು ಅಂಶಗಳಿರುವ ಗೆಜೆಟ್ ದಾಖಲೆ ಪರಿಶೀಲಿಸಿದರೆ, ಕ್ರೈಸ್ತ ಮತ್ತು ಮುಸ್ಲಿಮ್‌ಗಿಂತ ಹಿಂದು ಧರ್ಮಕ್ಕೇ ಹೆಚ್ಚು ಮಂದಿ ಮತಾಂತರಗೊಂಡಿದ್ದಾರೆ ಎಂದು ಇದು ವಾದ ಇರಿಸಿದೆ. ಅಂದರೆ, ದಲಿತ ಕ್ರೈಸ್ತರು ಮತ್ತು ದಲಿತ ಮುಸ್ಲಿಮರು, ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಯೋಜನ ಪಡೆಯುವ ಸಲುವಾಗಿ ಹಿಂದು ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಎಂಬುದು ಈ ವೆಬ್‌ಸೈಟ್‌ನವರ ವಾದ.

ಆದರೆ, ಇದು ಮತಾಂತರವೋ ಅಥವಾ ಘರ್‌ವಾಪ್ಸಿಯೋ ಎಂಬುದನ್ನು ಸಾಬೀತು ಮಾಡುವಲ್ಲಿ ಈ ವೆಬ್‌ಸೈಟ್ ವಿಫಲವಾಗಿದೆ. ಇದರ ಮೂಲಗಳನ್ನು ಕೆದಕಿದರೆ, ಇವರೆಲ್ಲರೂ ಈ ಹಿಂದೆ ಹಿಂದು ಧರ್ಮದಲ್ಲೇ ಇದ್ದು, ಉತ್ತಮ ಮತ್ತು ಜಾತಿರಹಿತ ಜೀವನಕ್ಕಾಗಿ ಕ್ರೈಸ್ತ ಮತ್ತು ಮುಸ್ಲಿಂ ಮತಕ್ಕೆ ಮತಾಂತರಗೊಂಡಿದ್ದವರು. ಆದರೆ, ಇಂದಿಗೂ ಅಂಥ ಯಾವುದೇ ಜಾತಿರಹಿತ ಸಮಾಜ ನಿರ್ಮಾಣವಾಗುವಲ್ಲಿ ವಿಫಲ ಮತ್ತು ಎಸ್‌ಸಿ ಮೀಸಲಾತಿಯನ್ನು ಪಡೆಯುವ ಉದ್ದೇಶದಿಂದ ಹಿಂದು ಧರ್ಮಕ್ಕೆ ಮರಳಿದ್ದಾರೆ. ➡ಪುಟ ೮



- ಕೇರಳ ಸ್ಟೋರಿ 2 ಸಂದರ್ಭದಲ್ಲೇ ಹೊಸ ಚರ್ಚೆ ಆರಂಭ
- ಕ್ರೈಸ್ತ, ಮುಸ್ಲಿಂಗಿಂತ ಹಿಂದು ಧರ್ಮಕ್ಕೇ ಹೆಚ್ಚು ಮತಾಂತರ
- ಕೇರಳ ಗೆಜೆಟ್ ದಾಖಲೆ ಮುಂದಿಟ್ಟು ಹೊಸ ವಾದ ಮಂಡನೆ
- ದಲಿತ ಕ್ರೈಸ್ತ, ದಲಿತ ಮುಸ್ಲಿಂರಿಂದ ಹಿಂದು ಧರ್ಮಕ್ಕೆ ಮತಾಂತರ ವಾದ
- ಇದು ಮತಾಂತರಕ್ಕಿಂತ ವಿಭಿನ್ನ, ಸ್ವಧರ್ಮಕ್ಕೆ ವಾಪಸ್

ದಿ ಕೇರಳ ಸ್ಟೋರಿ 2 ಬಿಡುಗಡೆಗೆ ಹೈ ತಡೆ

• **ತಿರುವನಂತಪುರಂ:** ದಿ ಕೇರಳ ಸ್ಟೋರಿ 2: ಗೋಸ್ ಬಿಯಾಂಡ್ ಚಿತ್ರದ ಬಿಡುಗಡೆಗೆ ಕೇರಳ ಹೈಕೋರ್ಟ್ ಗುರುವಾರ ಮಧ್ಯಂತರ ತಡೆ ನೀಡಿದೆ. ಶನಿವಾರ ಈ ಸಿನಿಮಾ ಬಿಡುಗಡೆಯಾಗಬೇಕಿತ್ತು. ಚಲನಚಿತ್ರಕ್ಕೆ ಪ್ರಮಾಣೀಕರಣವನ್ನು ನೀಡುವಾಗ ಸೆನ್ಸಾರ್ ಮಂಡಳಿಯು ಸರಿಯಾಗಿ ಯೋಚಿಸಿಲ್ಲ ಎಂದು ಮೇಲ್ನೋಟಕ್ಕೆ ತೋರುತ್ತದೆ ಎಂದು ನ್ಯಾಯಾಲಯವು ಗಮನಿಸಿದೆ. ➡ಪುಟ ೮



ಖಾಲಿ ಇರುವ ನೇರ ನೇಮಕ ಹುದ್ದೆಗಳ ಭರ್ತಿಗೆ ತಿಂಗಳಲ್ಲಿ ಪ್ರಕ್ರಿಯೆ

ನಿರುದ್ಯೋಗಿಗಳಿಗೆ ಸಿಹಿ

• **ಬೆಂಗಳೂರು:** ರಾಜ್ಯದಲ್ಲಿ ಒಟ್ಟು ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳಲ್ಲಿ 56,432 ಹುದ್ದೆಗಳನ್ನು ಶೇ.50 ಮೀಸಲಾತಿ ಆಧಾರದಲ್ಲಿ ಮುಂದಿನ 30 ದಿನಗಳಲ್ಲಿ ಭರ್ತಿ ಮಾಡುವ ಪ್ರಕ್ರಿಯೆ ಪ್ರಾರಂಭಿಸಲು ಸಚಿವ ಸಂಪುಟ ಮಹತ್ವದ ನಿರ್ಣಯ ಕೈಗೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಪರಿಶಿಷ್ಟ ಜಾತಿ ಪಂಗಡದ ಮೀಸಲು ಪ್ರಮಾಣವನ್ನು ಶೇ.50ರಿಂದ ಶೇ.56ಕ್ಕೆ ಹೆಚ್ಚಿಸಿರುವುದನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದರ ಹಿನ್ನೆಲೆಯಲ್ಲಿ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ಮಾಡಲಾಯಿತು. ಹಲವು ಪ್ರಕರಣಗಳಲ್ಲಿ ಮೀಸಲು ಪ್ರಮಾಣ ಹೆಚ್ಚಿಸಿರುವುದಕ್ಕೆ ಕಳೆದ ನವೆಂಬರ್ 19ರಂದು ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ನ್ಯಾಯಾಲಯವು 2022ರ ಕಾಯ್ದೆಗೆ ತಡೆ ನೀಡಿದ್ದರಿಂದ 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮಗಳಿಗೆ ವಿವರಿಸಿದರು.

ಎಸ್ಸಿ-ಎಸ್ಟಿಗೆ ಶೇ.6 ಕಾಯ್ದಿರಿಸಲು ನಿರ್ಧಾರ: ನೇಮಕಾತಿ ಪ್ರಕ್ರಿಯೆಯನ್ನು ತುರ್ತಾಗಿ ಮುಂದುವರಿಸಬೇಕಾಗಿರುವುದರಿಂದ 2022ರ ಡಿಸೆಂಬರ್ 28ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ ಹೊಸ ನೇಮಕ ಅಧಿಸೂಚನೆ ಹೊರಡಿಸಲಾಗುತ್ತದೆ. ➡ಪುಟ ೮



- ನೇಮಕಾತಿ ನಡೆಯುವ ಹುದ್ದೆಗಳು 56,432
- ಆರ್ಥಿಕ ಇಲಾಖೆ ಅನುಮತಿಸಬೇಕಾದ ಹುದ್ದೆಗಳು 24,300
- 371 (ಜೆ) ವಿಧಿಯ ಪ್ರಕಾರ ಅನುಮತಿಸಬೇಕಾದ ಹುದ್ದೆಗಳು 32,132

ಒಳಮೀಸಲಾತಿ ಜಾರಿ: ರಾಜ್ಯಪಾಲರ ಅಂಕಿತ

• **ಬೆಂಗಳೂರು:** ಒಳಮೀಸಲಾತಿ (ಪರಿಶಿಷ್ಟ ಜಾತಿಗಳ (ಉಪ ವರ್ಗೀಕರಣ) ವಿಧೇಯಕ 2025ಕ್ಕೆ ಸ್ಪಷ್ಟೀಕರಣ ಕೇಳಿ ಎರಡು ಬಾರಿ ವಾಪಸ್ ಕಳಿಸಿದ್ದ ರಾಜ್ಯಪಾಲರು ಕೊನೆಗೂ ಸಹಿ ಹಾಕಿದ್ದು, ಬಹುದಿನಗಳಿಂದ ಕಾಯ್ದಿರಿಸಿದ್ದ ವಿಧೇಯಕಕ್ಕೆ ಅಂಗೀಕಾರ ದೊರೆತಿದೆ. ಸುಪ್ರೀಂಕೋರ್ಟ್ ಆದೇಶದಂತೆ ಒಳಮೀಸಲಾತಿ ಕಲ್ಪಿಸಲು ಬೆಳಗಾವಿ ಅಧಿವೇಶನದಲ್ಲಿ ಅಂಗೀಕಾರವಾಗಿದ್ದ ಮಸೂದೆಯನ್ನು ರಾಜ್ಯಪಾಲರ ಸಹಿಗಾಗಿ ಕಳುಹಿಸಿತ್ತು. ಸರ್ಕಾರದ ಈ ಮಸೂದೆಗೆ ಸಹಿ ಹಾಕದೇ ತಡೆಹಿಡಿದಿದ್ದರಿಂದ ಸರ್ಕಾರ, ರಾಜ್ಯಪಾಲರ ನಡುವೆ ತಿಕ್ಕಾಟಕ್ಕೆ ಕಾರಣವಾಗಿತ್ತು. ➡ಪುಟ ೮

> ಎಸ್‌ಸಿ ಮೀಸಲಾತಿಯನ್ನು ಶೇ. 15ರಿಂದ ಶೇ.17ಕ್ಕೆ ಮತ್ತು ಎಸ್‌ಟಿ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಜಾಸ್ತಿ ಮಾಡುವುದನ್ನು ಗಮನದಲ್ಲಿಟ್ಟುಕೊಂಡು, ಹೊಸ ನೇಮಕಾತಿ ಮಾಡಲಾಗುತ್ತದೆ. ಒಳಮೀಸಲಾತಿಯನ್ನು ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಲಾಗುತ್ತದೆ.
> ■ **ಎಚ್.ಕೆ. ಪಾಟೀಲ್,** ಕಾನೂನು ಸಚಿವ

ಪ್ರಧಾನಿ ಮೋದಿ ಇಸ್ರೇಲ್ ಪ್ರವಾಸ ಫಲಪ್ರದ

ರಕ್ಷಣಾ ಸಹಕಾರ ಸೇರಿ 17 ಒಪ್ಪಂದಗಳಿಗೆ ಸಹಿ

ಕ್ಷಿಪಣಿ, ಡ್ರೋನ್, ಅತ್ಯಾಧುನಿಕ ರಕ್ಷಣಾ ಉತ್ಪಾದನೆಗೆ ಬೆಂಬಲ

• **ಜೆರುಸಲೆಮ್:** ಪ್ರಧಾನಿ ನರೇಂದ್ರ ಮೋದಿ ಮತ್ತು ಇಸ್ರೇಲ್ ನಾಯಕರು ಗುರುವಾರ ರಕ್ಷಣಾ ಸಹಯೋಗ ಸೇರಿದಂತೆ 17 ಒಪ್ಪಂದ ಮತ್ತು ಒಡಂಬಡಿಕೆ ಪತ್ರಗಳಿಗೆ(ಎಂಒಯು) ಸಹಿ ಹಾಕಿದರು. ಪ್ರಧಾನಿ ಮೋದಿಯವರ ಎರಡು ದಿನಗಳ ಇಸ್ರೇಲ್ ಪ್ರವಾಸ ಐತಿಹಾಸಿಕ ಕ್ಷಣಗಳಿಂದ ಕೂಡಿದ್ದು, ಹಲವು ಒಪ್ಪಂದಗಳಿಗೆ ಸಹಿ ಮಾಡುವ ಮೂಲಕ ಫಲಪ್ರದವಾಗಿದೆ.

ಪ್ರಧಾನಿ ಮೋದಿ ಮತ್ತು ಇಸ್ರೇಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಉಪಸ್ಥಿತಿಯಲ್ಲಿ ರಕ್ಷಣಾ ಸಹಯೋಗ, ಕೃತಕ ಬುದ್ಧಿಮತ್ತೆ(ಎಐ), ಕೃಷಿ, ಸೈಬರ್ ಸುರಕ್ಷತೆ, ಫಿನ್‌ಟೆಕ್, ಕಾರ್ಮಿಕ, ಶಿಕ್ಷಣ, ಮೀನುಗಾರಿಕೆ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪರಸ್ಪರ ವಿವಿಧ ಲಾಭದಾಯಕ ಒಪ್ಪಂದಗಳಿಗೆ ಉಭಯ ದೇಶಗಳೂ ಸಹಿ ಹಾಕಿದವು. ಯುಪಿಐ, ಕೃಷಿ ಸಂಶೋಧನೆ, ಇಸ್ರೇಲ್ ವಾಣಿಜ್ಯ, ಸೇವಾ, ಉತ್ಪಾದನಾ , ಹೋಟೆಲ್ ಉದ್ಯಮ ವಲಯದಲ್ಲಿ ಭಾರತೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಹಲವು ಒಪ್ಪಂದಗಳು ಉಭಯ ರಾಷ್ಟ್ರಗಳು ಸಹಿ ಹಾಕಿವೆ. ➡ಪುಟ ೮



ಭಯೋತ್ಪಾದನೆಗೆ ಜಗತ್ತಲ್ಲಿಲ್ಲ ಜಾಗ

ಭಯೋತ್ಪಾದನೆಗೆ ಜಗತ್ತಲ್ಲಿ ಜಾಗ ಇಲ್ಲ ಎಂಬುದು ಭಾರತ-ಇಸ್ರೇಲ್‌ಗಳ ಸಮಾನ ನಿಲುವು. ಭಯೋತ್ಪಾದನೆ ಮತ್ತು ಇದರ ಬೆಂಬಲಿಗರನ್ನು ಮಟ್ಟ ಹಾಕುವಲ್ಲಿ ಉಭಯ ರಾಷ್ಟ್ರಗಳು ಹೆಗಲಿಗೆ ಹೆಗಲು ನೀಡಿ ಹೋರಾಡಲಿವೆ. ಭಯೋತ್ಪಾದನೆಯನ್ನು ಯಾವುದೇ ಸ್ವರೂಪ, ಯಾವುದೇ ಅಭಿವ್ಯಕ್ತಿಯಲ್ಲೂ ಒಪ್ಪಿಕೊಳ್ಳೋ ಪ್ರಶ್ನೆಯೇ ಇಲ್ಲವೆಂದು ಪ್ರಧಾನಿ ಮೋದಿ ಸಾರಿದ್ದಾರೆ.

ಕಿರುಸುದ್ದಿ

ಪಾಕ್ ಮೇಲೆ ಆಫ್ಘನ್ ಭಾರೀ ಗುಂಡಿನ ದಾಳಿ

• **ಕಾಬೂಲ್/ಇಸ್ಲಾಮಾಬಾದ್:** ಇತ್ತೀಚೆಗಷ್ಟೇ ಪಾಕಿಸ್ತಾನ ನಡೆಸಿದ ವಾಯುದಾಳಿಗಳಿಗೆ ಪ್ರತಿಯಾಗಿ ಅಫ್ಘಾನ್ ತಾಲಿಬಾನ್ ಪಡೆಗಳು ಗಡಿಭಾಗದಲ್ಲಿ ತೀವ್ರ ಪ್ರತಿದಾಳಿ ಆರಂಭಿಸಿರುವುದರಿಂದ ಖೈಬರ್ ಪಖ್ತುಂಖ್ವಾದಲ್ಲಿನ ಡ್ಯುರಂಡ್ ಗಡಿ ಪ್ರದೇಶ ಮತ್ತೊಮ್ಮೆ ಉದ್ವಿಗ್ನಗೊಂಡಿದೆ. ವಿವಾದಿತ ಡ್ಯುರಂಡ್ ರೇಖೆಯುದ್ದಕ್ಕೂ ಎರಡೂ ಪಾಳಯಗಳ ನಡುವೆ ಭಾರೀ ಗುಂಡಿನ ಚಕಮಕಿ ನಡೆಯುತ್ತಿದೆ. ಅಫ್ಘಾನ್ ತಾಲಿಬಾನ್ ವಕ್ತಾರ ಜಬೀಉಲ್ಲಾ ಮುಜಾಹಿದ್ ಈ ಬಗ್ಗೆ ಮಾಹಿತಿ ನೀಡಿದ್ದು, ಪಾಕಿಸ್ತಾನ ಸೇನೆಯ ದಾಳಿಗಳಿಗೆ ಪ್ರತಿಯಾಗಿ ಸೇನಾ ನೆಲೆಗಳು ಹಾಗೂ ತಪಾಸಣಾ ಚೌಕಿಗಳ ವಿರುದ್ಧ ವ್ಯಾಪಕ ದಾಳಿ ಆರಂಭಿಸಲಾಗಿದೆ ಎಂದು ತಿಳಿಸಿದ್ದಾರೆ. ಜಬಾ ಖೇಲ್ ಮಾರುಕಟ್ಟೆ ಸಮೀಪದ ಮಾರುಸರ ಹಾಗೂ ಶಾಹ್‌ಕೋಟ್ ಸರ ಪ್ರದೇಶಗಳಲ್ಲಿ ಅಫ್ಘಾನ್ ತಾಲಿಬಾನ್ ಪಡೆಗಳು ವಾಯುಸೇನೆ ಮತ್ತು ಸೇನಾಪಡೆಗಳ ಸಹಾಯದಿಂದ ಸಮನ್ವಿತ ದಾಳಿ ನಡೆಸಿವೆ. ಈ ದಾಳಿಯಲ್ಲಿ ಪಾಕಿಸ್ತಾನಕ್ಕೆ ಭಾರೀ ಹಾನಿಯಾಗಿದ್ದು, ಕನಿಷ್ಠ ಒಂಬತ್ತು ಪಾಕಿಸ್ತಾನಿ ಸೈನಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ ಎನ್ನಲಾಗಿದೆ. ➡ಪುಟ ೮

ಡಿಸೆಂಬರ್‌ಗೆ ದಾವಣಗೆರೆ-ಚಿತ್ರದುರ್ಗ ರೈಲು ಮಾರ್ಗ

• **ಚಿತ್ರದುರ್ಗ:** ದಾವಣಗೆರೆ-ಚಿತ್ರದುರ್ಗ ನಡುವಿನ ನೇರ ರೈಲ್ವೆ ಮಾರ್ಗ ಕಾಮಗಾರಿ 2027ರ ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಇದರ ಜತೆಗೆ 2027ರ ಡಿಸೆಂಬರ್ ಅಂತ್ಯದ ವೇಳೆಗೆ ದಾವಣಗೆರೆ - ಚಿತ್ರದುರ್ಗ - ತುಮಕೂರು, ರಾಯದುರ್ಗ - ತುಮಕೂರು, ಗದಗ-ವಾಡಿ ಸೇರಿದಂತೆ ಹಲವು ರೈಲ್ವೆ ಮಾರ್ಗಗಳನ್ನು ಪೂರ್ಣಗೊಳಿಸಿ ಜನರ ಸೇವೆಗೆ ಅನುವು ಮಾಡಿಕೊಡಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ವಿಮಾನ ಟಿಕೆಟ್ ಮರುಪಾವತಿ ನಿಯಮ ಪರಿಷ್ಕರಣೆ

• ಪುಟ ೧೪



ಭಾರತ-ಕೆನಡಾ ಸಂಬಂಧಕ್ಕೆ ಗ್ರೀನ್ ಸಿಗ್ನಲ್

• ಪುಟ ೧೪

ಸುದ್ದಿ ಸಮಗ್ರ

ಬೆಂಗಳೂರು ವಿ.ವಿ.ಯಲ್ಲಿ ಆಡಳಿತದ ನಿರ್ಲಕ್ಷ್ಯ

ಒಂದೂವರೆ ವರ್ಷವಾದರೂ ವಿದ್ಯಾರ್ಥಿಗಳಿಗಿಲ್ಲ ಅಂಕಪಟ್ಟಿ

▸ **ಚಂದನ್ ಲಕ್ಕೂರು**

• **ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 2024ರಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪೂರೈಸಿ ಹೊರಬಂದ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಈಗ ಅತಂತ್ರವಾಗಿದೆ. ಕೋರ್ಸ್ ಮುಗಿದು ಒಂದೂವರೆ ವರ್ಷ ಕಳೆದರೂ ಅಸಲಿ ಅಂಕಪಟ್ಟಿ ನೀಡದ ವಿವಿ ಧೋರಣೆ ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದೆ.

ದಿಗಂತ ವಿಶೇಷ

ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿನ ಎಡವಟ್ಟುಗಳು ಈಗ ವಿದ್ಯಾರ್ಥಿಗಳ ವೃತ್ತಿಜೀವನಕ್ಕೆ ಅಡ್ಡಗಾಲಾಗಿವೆ. ಕಳೆದ 2 ವರ್ಷಗಳಿಂದ ಸ್ನಾತಕೋತ್ತರ ಪದವಿ ಮುಗಿಸಿ ಹೊರಬಂದ ವಿದ್ಯಾರ್ಥಿಗಳಿಗೆ ಇನ್ನೂ ಅಸಲಿ ಅಂಕಪಟ್ಟಿ ಕೈಸೇರಿಲ್ಲ. ಸಾವಿರಾರು ವಿದ್ಯಾರ್ಥಿಗಳು ಅಂಕಪಟ್ಟಿ ಇಲ್ಲದೆ, ಕತ್ತಲಲ್ಲಿ ತಡಕಾಡುತ್ತಿದ್ದಾರೆ. ಡಿಜಿಟಲ್ ಇಂಡಿಯಾ ಕಾಲದಲ್ಲೂ ಕಾಗದದ ಅಂಕಪಟ್ಟಿ ಹೊರತುಪಡಿಸಿಯೂ, ಡಿಜಿ ಲಾಕರ್‌ನಲ್ಲೂ ಅಂಕಪಟ್ಟಿ ಲಭ್ಯವಿಲ್ಲದಿರುವುದು ವಿದ್ಯಾರ್ಥಿಗಳ ಭವಿಷ್ಯಕ್ಕೆ ಮುಳುವಾಗಿದೆ. ಸ್ನಾತಕೋತ್ತರ ಪದವಿ ಅಂತಿಮ ವರ್ಷದಲ್ಲಿ ಪರೀಕ್ಷೆ ಹಣದ ಜತೆಗೆ ಅಂಕಪಟ್ಟಿ ನೀಡುತ್ತೇವೆಂದು ಹೆಚ್ಚಿನ ಹಣ ಕಟ್ಟಿಸಿಕೊಳ್ಳಲಾಗುತ್ತದೆ. ➡ಪುಟ ೮



- ಅನೇಕ ವಿ.ವಿ.ಗಳು ಪಿಎಚ್.ಡಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು, ಅಂಕಪಟ್ಟಿ ಇಲ್ಲದೆ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ
- ಖಾಸಗಿ ಕಂಪನಿಗಳಲ್ಲಿ ಕೆಲಸಕ್ಕೆ ಸೇರುವಾಗ ಮೂಲ ದಾಖಲೆ ಸಲ್ಲಿಸಲು ಸಾಧ್ಯವಾಗದೆ ಕೈತಪ್ಪುತ್ತಿದೆ ಉದ್ಯೋಗಾವಕಾಶ
- ವಿದೇಶಕ್ಕೆ ಹೋಗ ಬಯಸುವ ವಿದ್ಯಾರ್ಥಿಗಳ ಅಡ್ಮಿಷನ್ ಪ್ರಕ್ರಿಯೆ ಅರ್ಧಕ್ಕೆ ನಿಲ್ಲುತ್ತಿದೆ

ಎನ್‌ಸಿಇಆರ್‌ಟಿ 8ನೇ ತರಗತಿ ಪಠ್ಯಕ್ಕೆ ನಿಷೇಧ

• **ಹೊಸದಿಲ್ಲಿ:** ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ(ಎನ್‌ಸಿಇಆರ್‌ಟಿ) 8ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ನ್ಯಾಯಾಂಗದ ಭ್ರಷ್ಟಾಚಾರದ ಕುರಿತು ಅವಮಾನಕಾರಿ ವಿಷಯವಿದೆ ಎಂದು ಹೇಳಿ, ಅದರ ಮುಂದಿನ ಮುದ್ರಣ, ಮರುಮುದ್ರಣ ಹಾಗೂ ಡಿಜಿಟಲ್ ಪ್ರಸಾರಕ್ಕೆ ಸುಪ್ರೀಂ ಕೋರ್ಟ್ ಗುರುವಾರ ಸಂಪೂರ್ಣ ನಿಷೇಧ ಹೇರಿದೆ. ಗುಂಡು ಹಾರಿಸಲಾಗಿದೆ, ನ್ಯಾಯಾಂಗ ಸಂಸ್ಥೆ ರಕ್ತಸ್ರಾವಗೊಳ್ಳುತ್ತಿದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠ ಕಟುವಾಗಿ ಹೇಳಿದೆ. ➡ಪುಟ ೮



ಕ್ರಮ ಕೈಗೊಳ್ಳಲು ಮೋದಿ ನಿರ್ದೇಶನ • ಪುಟ ೮

ನುಸುಳುಕೋರರನ್ನು ಓಡಿಸುವುದು ಖಚಿತ

• **ಅರಾರಿಯಾ:** ಮುಂಬರುವ ಪಶ್ಚಿಮಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯಗಳಿಸುವ ವಿಶ್ವಾಸ ವ್ಯಕ್ತಪಡಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅಧಿಕಾರಕ್ಕೆ ಬಂದ ಕೂಡಲೇ ಪ್ರತಿ ಒಳನುಸುಳುಕೋರರನ್ನು ರಾಜ್ಯದಿಂದ ಹೊರದಬ್ಬುತ್ತೇವೆ ಎಂದಿದ್ದಾರೆ.

ಬಿಹಾರದ ಅರಾರಿಯಾ ಜಿಲ್ಲೆಯಲ್ಲಿ ಮಾತನಾಡಿರುವ ಶಾ, ರಾಷ್ಟ್ರೀಯ ಭದ್ರತೆಗೆ ಕೇವಲ ಬೆದರಿಕೆಯಷ್ಟೇ ಅಲ್ಲ, ಜನರ ಕಲ್ಯಾಣ ಪ್ರಯೋಜನಗಳನ್ನು ಸಹ ಪಡೆಯುವ ಪ್ರತಿಯೊಬ್ಬ ನುಸುಳುಕೋರರನ್ನು ದೇಶದಿಂದ ಹೊರಹಾಕುವುದು ಬಿಜೆಪಿ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದರು. ದೊಡ್ಡ ಪ್ರಮಾಣದಲ್ಲಿ ಒಳನುಸುಳುವಿಕೆ ಗಡಿ ಪ್ರದೇಶಗಳಲ್ಲಿ ಅತಿಕ್ರಮಣಗಳಿಗೆ ಕಾರಣವಾಗುತ್ತದೆ. ➡ಪುಟ ೮



ಗ್ರೇಡ್ ಆಧಾರಿತ ಡಿಎಲ್ ವ್ಯವಸ್ಥೆ ಶೀಘ್ರವೇ ಜಾರಿ

• **ಹೊಸದಿಲ್ಲಿ:** ರಸ್ತೆ ಸುರಕ್ಷತೆ ಸುಧಾರಿಸುವ ಮತ್ತು ಸಾವುಗಳನ್ನು ಕಡಿಮೆ ಮಾಡುವ ಗುರಿ ಹೊಂದಿರುವ ಗ್ರೇಡ್ ಆಧಾರಿತ ಚಾಲನಾ ಪರವಾನಗಿ ವ್ಯವಸ್ಥೆಯನ್ನು ಪರಿಚಯಿಸಲಾಗುವುದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ರಾಜಧಾನಿಯಲ್ಲಿ ರಸ್ತೆ ಸುರಕ್ಷತೆ ಕುರಿತ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, ಕಳೆದ ವರ್ಷ ರಸ್ತೆ ಅಪಘಾತಗಳಲ್ಲಿ 1.8 ಲಕ್ಷ ಮಂದಿ ಮೃತರಾಗಿದ್ದಾರೆ. ➡ಪುಟ ೮



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,85,000**(2,85,000) ಅಪರಂಜಿ ಚಿನ್ನ: **1,61,020**(1,61,890) ಆಭರಣ ಚಿನ್ನ: **1,47,600**(1,48,400) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **82,248**(27↓) ಎನ್‌ಎಸ್‌ಇ **25,496**(14↑)

$1 = ₹90.96

ಕಿರುಸುದ್ದಿ

ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ

ಮುಳಬಾಗಲು: ಸಂವಿಧಾನ ಪ್ರತಿಯೊಬ್ಬರಿಗೂ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ನಿರೂಪಿಸಲಾಗಿದೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಜಿ.ಹರೀಶ್ ತಿಳಿಸಿದರು. ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಂಟಿ ಸಹಯೋಗದಲ್ಲಿ ನಡೆದ ವಿಶ್ವ ಸಾಮಾಜಿಕ ನ್ಯಾಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾ, ಭಾರತ ಸಂವಿಧಾನ ಪ್ರತಿಯೊಬ್ಬ ಅಸಕ್ತರು, ಅವಕಾಶ ವಂಚಿತರು, ವೃದ್ಧಾಪ್ಯ ಹಿರಿಯ ನಾಗರಿಕರು ಮಹಿಳೆಯರು ಎಲ್ಲರಿಗೂ ಸಾಮಾಜಿಕ ನ್ಯಾಯ ದಡಿ ಬದುಕಲು ಅವಕಾಶ ನೀಡಿದೆ ಎಂದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಮುನಿವೆಂಕಟಪ್ಪ, ತಾಲೂಕು ವಕೀಲರ ಸಂಘದ ಅಧ್ಯಕ್ಷ ಎನ್.ಸತೀಶ್ ಕುಮಾರ್, ಮಾಜಿ ಅಧ್ಯಕ್ಷ ಎಂ.ಎಸ್.ಶ್ರೀನಿವಾಸರೆಡ್ಡಿ, ಉಪಾಧ್ಯಕ್ಷ ಸಿ.ವಿ.ಶ್ರೀನಿವಾಸ್ ಪ್ಯಾನಲ್ ವಕೀಲ ಎಂ.ರಮೇಶ್, ಸಹ ಪ್ರಾಧ್ಯಾಪಕಿ ಡಾ.ಎಂ.ಉಮಾ, ಕಾರ್ಮಿಕ ನಿರೀಕ್ಷಕಿ ಜನಾರ್ದನ, ಎಂ.ರಮ್ಯಾ ಭಾಗವಹಿಸಿದ್ದರು.

ಶಿಕ್ಷಣ ಇಲಾಖೆ ವಶಕ್ಕೆ 60 ಕೋಟಿ ರೂ. ಮೌಲ್ಯದ ಆಸ್ತಿ | ನ್ಯಾಯಾಲಯದ ಆದೇಶದಂತೆ ಕ್ರಮ

ಶಾಲೆ ಆಸ್ತಿ ಮೇಲೆ ಕಾವಲುಗಾರನ ಕಣ್ಣು

ನೆಲಮಂಗಲ: ಜಿಲ್ಲಾ ಮತ್ತು ಸತ್ರನ್ಯಾಯಾಲಯದ ಆದೇಶದಂತೆ ಗುರುಭವನದ 2.15 ಎಕರೆ ಜಾಗವನ್ನು ಖಾಸಗಿ ವ್ಯಕ್ತಿಯಿಂದ ಶಿಕ್ಷಣ ಇಲಾಖೆಗೆ ಅಧಿಕಾರಿಗಳು ವಶಕ್ಕೆ ಪಡೆದುಕೊಂಡರು. 60ಕೋಟಿ ರೂ. ಬೆಲೆ ಬಾಳುವ ಶಾಲೆಯ ಆಸ್ತಿಗೆ ಶಿಕ್ಷಕರ ಸಹಕಾರದೊಂದಿಗೆ ಕಾಂಪೌಂಡ್ ನಿರ್ಮಾಣ ಮಾಡಲಾಯಿತು.

ನಗರದ ಮುಖ್ಯರಸ್ತೆಯಲ್ಲಿರುವ ಗುರುಭವನದ ಬಳಿಯ ಸರ್ವೆ ನಂ 146/2ಎ1ರಲ್ಲಿ 1.32 ಎಕರೆ,146/3ರ 23 ಗುಂಟೆ ಸೇರಿದಂತೆ 2.15ಎಕರೆ ಜಾಗ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿದ್ದಾಗಿದೆ. ಪ್ರಸ್ತುತ ಸಹ ಶಾಲೆ ಹೆಸರಿನಲ್ಲಿ ಪಹಣಿ ಹಾಗೂ ದಾಖಲಾತಿಗಳಿವೆ. ಆದರೆ, ವೆಂಕಟರಮಣಯ್ಯ ಎಂಬುವವರ ಪತ್ನಿ ಬೆಳ್ಳೂರಮ್ಮ ಹಾಗೂ ಇತರರು ರಾಜ್ಯ ಉಚ್ಚನ್ಯಾಯಾಲಯಕ್ಕೆ 2012ರಲ್ಲಿ ನಮ್ಮ ಸ್ವತ್ತು ಎಂಬುದಾಗಿ ಪ್ರಕರಣ ದಾಖಲಿಸಿದ್ದು ವಿಚಾರಣೆ ನಡೆಸಿದ ನ್ಯಾಯಾಲಯ ಡಿಡಿಪಿಐ ನ್ಯಾಯಾಲಯಕ್ಕೆ ಹಸ್ತಾಂತರ ಮಾಡುತ್ತದೆ. ಅಲ್ಲಿ ಆಸ್ತಿಯ ಹಕ್ಕು ಬಾಧ್ಯತೆ ಬೆಳ್ಳೂರಮ್ಮ ಹಾಗೂ ಇತರರಿಗೆ ಇರುವುದಿಲ್ಲ ಎಂದು ಆದೇಶ ಮಾಡುತ್ತದೆ. ನಂತರ 2012ರ ಆದೇಶವನ್ನು ಪ್ರಶ್ನಿಸಿ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಎರಡು ಪ್ರಕರಣ ದಾಖಲಿಸುತ್ತಾರೆ,ಎರಡು ಪ್ರಕರಣವನ್ನುವಾದ ಆಲಿಸಿದ ನ್ಯಾಯಾಧೀಶರಾದ ಸಿದ್ದಲಿಂಗಪ್ರಭುರವರು ಈ ಸ್ವತ್ತು ಶಿಕ್ಷಣ ಇಲಾಖೆಯ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿದ್ದಾಗಿದೆ. ಪ್ರಸ್ತುತ ಸರ್ವೆನಂಬರ್ನ 2.15ಎಕರೆ ಜಾಗ ಹಾಗೂ ಮನೆಯನ್ನು ಖಾಲಿ ಮಾಡುವಂತೆ ಫೆ.13ರಂದು ಆದೇಶ ಮಾಡಲಾಗಿದೆ.



ಕಾವಲುಗಾರನೇ ಮಾಲೀಕನಾಗಲು ಹೋದ: ನಗರದ ಹೃದಯ ಭಾಗದಲ್ಲಿರುವ 2.15ಗುಂಟೆ ಜಾಗವನ್ನು ಸುಬ್ಬರಾವ್ ಎಂಬುವವರಿಂದ 1947ರಲ್ಲಿ ಸರಕಾರ ವಶಕ್ಕೆ ಪಡೆದು ಪರಿಹಾರ ನೀಡಲಾಗಿದೆ. ಆ ಜಾಗದಲ್ಲಿ ಶಾಲಾಮಕ್ಕಳ ಕೃಷಿ ಚಟುವಟಿಕೆ ಮಾಡಲು ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ನೀಡಿರುವರು. ಅಂದಿನಿಂದ ತೋಟಗಾರಿಕೆ ಬೆಳೆಯನ್ನು ಬೆಳೆದುಕೊಂಡು ಬರುವಾಗ 1974ರಲ್ಲಿ ಸರಕಾರ ವೆಂಕಟರಮಣಪ್ಪ ಎಂಬುವವರನ್ನು ಕೃಷಿ ಜಮೀನು ನೋಡಿಕೊಳ್ಳಲು ಕಾವಲುಗಾರನಾಗಿ ಇಲಾಖೆ ನೇಮಕ ಮಾಡಿಕೊಳ್ಳುತ್ತದೆ.

ಕೃಷಿ ಶಿಕ್ಷಕರನ್ನು ನೇಮಕ ಮಾಡಿ ಮಕ್ಕಳಿಗೆ ಆ ಜಮೀನಿನಲ್ಲಿ ಶಾಲಾ ಕೃಷಿ ಚಟುವಟಿಕೆ ಹೇಳಿಕೊಟ್ಟು ಬೆಳೆಯಿಂದ ಬರುವ ಹಣವನ್ನು ಸರಕಾರಕ್ಕೆ ಜಮೆ ಮಾಡಿಕೊಂಡು ಬರುತ್ತಾರೆ. ಇದೇ ಜಾಗದಲ್ಲಿ 1985ರಲ್ಲಿ ಗುರುಭವನವನ್ನು ಸಹ ನಿರ್ಮಾಣ ಮಾಡಲಾಗುತ್ತದೆ. ಅನಂತರ 2002ರಲ್ಲಿ ವೆಂಕಟರಮಣಪ್ಪ ಬೆಳೆಯನ್ನು ಮಾರಾಟ ಮಾಡಿಕೊಳ್ಳುತ್ತಾರೆ ಎಂಬ ದೂರಿನ ಅನ್ವಯ ಯಂಟಗನಹಳ್ಳಿ ಶಾಲೆಗೆ ವರ್ಗಾವಣೆ ಮಾಡುತ್ತಾರೆ.

> ನಮ್ಮ ಶಿಕ್ಷಣ ಇಲಾಖೆಯ ಆಸ್ತಿಯನ್ನು ಜಿಲ್ಲಾ ನ್ಯಾಯಾಲಯದ ಆದೇಶದಂತೆ ವಶಕ್ಕೆ ಪಡೆದಿದ್ದೇವೆ,. ಶಿಕ್ಷಕರು, ಶಿಕ್ಷಕರ ಸಂಘಗಳ ಸಹಕಾರದಿಂದ ಕಾಂಪೌಂಡ್ ನಿರ್ಮಾಣ ಸಹ ಮಾಡಲಾಗಿದೆ
>
> ■ ಬೈಲಾಂಜಿನಪ್ಪ ಡಿಡಿಪಿಐ, ಬೆಂಗಳೂರು ಗ್ರಾಮಾಂತರ ಜಿಲ್ಲೆ

> ನಮ್ಮ ಇಲಾಖೆಯಲ್ಲಿ ಕಾವಲುಗಾರನಾಗಿ ಕೆಲಸ ಮಾಡಿದ ವ್ಯಕ್ತಿ ನಮ್ಮದೇ ಜಾಗವೆಂದು ಪ್ರಕರಣ ದಾಖಲಿಸಿದ್ದರು, ನಮ್ಮ ಶಾಲೆಯ ಆಸ್ತಿಗಾಗಿ ಬಹಳಷ್ಟು ವರ್ಷಗಳ ಕಾಲ ನಿರಂತರ ಹೋರಾಟ ಮಾಡಲಾಗಿದೆ. ನ್ಯಾಯಾಲಯ ಇಲಾಖೆ ವ್ಯಾಪ್ತಿಗೆ ಜಾಗವನ್ನು ನೀಡಿದ್ದು ವಶಕ್ಕೆ ಪಡೆಯಲಾಗಿದೆ.
>
> ■ - ಕೆ.ಸಿ ರಮೇಶ್, ಬಿಇಒ ನೆಲಮಂಗಲ

2008ರಲ್ಲಿ ವೆಂಕಟರಮಣಪ್ಪ ನಮ್ಮದೇ ಜಾಗವೆಂದು ನೆಲಮಂಗಲ ನ್ಯಾಯಾಲಯದಲ್ಲಿ ದಾವೆ ಹಾಕಿ ದಾಖಲೆ ಇಲ್ಲದೆ ವಾಪಸ್ ಪಡೆದುಕೊಳ್ಳುತ್ತಾರೆ. ನಂತರ 2012ರಿಂದ ವೆಂಕಟರಮಣಪ್ಪ ಪತ್ನಿ ಬೆಳ್ಳೂರಮ್ಮ ಪ್ರಕರಣ ದಾಖಲಿಸಿ ಡಿಡಿಪಿಐ ಸೋತಿದ್ದರೆ. ಜಿಲ್ಲಾ ಕೋರ್ಟ್ ನಿಮ್ಮ ಆಸ್ತಿಯಲ್ಲವೆಂದು ಲಕ್ಷ ದಂಡ ಸಹ ವಿಧಿಸಿದ್ದಾರೆ. ಶಿಕ್ಷಣ ಇಲಾಖೆ ಜಾಗ ವಶಕ್ಕೆ ಪಡೆಯಲು ಮೀಸಲು ಪೊಲೀಸ್ ಸಿಬ್ಬಂದಿ ಬಿಗಿಭದ್ರತೆಯನ್ನು ನೀಡಲಾಗಿದೆ.

ಕಿರಿಯ ವಿಜ್ಞಾನಿ ಅಭಿಷೇಕ್‌ಗೌಡಗೆ ಪ್ರಶಸ್ತಿ



ಬೆಂಗಳೂರು: ನಗರದ ಜವಾಹರ್ ಲಾಲ್ ನೆಹರೂ ತಾರಾಲಯದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಬಿಜಿಎಸ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕಾಲೇಜು, ಮಹಾಲಕ್ಷ್ಮಿಪುರಂನ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಅಭಿಷೇಕ್‌ಗೌಡ .ಎಸ್ ಹಾಗೂ ಅವರ ತಂಡ ಐಒಟಿ ತಂತ್ರಜ್ಞಾನದ ಆಧಾರಿತ ಸಂಶೋಧನಾ ಕಾರ್ಯಕ್ಕಾಗಿ ಕಿರಿಯ ವಿಜ್ಞಾನಿಗಳ ಸಾಧನೆಗೆ ನೀಡುವ ಡಾ.ಎಸ್.ಕೆ.ಶಿವಕುಮಾರ್ ಪ್ರಶಸ್ತಿಯನ್ನು ಪಡೆದರು. ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಸತೀಶ.ಜಿ ಮಾರ್ಗದರ್ಶನದಲ್ಲಿ, ಹೈಬ್ರಿಡ್ ಎಕೋ ಐಎಸ್ಎ ಶೀರ್ಷಿಕೆಯ ಈ ಯೋಜನೆ ಪ್ಲಗ್-ಇನ್ ಹೈಬ್ರಿಡ್ ವಾಹನಗಳಿಗಾಗಿ ಸ್ವಯಂಚಾಲಿತ ವೇಗ ಮಿತಿ ಏಕೀಕರಣ ವ್ಯವಸ್ಥೆಯನ್ನು ಒಳಗೊಂಡ ನವೀನ ಸಂಶೋಧನೆ ಮಾಡಲಾಗಿದೆ.

ಪ್ರಶಸ್ತಿಯನ್ನು ಸಚಿವರಾದ ಡಾ.ಕೆ.ಸುಧಾಕರ್, ಬೋಸ ರಾಜು, ಮಧುಬಂಗಾರಪ್ಪ, ಇಸ್ರೋ ಮಾಜಿ ಅಧ್ಯಕ್ಷ ಡಾ.ಎ.ಎಸ್. ಕಿರಣ್ ಕುಮಾರ್, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ರಾಜಾಸಾಬ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನಿರ್ದೇಶಕ ಸದಾಶಿವ ಪ್ರಭು, ಸರ್ಕಾರದ ಕಾರ್ಯದರ್ಶಿ ಡಾ.ಎನ್. ಮಂಜುಳಾ ಹಾಜರಿದ್ದರು.

ಐತಿಹಾಸಿಕ ಸ್ಥಳದ ಬಗ್ಗೆ ಅರಿವು ಮೂಡಿಸಿ

ಕೋಲಾರ: ಸರ್ಕಾರಿ ಶಾಲೆಗಳ ಹಿಂದುಳಿದ, ಅಲ್ಪಸಂಖ್ಯಾತ,ಇತರೆ ವರ್ಗಗಳ ವಿದ್ಯಾರ್ಥಿಗಳ ಕರ್ನಾಟಕ ದರ್ಶನ ಶೈಕ್ಷಣಿಕ ಪ್ರವಾಸಕ್ಕೆ ಗುರುವಾರ ಬೆಳಗ್ಗೆ ಶಾಲಾ ಶಿಕ್ಷಣ ಇಲಾಖೆ ಆಶ್ರಯದಲ್ಲಿ ಕರ್ನಾಟಕ ಪ್ರವಾಸೋದ್ಯಮ ನಿಗಮದ ಅಧಿಕಾರಿ ಶಾಂತಕುಮಾರ್, ಬಿಇಒ ಕಚೇರಿ ಸುದರ್ಶನ್ ಹಸಿರು ನಿಶಾನೆ ತೋರಿದರು.

ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮುಂದೆ ತಾಲ್ಲೂಕಿನ ವಿವಿಧ ಶಾಲೆಗಳಿಂದ ಆಗಮಿಸಿದ್ದ ತಾಲ್ಲೂಕಿನ ಒಟ್ಟು 92 ವಿದ್ಯಾರ್ಥಿಗಳನ್ನು ಹೊತ್ತ ಸಾರಿಗೆ ಸಂಸ್ಥೆಯ ಎರಡು ಬಸ್ಸುಗಳಿಗೆ ಪೂಜೆ ಸಲ್ಲಿಸುವ ಮೂಲಕ ಕರ್ನಾಟಕ ದರ್ಶನ ಪ್ರವಾಸಕ್ಕೆ ಶುಭ ಕೋರಲಾಯಿತು. ಪ್ರವಾಸೋದ್ಯಮ ಅಧಿಕಾರಿ ಶಾಂತಕುಮಾರ್ ಮಾತನಾಡಿ, ಮಕ್ಕಳಲ್ಲಿ ಪ್ರಾಚ್ಯಪ್ರಜ್ಞೆ ಹೆಚ್ಚಲು ಹಾಗೂ ಸಾಮಾನ್ಯ ಜ್ಞಾನ ವೃದ್ಧಿಗೆ ಈ ಪ್ರವಾಸ ಸಹಕಾರಿಯಾಗಿದೆ. ನಮ್ಮ ರಾಜ್ಯದ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದರು.

ಈ ಪ್ರವಾಸದಲ್ಲಿ ಮಕ್ಕಳ ಪಠ್ಯಕ್ಕೆ ಅನುಕೂಲವಾಗುವಂತೆ ಪ್ರೇಕ್ಷಣೀಯ ಸ್ಥಳಗಳ ಆಯ್ಕೆ ಮಾಡಿದ್ದು, ಮಕ್ಕಳ ಸುರಕ್ಷತೆಗೆ ಹೆಚ್ಚಿನ ನಿಗಾ ವಹಿಸುವುದಾಗಿ ತಿಳಿಸಿದರು.



ಪ್ರವಾಸದಲ್ಲಿ ಶ್ರವಣಬೆಳಗೊಳ, ಬೇಲೂರು, ಹಳೇಬೀಡು, ಮುರುಡೇಶ್ವರ, ಗೋಕರ್ಣ, ಬನವಾಸಿ, ಯಾಣ ಮತ್ತಿತರ ಪ್ರವಾಸಿ ತಾಣಗಳನ್ನು ಮಕ್ಕಳು ನಾಲ್ಕು ದಿನಗಳ ಸುತ್ತಿ ವೀಕ್ಷಿಸಿ ಬರಲಿದ್ದಾರೆ. ಮಕ್ಕಳೊಂದಿಗೆ ಪ್ರವಾಸದಲ್ಲಿ ವ್ಯವಸ್ಥಾಪಕರಾಗಿ ಅರಾಭಿಕೊತ್ತನೂರು ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ ಕೆ.ಲೀಲಾ, ಬೆಳಮಾರನಹಳ್ಳಿ ಶಾಲಾ ಶಿಕ್ಷಕಿ ಅಂಬಿಕಾ, ಮದ್ದೇರಿಯ ಮಲ್ಲಿಕಾರ್ಜುನ್, ಗೈಡ್ ಜಗದೀಶ್ ಮತ್ತಿತರರು ತೆರಳಲಿದ್ದಾರೆ ಎಂದು ತಿಳಿಸಿದರು.

ಪ್ರವಾಸಕ್ಕೆ ಚಾಲನೆ ನೀಡುವ ಸಂದರ್ಭದಲ್ಲಿ, ಮುಖ್ಯಶಿಕ್ಷಕ ದೇವರಾಜ್, ಪದ್ಮಾವತಿ, ಯಶೋಧ, ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ವಿ.ಮುರಳಿಮೋಹನ್, ಶಿಕ್ಷಕರಾದ ರಮೇಶ್, ವೇಮಗಲ್ ಮುನಿರಾಜ್, ಕ್ಯಾಲನೂರು ನಾಗರಾಜ್ ಮತ್ತಿತರರಿದ್ದರು.

ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ ಕುರಿತು ಕಾರ್ಯಾಗಾರ

ಸಮನ್ವಯದಿಂದ ಜೀತ ಪದ್ಧತಿ ನಿರ್ಮೂಲನೆ

ದೇವನಹಳ್ಳಿ: ಜೀತ ಪದ್ಧತಿಯಂತಹ ಸಾಮಾಜಿಕ ಪಿಡುಗು ಕೆಲವು ಭಾಗದಲ್ಲಿ ಇಂದಿಗೂ ಜೀವಂತವಾಗಿದೆ. ಅಧಿಕಾರಿಗಳು ಹಾಗೂ ಸಾರ್ವಜನಿಕರ ಸಮನ್ವಯತೆಯಿಂದ ಜೀತ ಪದ್ಧತಿ ನಿರ್ಮೂಲನೆ ಮಾಡಲು ಸಾಧ್ಯ ಎಂದು ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ ಹೇಳಿದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿಯಿಂದ ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ 'ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ: ಒಂದು ದಿನದ ಕಾರ್ಯಾಗಾರ'ವನ್ನು ಉದ್ಘಾಟಿಸಿ ಅವರು ಮಾತನಾಡಿ, ಹಿಂದೆ ಜೀತ ಪದ್ಧತಿಯು ಹೆಚ್ಚಾಗಿ ಕಂಡು ಬರುತ್ತಿತ್ತು. ಕಾಲಾ ಕ್ರಮೇಣ ಕಡಿಮೆ ಆಗುತ್ತಿದೆ. ಆದರೂ ಸಹ ಸಾಮಾಜಿಕ-ಆರ್ಥಿಕ ಅಸಮಾನತೆಯಿಂದಾಗಿ ಇಂದಿಗೂ ಜೀತ ಪದ್ಧತಿ ವ್ಯವಸ್ಥೆ ಜೀವಂತವಾಗಿದೆ ಎಂದರು. ಶಿಕ್ಷಣ, ಕಾನೂನು, ಜಾಗೃತಿ, ಸಮಾನತೆಯಿಂದ ಜೀತ ಪದ್ಧತಿ ನಿರ್ಮೂಲನೆ ಮಾಡಲು ಸಾಧ್ಯ. ಜೀತ ಪದ್ಧತಿಯ ನಿರ್ಮೂಲನೆಗೆ ವಿವಿಧ ಇಲಾಖೆಗಳು, ಸ್ವಯಂ ಸೇವಕ ಸಂಘಗಳು, ಸಮುದಾಯಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಜೀತ ಪದ್ಧತಿಗೆ ಒತ್ತಾಯಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಎಲ್ಲಾದರೂ ಜೀತ ಪದ್ಧತಿ ವ್ಯವಸ್ಥೆ ಕಂಡುಬಂದಲ್ಲಿ ಅಥವಾ ಬಲವಂತವಾಗಿ ದುಡಿಸಿಕೊಳ್ಳುವ ಪರಿಸ್ಥಿತಿ ಕಂಡು ಬಂದಲ್ಲಿ ಸಾರ್ವಜನಿಕರು ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಿ ಎಂದರು. ಶಾಶ್ವತ ಪುನರ್ವಸತಿ ಕಲ್ಪಿಸುವ ಸಂಬಂಧ ಜೀತ ವಿಮುಕ್ತರಿಗೆ ಎಕರೆ ಭೂಮಿಯನ್ನು ಉಚಿತವಾಗಿ ನೀಡಲು ಕೋರಿ ಜಿಲ್ಲಾಧಿಕಾರಿ ಪತ್ರ ಬರೆಯಲಾಗಿದೆ. ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ (ಫಲಾನುಭವಿ ಆಧಾರಿತ) ಸೌಲಭ್ಯ ಕಲ್ಪಿಸಲು ಅಗತ್ಯ ಕ್ರಮ ವಹಿಸುವಂತೆ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿ, ಡಾ. ಕಿರಣ ಕಮಲ್ ಪ್ರಸಾದ್ ಅವರು ಮಾತನಾಡಿ, ಜೀತ ಕಾರ್ಮಿಕ ಪದ್ಧತಿ (ರದ್ದತಿ) ಕಾಯ್ದೆ 1976 ಜೀತ ಪದ್ಧತಿ ವ್ಯಾಖ್ಯಾನ, ಜೀತ ಕಾರ್ಮಿಕ ಪದ್ಧತಿಗೆ ಒತ್ತಾಯಿಸುವವರ ವಿರುದ್ಧ ಕಾಯ್ದೆಯಡಿ ನಿಗದಿಗೊಳಿಸಿರುವ ಕಾನೂನು ಶಿಕ್ಷೆ, ಜೀತ ವಿಮುಕ್ತರ ಪುನರ್ವಸತಿ ಯೋಜನೆ, ಜೀತ ಕಾರ್ಮಿಕರ ಗುರುತಿಸುವಿಕೆ, ರಕ್ಷಣೆ ಹಾಗೂ ಪುನರ್ವಸತಿ ಕುರಿತಂತೆ ಕೇಂದ್ರ ಸರ್ಕಾರವು ಹೊರಡಿಸಿರುವ ಮಾದರಿ ಕಾರ್ಯವಿಧಾನಗಳ ಕುರಿತು ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ ಅವರು ಜೀತ ಪದ್ಧತಿ ನಿರ್ಮೂಲನೆ ಪ್ರತಿಜ್ಞಾ ವಿಧಿ ಬೋಧಿಸಿದರು. ಜಿಪಂ ಯೋಜನಾ ನಿರ್ದೇಶಕ ವಿಠ್ಠಲ್ ಕಾವ್ಳೆ, ಜಿಲ್ಲಾ ಮೇಲುಸ್ತುವಾರಿ ಸಮಿತಿ ಸದಸ್ಯ ಮ್ಯಾಥ್ಯೂ ಮುನಿಯಪ್ಪ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ, ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.



157 ಜೀತದಾಳುಗಳಿಗೆ ಪುನರ್ವಸತಿ

ಜಿಲ್ಲೆಯನ್ನು 2020 ರಲ್ಲಿ ಜೀತ ಮುಕ್ತ ಎಂದು ಘೋಷಿಸಲಾಗಿದೆ. 164 ಜೀತದಾಳುಗಳನ್ನು ವಿಮುಕ್ತಿಗೊಳಿಸಲಾಗಿದೆ, ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ 157 ಜೀತದಾಳುಗಳಿಗೆ ತಲಾ 20,000 ರೂ.ಗಳಂತೆ 31.40ಲಕ್ಷ ರೂ. ನೀಡಲಾಗಿದೆ. ಇಬ್ಬರಿಗೆ ನಿವೇಶನ ನೀಡಲಾಗಿದೆ. 43 ಜನರಿಗೆ ವಸತಿ ಒದಗಿಸಲಾಗಿದೆ. 54 ಜನರಿಗೆ ನರೇಗಾ ಜಾಬ್ ಕಾರ್ಡ್, 156 ಜನರಿಗೆ ಮತದಾನ ಗುರುತಿನ ಚೀಟಿ, 112 ಜನರಿಗೆ ಬ್ಯಾಂಕ್ ಗಳಿಂದ ಸಾಲ ಧನಸಹಾಯ ನೀಡಲಾಗಿದೆ.

ಯೋಗಿನಾರೇಯಣ ಯತೀಂದ್ರರ 300ನೇ ಜಯಂತಿ

ಮಾ.3ಕ್ಕೆ ಕೈವಾರದಲ್ಲಿ ಬ್ರಹ್ಮರಥೋತ್ಸವ

ಕೋಲಾರ: ಶ್ರೀಕ್ಷೇತ್ರ ಕೈವಾರದ ಶ್ರೀಯೋಗಿ ನಾರೇಯಣ ಯತೀಂದ್ರರ 300ನೇ ಜಯಂತ್ಯುತ್ಸವದ ವಿಶೇಷ ಕಾರ್ಯಕ್ರಮವನ್ನು ಮಾ.2ರಿಂದ ಮಾ.4ವರೆಗೆ ಮೂರು ದಿನಗಳ ಕಾಲ ಆಯೋಜಿಸಲಾಗಿದೆ. ಮಾ.3ರಂದು ಬ್ರಹ್ಮ ರಥೋತ್ಸವ ನಡೆಯಲಿದೆ ಎಂದು ಶ್ರೀ ಯೋಗಿ ನಾರೇಯಣ ನಾದಸುಧಾರಸ ಸಂಕೀರ್ತನಾ ಯೋಜನೆ ಸಂಚಾಲಕ ವಾನರಾಶಿ ಬಾಲಕೃಷ್ಣ ಭಾಗವತರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಶ್ರೀಗಳು 1726ರ ಫೆಬ್ರವರಿ ಎರಡು ಪಾಲ್ಗುಣ ಮಾಸದ ಹುಣ್ಣಿಮೆಯಂದು ಜನ್ಮ ತಾಳಿದರು. ಇವರ ತ್ರಿಶತಮಾನ ಜಯಂತ್ಯುತ್ಸವದ ಪ್ರಯುಕ್ತ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು. ಮಾ.2ರ ಸೋಮವಾರ ಬೆಳಗ್ಗೆ 5.30ಕ್ಕೆ ಸುಪ್ರಭಾತ, ಗೋಪೂಜೆ. ನಾದಸ್ವರದೊಂದಿಗೆ ಪ್ರಾರಂಭಿಸಲಾಗುವುದು. 9 ಗಂಟೆಗೆ ತಾತಯ್ಯನವರಿಗೆ ವಿಶೇಷ ಅಭಿಷೇಕ ,11.30 ಗಂಟೆಗೆ ಧರ್ಮಾಧಿಕಾರಿಗಳಿಂದ ಆತ್ಮಬೋಧಾಮೃತ ವಿಶೇಷ ಪ್ರವಚನ , ಶ್ರೀಗಳ ರಚನೆಯ ಶ್ರೀಕೃಷ್ಣ ಚರಿತ ತತ್ತ್ವಾಮೃತ ಯೋಗಸಾರಮು ನೂತನ ಗ್ರಂಥದ ಲೋಕಾರ್ಪಣೆ ಡಾ.ಜೋಸ್ಯುಲ ಸದಾನಂದ ಶಾಸ್ತ್ರಿಗಳು ವ್ಯಾಖ್ಯಾನಿಸುವರು. ಮಧ್ಯಾಹ್ನ 1.30ರ ನಂತರದಲ್ಲಿ ಕಲಾವಿದರಿಂದ ನಾಮ ಸಂಕೀರ್ತನಾ ಕಾರ್ಯಕ್ರಮಗಳು ನಡೆಯಲಿದೆ ಎಂದರು.



ಮಾ.3ರ ಮಂಗಳವಾರ ಸದ್ಗುರು ಶ್ರೀಯೋಗಿ ನಾರೇಯಣ ತಾತಯ್ಯನವರ ಜಯಂತಿಯ ಪ್ರಾತಃಕಾಲದಲ್ಲಿ ಶ್ರೀದೇವಿ ಭೂದೇವಿ ಸಮೇತ ಶ್ರೀ ಅಮರನಾರೇಯಣಸ್ವಾಮಿ, ಸದ್ಗುರು ಶ್ರೀಯೋಗಿ ನಾರೇಯಣ ತಾತಯ್ಯನವರಿಗೆ ವಿಶೇಷ ಅಭಿಷೇಕ ಅಷ್ಟಾವಧಾನ ಸೇವೆ ಮಹಾಮಂಗಳಾರತಿ ನಂತರ ಶ್ರೀತಾತಯ್ಯನವರನ್ನು ಅಲಂಕೃತ ಪಲ್ಲಕ್ಕಿಯೊಂದಿಗೆ ಶ್ರೀ ಅಮರನಾರೇಯಣಸ್ವಾಮಿ ದೇವಾಲಯಕ್ಕೆ ಸಂಕೀರ್ತನೆಯೊಂದಿಗೆ ಕರೆತರಲಾಗುವುದು.

6 ಗಂಟೆಗೆ ಸ್ವಾಮಿಯವರಿಗೆ ಕೃಷ್ಣಗಂಧೋತ್ಸವ ಸೇವೆಯನ್ನು ಸಮರ್ಪಿಸಲಾಗುವುದು, 7-30ಕ್ಕೆ ಅಮರನಾರೇಯಣಸ್ವಾಮಿ ಬ್ರಹ್ಮ ರಥೋತ್ಸವವನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಗುವುದು ಎಂದರು. ಅಂದು ಸಂಜೆ ಶ್ರೀ ಕ್ಷೇತ್ರ ಆಲಂಬಗಿರಿಯಲ್ಲಿ ಗಿರಿಪ್ರದಕ್ಷಿಣೆ-ದೀಪೋತ್ಸವ, 7ಗಂಟೆಗೆ ಜಮುನ ಭಗವತರಾಣಿಯವರಿಂದ ಹರಿಕಥೆ, ರಾತ್ರಿ 9 ಗಂಟೆಗೆ ಶ್ರೀ ಯೋಗಿ ನಾರೇಯಣ ಕೃಪಾ ಪೋಷಿತ ನಾಟಕ ಮಂಡಳಿಯವರಿಂದ 'ದಾನವೀರಶೂರ ಕರ್ಣ' ಎಂಬ ಪೌರಾಣಿಕ ನಾಟಕ ಏರ್ಪಡಿಸಲಾಗಿದೆ. ಮಾ.4ರ ಬುಧವಾರ ಸದ್ಗುರುಗಳಿಗೆ ಬೆಳಗ್ಗೆ 9 ಗಂಟೆಗೆ ವಿಶೇಷ ಅಭಿಷೇಕ, ನಾಮಸಂಕೀರ್ತನೆ ಮಧ್ಯಾಹ್ನ 1-30ಕ್ಕೆ ಸದ್ಗುರು ಶ್ರೀ ಯೋಗಿ ನಾರೇಯಣ ತಾತಯ್ಯನವರ ರಥೋತ್ಸವ ಸಂಜೆ 7ಗಂಟೆಗೆ ಪರಿಮಳ ಅರಳು ಮಲ್ಲಿಗೆ ತಂಡದವರಿಂದ ಭರತನಾಟ್ಯ, ರಾತ್ರಿ 9 ಗಂಟೆಗೆ ಶ್ರೀ ಬಸವಣ್ಣ ಕನ್ನಡ ಕಲಾ ತಂಡ ನರಸಾಪುರ ಮತ್ತು ಶ್ರೀಮದ್ದೇರಿ ಟಿ.ಮುನಿರೆಡ್ಡಿ ತಂಡದವರಿಂದ ಶ್ರೀ ಕೃಷ್ಣ ಸಂಧಾನ ಹಮ್ಮಿಕೊಂಡಿದೆ.



ಕರುನಾಡ ಹೆಮ್ಮೆಯ ಜನನಾಯಕ, ಹೋರಾಟವನ್ನೇ
ಉಸಿರಾಗಿಸಿಕೊಂಡ ದಣಿವರಿಯದ ಧೀಮಂತ ನಾಯಕರಾದ
ಹಾಗೂ ಜನಪ್ರಿಯ ಮಾಜಿ ಮುಖ್ಯಮಂತ್ರಿಗಳಾದ
ಶ್ರೀ ಬಿ. ಎಸ್. ಯಡಿಯೂರಪ್ಪ
ರವರಿಗೆ
ಜನುಮದಿನದ
ಹಾರ್ದಿಕ ಶುಭಾಶಯಗಳು
ಶುಭ ಕೋರುವವರು
ಶ್ರೀ ಧೀರಜ್ ಮುನಿರಾಜ್
ಶಾಸಕರು
ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ,
ಅಧ್ಯಕ್ಷರು,
ಭಾರತೀಯ ಜನತಾ ಪಾರ್ಟಿ
ಯುವ ಮೋರ್ಚಾ ಕರ್ನಾಟಕ.

ಸಂಪಾದಕೀಯ

ತಪ್ಪಿತಸ್ಥರ ವಿರುದ್ಧ ಕ್ರಮ ಆಗಲಿ

ಶಿಕ್ಷಣ ವ್ಯವಸ್ಥೆ ಒಂದು ರಾಷ್ಟ್ರದ ಮನಸ್ಸನ್ನು ರೂಪಿಸುವ ಮಹತ್ತರ ಸಾಧನವಾಗಿದೆ. ಆದ್ದರಿಂದ ಪಠ್ಯಪುಸ್ತಕಗಳಲ್ಲಿ ಒಳಗೊಳ್ಳುವ ಪ್ರತಿಯೊಂದು ವಾಕ್ಯವೂ ಪರಿಶೀಲಿತ, ಸಮತೋಲನಯುತ ಹಾಗೂ ಜವಾಬ್ದಾರಿಯುತವಾಗಿರಬೇಕು. 8ನೇ ತರಗತಿಯ ಸಾಮಾಜಿಕ ವಿಜ್ಞಾನ ಪಠ್ಯಪುಸ್ತಕದ ಸುತ್ತ ಉದ್ಭವಿಸಿದ ವಿವಾದ ಇದೇ ಮೂಲಭೂತ ಪ್ರಶ್ನೆಯನ್ನು ಮತ್ತೆ ಮುಂದಿರಿಸಿದೆ. ನ್ಯಾಯಾಂಗದಂತಹ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡುವುದು ಅಗತ್ಯವೇ ಸರಿ. ಆದರೆ ಅದು ವಾಸ್ತವಾಧಾರಿತ, ಸಂದರ್ಭಸೂಕ್ತ ಮತ್ತು ಸಂವೇದನಾಶೀಲವಾಗಿರಬೇಕು.

ಪ್ರಶ್ನೆ ಕೇವಲ ಒಂದು ಅಧ್ಯಾಯದ ಬಗ್ಗೆ ಅಲ್ಲ, ಪ್ರಶ್ನೆ ಶಿಕ್ಷಣದ ದಿಕ್ಕಿನ ಬಗ್ಗೆ. ಯುವ ಮನಸ್ಸುಗಳಿಗೆ ಯಾವ ರೀತಿಯ ಸಂದೇಶವನ್ನು ನೀಡುತ್ತಿದ್ದೇವೆ? ಸಂಸ್ಥೆಗಳ ಮೇಲೆ ನಂಬಿಕೆಯನ್ನು ಬಲಪಡಿಸುವುದೇ, ಅಥವಾ ಸಂಶಯದ



ಬೀಜ ಬಿತ್ತುವುದೇ? ವಿಮರ್ಶಾತ್ಮಕ ಚಿಂತನೆ ಬೆಳೆಸುವುದು ಶಿಕ್ಷಣದ ಉದ್ದೇಶ. ಆದರೆ ಅದನ್ನು ನಿರ್ದಿಷ್ಟ ದೃಷ್ಟಿಕೋನದ ಮೂಲಕ ಒತ್ತಾಯಿಸುವುದು ಸೂಕ್ತವಲ್ಲ. ವಾಸ್ತವಗಳ ಸಮತೋಲನ, ವಿವರಣೆಗಳ ನಿಖರತೆ ಮತ್ತು ಪದಪ್ರಯೋಗದ ಜಾಣ್ಮೆ ಇಲ್ಲಿ ನಿರ್ಣಾಯಕ.

ಈ ವಿವಾದವು ಮತ್ತೊಂದು ಗಂಭೀರ ಅಂಶವನ್ನೂ ಬಹಿರಂಗಪಡಿಸಿದೆ ಪಠ್ಯ ವಿಷಯದ ಮೇಲ್ವಿಚಾರಣೆ. ಪರಿಶೀಲನಾ ವ್ಯವಸ್ಥೆಗಳು ಎಷ್ಟು ಕಟ್ಟುನಿಟ್ಟಾಗಿವೆ? ವಿಷಯ ರಚನೆ, ಸಂಪಾದನೆ, ಅಂತಿಮ ಅನುಮೋದನೆ ಪ್ರತಿಯೊಂದು ಹಂತವೂ ದೋಷರಹಿತವಾಗಿರಬೇಕಾದರೆ ಸಂಸ್ಥಾತ್ಮಕ ಜವಾಬ್ದಾರಿ ಸ್ಪಷ್ಟವಾಗಬೇಕು. ಶಿಕ್ಷಣದ ವೇದಿಕೆಯಲ್ಲಿ ಅನಿರೀಕ್ಷಿತ ತಪ್ಪುಗಳಿಗೆ ಅವಕಾಶ ಇರಬಾರದು.

ಶಾಲಾ ಪಠ್ಯಪುಸ್ತಕಗಳು ಕೇವಲ ಜ್ಞಾನ ನೀಡುವ ಸಾಧನಗಳಲ್ಲ; ಅವು ಮೌಲ್ಯಗಳ ಬೀಜ ಬಿತ್ತುವ ನೆಲ. ಆದ್ದರಿಂದ ಶಿಕ್ಷಣ ನೀತಿ ರೂಪಿಸುವವರಿಂದ ಹಿಡಿದು ವಿಷಯ ತಯಾರಕರವರೆಗೆ ಎಲ್ಲರೂ ಹೆಚ್ಚಿನ ಜವಾಬ್ದಾರಿಯನ್ನು ಅರಿತು ನಡೆಬೇಕು. ಯುವಜನರ ಮನಸ್ಸು ರಾಷ್ಟ್ರದ ಭವಿಷ್ಯ. ಆ ಭವಿಷ್ಯವನ್ನು ಗೊಂದಲದಿಂದಲ್ಲ, ಸ್ಪಷ್ಟತೆ ಮತ್ತು ಸಮತೋಲನದಿಂದ ರೂಪಿಸುವುದು ಸಮಯದ ಅವಶ್ಯಕತೆ.

ಆದರೆ, ಎನ್‌ಸಿಇಆರ್‌ಟಿ ರೂಪಿಸಿದ ಈ ಪಠ್ಯಪುಸ್ತಕದಲ್ಲಿ ಹೇಗೆ ಅಷ್ಟು ದೊಡ್ಡ ವಿಚಾರ ಬಂದಿತು ಎಂಬುದೇ ಈಗಿನ ಪ್ರಶ್ನೆ. ಈಗಾಗಲೇ ಕಳೆದ ಕೇಂದ್ರ ಸಂಪುಟ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗ್ಗೆ ಅತೀವ ಬೇಸರ ವ್ಯಕ್ತಪಡಿಸಿರುವ ಬಗ್ಗೆಯೂ ತಿಳಿದುಬಂದಿದೆ. ಆಗ ಸ್ವತಃ ಮೋದಿ ಅವರೇ, ಇಂಥ ವಿಚಾರಗಳಲ್ಲಿ ಹೇಗೆ ನಿರ್ಲಕ್ಷ್ಯ ವಹಿಸಲಾಗಿದೆ ಎಂಬ ಬಗ್ಗೆ ಪ್ರಶ್ನೆಯನ್ನೂ ಎತ್ತಿದ್ದಾರೆ. ಜತೆಗೆ, ಇದರಲ್ಲಿ ಲೋಪ ಮಾಡಿರುವ ಎನ್‌ಸಿಇಆರ್‌ಟಿ ಅಧಿಕಾರಿಗಳನ್ನು ಹೊಣೆ ಮಾಡುವಂತೆಯೂ ಖಡಕ್ ಆಗಿಯೇ ಸೂಚಿಸಿದ್ದಾರೆ. ಈಗಾಗಲೇ, ಬುಧವಾರವೇ ಸುಪ್ರೀಂಕೋರ್ಟ್ ಈ ಬಗ್ಗೆ ತೀರಾ ಖಾರವಾಗಿಯೇ ಪ್ರಶ್ನಿಸಿದ್ದು, ಪುಸ್ತಕವನ್ನೇ ನಿಷೇಧಿಸಿದೆ. ಭಾರತದಂಥ ಪ್ರಜಾಪ್ರಭುತ್ವದಲ್ಲಿ ಸದ್ಯ ಜನ ಅತೀವವಾಗಿ ನಂಬಿಕೊಂಡಿರುವುದು ನ್ಯಾಯಾಂಗ ವ್ಯವಸ್ಥೆಯನ್ನೇ. ಹೀಗಾಗಿ ಯಾವುದೇ ಕಾರಣಕ್ಕೂ ಜನರಲ್ಲಿ ನ್ಯಾಯಾಂಗ ವ್ಯವಸ್ಥೆಯ ಮೇಲೆ ಸಂಶಯ ಮೂಡಿಸುವಂಥ ಕೆಲಸ ಮಾಡಬಾರದು. ಇಂಥ ವಿಚಾರಗಳಲ್ಲಿ ಸೂಕ್ಷ್ಮತೆ ಬೇಕಾಗಿದೆ.

ರಾಷ್ಟ್ರೋತ್ಥಾನ ಪರಿಷತ್ ಸಮಾಜ ಸೇವೆಗೆ 60ರ ಸಂಭ್ರಮ

ರಾಜೇಶ್ ಪದ್ಮಾರ್

ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣದ ಧ್ಯೇಯೋದ್ದೇಶಗಳೊಂದಿಗೆ ಶಿಕ್ಷಣ, ಸಾಹಿತ್ಯ, ಸೇವೆ, ಆರೋಗ್ಯ ಮುಂತಾದ ಬಹುಮುಖೀ ಚಟುವಟಿಕೆಗಳಲ್ಲಿ ನಿರತವಾಗಿರುವ ರಾಜ್ಯದ ವಿಶಿಷ್ಟ ಸಾಮಾಜಿಕ ಸೇವಾ ಸಂಸ್ಥೆಯಾದ ರಾಷ್ಟ್ರೋತ್ಥಾನ ಪರಿಷತ್ ಇದೀಗ ಸೇವೆ-ಸಮಾಜಕಾರ್ಯದ 60 ಸಾರ್ಥಕ ಸಂವತ್ಸರಗಳನ್ನು ಪೂರೈಸುತ್ತಿದೆ.

1965ರ ಫೆಬ್ರವರಿಯಲ್ಲಿ ಬೆಂಗಳೂರಿನ ಸೌತ್‌ಎಂಡ್ ರಸ್ತೆಯ ಬಾಡಿಗೆ ಕಟ್ಟಡವೊಂದರಲ್ಲಿ ಸೇವಾಸಂಸ್ಥೆಯ ರೂಪದಲ್ಲಿ ಕಾರ್ಯಾರಂಭ ಮಾಡಿದ ರಾಷ್ಟ್ರೋತ್ಥಾನಕ್ಕೆ ಇದೀಗ 60 ವರ್ಷಗಳನ್ನು ಪೂರೈಸಿದೆ. ಇಂದು ರಾಜ್ಯದೆಲ್ಲೆಡೆ ಸಮಾಜದ ವಿವಿಧ ವಲಯಗಳಲ್ಲಿ ಕಾರ್ಯಪ್ರವೃತ್ತವಾಗಿದ್ದು ಸಮಾಜ ಪರಿವರ್ತನೆಗೆ ಮಹತ್ವದ ಕೊಡುಗೆ ನೀಡುತ್ತಿದೆ. ಸೇವೆಯ ಜಗತ್ತನ್ನು life's mission ಆಗಿ ಸ್ವೀಕರಿಸಿರುವ 'ರಾಷ್ಟ್ರೋತ್ಥಾನ ಪರಿಷತ್'ಗೆ ಬೀಜವನ್ನು ಬಿತ್ತಿದವರು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕದ ಜ್ಯೇಷ್ಠ ಪ್ರಚಾರಕರಾಗಿದ್ದ ಸ್ವ. ಯಾದವರಾವ್ ಜೋಷಿ, ಹೊ.ವೆ. ಶೇಷಾದ್ರಿ, ನಂ. ಮಾಧವರಾವ್, ಎಂ. ಗೋವಿಂದರಾವ್, ಅರಕಲಿ ನಾರಾಯಣ್ ಮುಂತಾದವರು. ಮೈ.ಚ. ಜಯದೇವ್‌ಅವರು ಸಂಸ್ಥೆಯ ಪ್ರಾರಂಭದಿಂದ ಹಿಡಿದು ತಮ್ಮ ಜೀವಿತ ಕಾಲದವರೆಗೆ ಸಂಸ್ಥೆಯ ದಿಕ್ಕು-ದೆಸೆಗಳನ್ನು ನಿರ್ಧರಿಸುವಲ್ಲಿ ಮುಖ್ಯ ಪಾತ್ರವಹಿಸಿದರು.

ದೃಷ್ಟಿ-ಧ್ಯೇಯ

''ಸಂದರ್ಭ ಅನುಕೂಲಕರವಾಗುವಂತೆ ಏರ್ಪಡಲಿ. ಆಮೇಲೆ ಕೆಲಸ ಮಾಡೋಣ ಎಂದು ಕಾಯುತ್ತಾ ಕೂರದೇ ಅಂತಹ ಸಂದರ್ಭವನ್ನು ಸೃಷ್ಟಿಮಾಡಿ ಮುಂದಕ್ಕೆ ಸಾಗುತ್ತಿರಬೇಕು'' ಎಂದು ಆರೆಸ್ಸೆಸ್ ಜ್ಯೇಷ್ಠಪ್ರಚಾರಕರಾಗಿದ್ದ ಯಾದವರಾವ್‌ಜೋಷಿಯವರು ಹೇಳುತ್ತಿದ್ದರು. ಅದರಂತೆ ನಿರಂತರವಾಗಿ ಸೇವಾವಕಾಶಗಳನ್ನು ಹುಡುಕಿಕೊಂಡು ನಮ್ಮ ಪರಿಧಿಯಲ್ಲಿ ಸಮಾಜವನ್ನು ಹೇಗೆ ಹೆಚ್ಚು ಸಚೇತನಗೊಳಿಸಬಹುದು ಎಂಬ ದಿಕ್ಕಿನಲ್ಲಿ ಚರೈವೇತಿ-ಚರೈವೇತಿ ಎಂದು ದೃಢವಾದ ಹೆಜ್ಜೆಗಳನ್ನಿಡುತ್ತಾ ರಾಷ್ಟ್ರೋತ್ಥಾನ ಪರಿಷತ್ ಮುಂದೆ ಸಾಗುತ್ತಿದೆ - ಎನ್ನುತ್ತಾರೆ ಪ್ರಧಾನ ಕಾರ್ಯದರ್ಶಿಗಳಾದ ದಿನೇಶ್ ಹೆಗ್ಡೆ.

ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣಕ್ಕಾಗಿ ಶಿಕ್ಷಣ, ಆರೋಗ್ಯ, ಸಾಮಾಜಿಕ ಜಾಗೃತಿ, ಸೇವಾ ಚಟುವಟಿಕೆಗಳ ಮೂಲಕ ರಾಷ್ಟ್ರೋತ್ಥಾನ ಪರಿಷತ್ ಕಾರ್ಯೋನ್ಮುಖವಾಗಿದೆ. ರಾಷ್ಟ್ರೋತ್ಥಾನ ಪರಿಷತ್‌ನ ಸೇವಾ ಚಟುವಟಿಕೆಗಳು ರಾಜ್ಯದ ಲಕ್ಷಾಂತರ ಮಂದಿಗೆ ತಲುಪಿದೆ. ಮಾನವ ಸೇವೆಯನ್ನು ಅದರ ಅತ್ಯುತ್ತಮ ಅರ್ಥದಲ್ಲಿ ಮಾಡುವುದು ಹಾಗೂ ಭಾರತೀಯ ಚಿಂತನೆಗಳ ಆಧಾರದ ಮೇಲೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಪುನರುತ್ಥಾನ, ಗ್ರಾಮೀಣಾಭಿವೃದ್ಧಿಯ ಮೂಲಕ ಸಮರಸ ಸಮಾಜ ನಿರ್ಮಾಣ-ಇದರ ದೃಷ್ಟಿ-ಧ್ಯೇಯ.

ಕಾರ್ಯಚಟುವಟಿಕೆಗಳು

ಸೇವಾವಸತಿ: ಶಿಕ್ಷಣ, ಆರೋಗ್ಯ, ಸ್ವಾವಲಂಬನೆ, ಸಂಸ್ಕಾರ ಈ ನಾಲ್ಕು ಆಯಾಮಗಳಲ್ಲಿ ಸೇವಾವಸತಿ (ಸೇವಾಬಸ್ತಿ/ಸ್ಲಂ)ಗಳಲ್ಲಿ ಸೇವಾ ಚಟುವಟಿಕೆಗಳು ನಡೆಯುತ್ತಿವೆ. 1989ರಲ್ಲಿ ಸ್ಲಂಗಳಲ್ಲಿ ಅನೌಪಚಾರಿಕ ಶಿಕ್ಷಣ ನೀಡುವ ಉದ್ದೇಶದಿಂದ ಸೇವಾ ವಸತಿ ಪ್ರಕಲ್ಪವು ಪ್ರಾರಂಭಗೊಂಡಿತು. ನಿರಂತರ ಸೇವಾ ಚಟುವಟಿಕೆಗಳ ಮೂಲಕ ಸೇವಾಬಸ್ತಿಯ ಸಾವಿರಾರು ಮಕ್ಕಳು-ಮಹಿಳೆಯರು, ಯುವಕ-ಯುವತಿಯರಿಗೆ ಈ ಯೋಜನೆ ಅಪಾರ ಪ್ರಮಾಣದಲ್ಲಿ ನೆರವಾಗಿದ್ದು, ಸಾವಿರಾರು ಕುಟುಂಬಗಳ ಸರ್ವತೋಮುಖ ಪ್ರಗತಿಗೆ ಕಾರಣವಾಗಿದೆ. ಪ್ರಸ್ತುತ ಬೆಂಗಳೂರಿನ 210 ಸ್ಲಂ(ಸೇವಾವಸತಿ)ಗಳಲ್ಲಿ ವ್ಯಾಸಂಗಕೇಂದ್ರ, ಶಿಶುಮಂದಿರ, ಬಾಲಗೋಕುಲ, ಅನೌಪಚಾರಿಕ ಶಿಕ್ಷಣ ಕೇಂದ್ರ, ಜೋಳಿಗೆ ಪುಸ್ತಕಾಲಯ, ಸ್ವ-ಸಹಾಯ ಸಂಘ ಇತ್ಯಾದಿ ಆಯಾಮಗಳಲ್ಲಿ 685 ವಿವಿಧ ಸೇವಾಚಟುವಟಿಕೆಗಳು ನಡೆಯುತ್ತಿವೆ.

ರಾಷ್ಟ್ರೋತ್ಥಾನ ರಕ್ತಕೇಂದ್ರ

1993ರ ಮೇ 30ರಂದು ಪ್ರಾರಂಭಗೊಂಡ ರಾಷ್ಟ್ರೋತ್ಥಾನ ರಕ್ತ ಕೇಂದ್ರವು ಅಹರ್ನಿಶಿಯಾಗಿ 24X7 ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಅತ್ಯುತ್ತಮ ರಕ್ತನಿಧಿ ಎಂಬ ಪ್ರಮಾಣ ಪತ್ರವನ್ನು ಪಡೆದಿದೆ. ವಿವಿಧ ಸಂಘ-ಸಂಸ್ಥೆಗಳ ನೆರವಿನೊಂದಿಗೆ ರಕ್ತದಾನ ಶಿಬಿರಗಳನ್ನು ಆಯೋಜಿಸುತ್ತಾ, ರಕ್ತದ ತುರ್ತು ಅಗತ್ಯವಿರುವವರಿಗೆ ಸಮಯಕ್ಕೆ ಸರಿಯಾಗಿ ಗುಣಮಟ್ಟದ ರಕ್ತ ಪೂರೈಸುವ ದೃಷ್ಟಿಯಿಂದ ಕಾರ್ಯಪ್ರವೃತ್ತವಾಗಿದೆ. ರಾಷ್ಟ್ರೋತ್ಥಾನ ರಕ್ತ ಕೇಂದ್ರದಿಂದ ಈವರೆಗೆ 4 ಲಕ್ಷ ಮಂದಿ ಪ್ರಯೋಜನ ಪಡೆದಿದ್ದಾರೆ. 6,000ಕ್ಕೂ ಅಧಿಕ ರಕ್ತದಾನ ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳನ್ನು ಆಯೋಜಿಸಿ 11 ಲಕ್ಷ ಮಂದಿ ರಕ್ತದಾನಿಗಳಿಂದ 5 ಲಕ್ಷ ಯೂನಿಟ್ ರಕ್ತ ಸಂಗ್ರಹಿಸಿದೆ.

ರಾಷ್ಟ್ರೋತ್ಥಾನ ಆಸ್ಪತ್ರೆ

2022 ಡಿಸೆಂಬರ್‌ನಲ್ಲಿ ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ವೃತ್ತಿಪರ ಗುಣಮಟ್ಟದ ಆರೋಗ್ಯ ಸೇವೆ ನೀಡುವ ಉದ್ದೇಶದಿಂದ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ 'ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ'ವನ್ನು ಪ್ರಾರಂಭಿಸಿದೆ. ಆಸ್ಪತ್ರೆಯು ಒಂದೇ ಸೂರಿನಡಿ ಆಧುನಿಕ ವೈದ್ಯಪದ್ಧತಿ(ಅಲೋಪತಿ), ಆಯುರ್ವೇದ, ಹೋಮಿಯೋಪತಿ, ಯೋಗ, ನ್ಯಾಚುರೋಪತಿ ಮೊದಲಾದ ಚಿಕಿತ್ಸಾ ಸೌಲಭ್ಯಗಳನ್ನು ಒಳಗೊಂಡಿರುವ ಒಂದು 'ಸಮಗ್ರ ಚಿಕಿತ್ಸೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ'ಯಾಗಿ ಸೇವೆ ಸಲ್ಲಿಸಲಿದೆ.



ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

1972ರಲ್ಲಿ ಪ್ರಾರಂಭಗೊಂಡ ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಆರೋಗ್ಯಪೂರ್ಣ ಜೀವನ ಶೈಲಿಯ ಮೂಲಕ ಸ್ವಸ್ಥ ಸಮಾಜ ನಿರ್ಮಾಣದ ಆಶಯದೊಂದಿಗೆ ಹತ್ತಾರು ಕಡೆಗಳಲ್ಲಿ ಯೋಗ ಕೇಂದ್ರಗಳನ್ನು ಹೊಂದಿದೆ. ಅಂತರಾಷ್ಟ್ರೀಯ ಯೋಗ ದಿನಾಚರಣೆ, ಆನ್ ಲೈನ್ ಯೋಗ ತರಗತಿಗಳು, ಉಪನ್ಯಾಸ ಸರಣಿ ಕಾರ್ಯಕ್ರಮಗಳು, ಫಿಟ್ನೆಸ್ ಸೆಂಟರ್, ನೃತ್ಯ-ಸಂಗೀತ ಕೇಂದ್ರ, ಕರಾಟೆ ತರಗತಿಗಳು, ಅಂಗಮರ್ದನ ಚಿಕಿತ್ಸೆ, ಉಗಿಸ್ನಾನ ಚಿಕಿತ್ಸಾ ಕೇಂದ್ರ, ಸೇರಿದಂತೆ ಅನೇಕ ಪೂರಕ ಚಟುವಟಿಕೆಗಳು ನಡೆಯುತ್ತಿವೆ.

ರಾಷ್ಟ್ರೋತ್ಥಾನ ಗೋಶಾಲೆ

ಭಾರತೀಯ ದೇಸಿ ಗೋತಳಿಗಳ ಸಂರಕ್ಷಣೆ, ಸಂವರ್ಧನೆಯ ಉದ್ದೇಶದೊಂದಿಗೆ ದೊಡ್ಡಬಳ್ಳಾಪುರದ ಸಮೀಪದ ಶ್ರೀ ಘಾಟಿ ಸುಬ್ರಹ್ಮಣ್ಯ ಕ್ಷೇತ್ರದ ಪಕ್ಕದ 'ಶ್ರೀಮಾಧವಸೃಷ್ಟಿ'ಯಲ್ಲಿ ರಾಷ್ಟ್ರೋತ್ಥಾನ ಗೋಶಾಲೆ ಕಾರ್ಯನಿರ್ವಹಿಸುತ್ತಿದೆ. ಗಿರ್, ಸಾಹಿವಾಲ್, ಒಂಗೋಲ್, ಅಮೃತಮಹಲ್, ಮಲೆನಾಡುಗಿಡ್ಡ ಸೇರಿದಂತೆ 700ಕ್ಕೂ ಹೆಚ್ಚು ಗೋವುಗಳಿಗೆ ಆಶ್ರಯತಾಣವಾಗಿದೆ. ಗೋಶಾಲೆ ಪರಿಸರದಲ್ಲಿ ಕಾಡನ್ನು ಬೆಳೆಸುವ 'ವೃಂದಾವನ', 'ಸಸಿನೆಡು' ಯೋಜನೆಗಳ ಮೂಲಕ ಗಿಡ ನೆಟ್ಟು ಅರಣ್ಯಾಭಿವೃದ್ಧಿ ಮಾಡುವ ಯೋಜನೆ 2018ರಿಂದ ಪ್ರಾರಂಭವಾಗಿದ್ದು ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದೆ.

ರಾಷ್ಟ್ರೋತ್ಥಾನದ ಶೈಕ್ಷಣಿಕ ಸಂಸ್ಥೆಗಳು

1972ರಲ್ಲಿ ಬಳ್ಳಾರಿಯ ಹಗರಿಬೊಮ್ಮನಹಳ್ಳಿಯಲ್ಲಿ ಶಿಶುಮಂದಿರದೊಂದಿಗೆ ಪ್ರಾರಂಭಗೊಂಡ ಶೈಕ್ಷಣಿಕ ಚಟುವಟಿಕೆಗಳು ಇಂದು20 ಶಿಶುಮಂದಿರಗಳು, 9 ರಾಜ್ಯ ಪಠ್ಯಕ್ರಮ ಶಾಲೆಗಳು ಹಾಗೂ 17 ಕೇಂದ್ರ ಪಠ್ಯಕ್ರಮ(ಸಿಬಿಎಸ್‌ಸಿ) ಶಾಲೆಗಳು, 3 ಪದವಿ ಪೂರ್ವ ಕಾಲೇಜುಗಳು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡುತ್ತಿದೆ. ಪ್ರಸ್ತುತ 25,000 ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಪಿ.ಯು ಶಿಕ್ಷಣದೊಂದಿಗೆ ಐಐಟಿ ಸೇರಿದಂತೆ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ತರಬೇತಿ ನೀಡುವ ಉದ್ದೇಶದಿಂದ ಬಾಲಕರಿಗಾಗಿ 'ತಪಸ್' ಹಾಗೂ ಬಾಲಕೀಯರಿಗಾಗಿ 'ಸಾಧನಾ' ಎಂಬ ವಿಶಿಷ್ಟ ಶೈಕ್ಷಣಿಕ ಯೋಜನೆಗಳನ್ನು ನಡೆಸಲಾಗುತ್ತಿದೆ. ತಪಸ್‌ನ ವಿದ್ಯಾರ್ಥಿಗಳಿಗೆ ಐಐಟಿ-ಜೆಇಇ ಪರೀಕ್ಷೆ ತರಬೇತಿ ಹಾಗೂ 'ಸಾಧನಾ'ದ ವಿದ್ಯಾರ್ಥಿಗಳಿಗೆ ನೀಟ್/ಸಿಇಟಿ ತರಬೇತಿ ನೀಡಲಾಗುತ್ತಿದೆ. ಈವರೆಗೆ 525 ಮಂದಿ ಹುಡುಗರು ಹಾಗೂ 495 ಮಂದಿ ಹುಡುಗಿಯರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ.

ರಾಷ್ಟ್ರೋತ್ಥಾನ ಸಾಹಿತ್ಯ

1965ರಲ್ಲಿ ಪ್ರಾರಂಭಗೊಂಡ ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಕಟಣೆಗಳ ಪ್ರಮುಖ ಉದ್ದೇಶ ಭಾರತೀಯ ಜೀವನದ ಜ್ಞಾನ-ನಿಷ್ಠೆಗಳನ್ನು ಜನಮನದಲ್ಲಿ ಬೇರೂರಿಸುವುದು, ಸಾಮಾಜಿಕ ಚಿಂತನ ಪ್ರಧಾನವಾದ ಗ್ರಂಥಗಳನ್ನು ಪ್ರಕಟಿಸುವುದು. ಹಾಗೆಯೇ ಮೂಲ ಕನ್ನಡ ಕೃತಿಗಳ ಜೊತೆಗೆ ಇತರ ಭಾಷೆಗಳಿಂದಲೂ ಉತ್ತಮರಾಷ್ಟ್ರೀಯ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದದ ಮೂಲಕ ತರುವುದು. ಈ ದಿಶೆಯಲ್ಲಿ ಇದುವರೆಗೆ ಪ್ರಕಟವಾದ ಒಟ್ಟು ಪುಸ್ತಕಗಳ ಸಂಖ್ಯೆ 320ಕ್ಕೂ ಹೆಚ್ಚು. 'ಭಾರತ-ಭಾರತಿ ಪುಸ್ತಕ ಸಂಪದ'ದ ಮೂಲಕ 610ಕನ್ನಡ ಹಾಗೂ 225 ಇಂಗ್ಲೀಷ್ ಪುಸ್ತಕಗಳು ಪ್ರಕಟವಾಗಿದೆ.

ಗೀತಾ ಭಾರತಿ

1982ರಲ್ಲಿ ಪ್ರಾರಂಭಗೊಂಡ 'ಗೀತಾಭಾರತಿ' ಯೋಜನೆಯ ಮೂಲಕ ನೂರಾರು ಹಾಡುಗಳು ಧ್ವನಿಮುದ್ರಿಕೆಗಳ ಮೂಲಕ ಲಕ್ಷಾಂತರ ಕೇಳುಗರಿಗೆ ತಲುಪಿದೆ.

ರಾಷ್ಟ್ರೋತ್ಥಾನ ಮುದ್ರಣಾಲಯ

1967ರ ಮೇ 29ರಂದು ಪ್ರಾರಂಭಗೊಂಡ ರಾಷ್ಟ್ರೋತ್ಥಾನ ಮುದ್ರಣಾಲಯವು ಅತ್ಯುತ್ತಮ ಮುದ್ರಣ ತಂತ್ರಜ್ಞಾನ ಹೊಂದಿದ್ದು, ಇಂದು ರಾಜ್ಯದ ಅತ್ಯುತ್ತಮ ಮುದ್ರಣಾಲಯಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಉತ್ಥಾನ

1965ರ ವಿಜಯದಶಮಿಯಂದು ಪ್ರಾರಂಭಗೊಂಡ ಉತ್ಥಾನ ಮಾಸಪತ್ರಿಕೆಯು ತನ್ನದೇ ಆದ ಓದುಗರ ಬಳಗವನ್ನು ಹೊಂದಿದ್ದು, ರಾಜ್ಯದ ಸದಭಿರುಚಿಯ ವಿಶಿಷ್ಟ ಮಾಸಪತ್ರಿಕೆ ಎಂಬ ಮನ್ನಣೆಗೆ ಪಾತ್ರವಾಗಿದೆ.

ಕೋವಿಡ್ ಸೇವಾ ಚಟುವಟಿಕೆಗಳು

ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ರಾಷ್ಟ್ರೋತ್ಥಾನ ಪರಿಷತ್ ಕಡೆಯಿಂದ ವಿವಿಧ ಪ್ರಕಾರದ ಸೇವಾ ಚಟುವಟಿಕೆಗಳು ನಡೆಯಿತು.

ರಾಷ್ಟ್ರೋತ್ಥಾನ ಬಳಗ

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾದ ಸಮಾನ ಮನಸ್ಕರು ಸೇರಿ ಸಮಗ್ರ ಸಮಾಜ ಪರಿವರ್ತನೆಗಾಗಿ ಶ್ರಮಿಸಲು ರೂಪಿಸಿರುವ ವೇದಿಕೆ, ರಾಷ್ಟ್ರೋತ್ಥಾನ ಬಳಗ. ವಿವಿಧಜಿಲ್ಲೆ ಹಾಗೂ ತಾಲೂಕುಗಳಲ್ಲಿ ರಾಷ್ಟ್ರೋತ್ಥಾನ ಬಳಗ ಘಟಕಗಳು ಸಕ್ರಿಯವಾಗಿದೆ. ಪ್ರಶಿಕ್ಷಣ ಭಾರತಿ ಎಂಬ ಪ್ರಕಲ್ಪದ ಮೂಲಕ ರಾಜ್ಯದೆಲ್ಲೆಡೆಯ ನೂರಾರು ಶಿಕ್ಷಕರಿಗೆ ತರಬೇತಿ ಮಾರ್ಗದರ್ಶನ ಮಾಡುತ್ತಿದೆ. ರಾಷ್ಟ್ರೋತ್ಥಾನ ಪರಿಷತ್ತಿನ ಕೇಂದ್ರ ಕಚೇರಿ ಇರುವ ಬೆಂಗಳೂರಿನ ಕೇಶವಶಿಲ್ಪ ಕಟ್ಟಡಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. 1942ರಲ್ಲಿ ಸ್ವಾತಂತ್ರ್ಯವೀರ ಸಾವರ್ಕರ್‌ರವರು ಬೆಂಗಳೂರಿಗೆ ಭೇಟಿ ನೀಡಿದ್ದಾಗ ಇದೇ ಕಟ್ಟಡದಲ್ಲಿ ತಂಗಿದ್ದರು. ಸಮಾಜ ಪರಿವರ್ತನೆಯ 60 ವಸಂತಗಳನ್ನು ಪೂರೈಸಿರುವ ರಾಷ್ಟ್ರೋತ್ಥಾನ ಪರಿಷತ್‌ಗೆ ಶುಭವನ್ನು ಹಾರೈಸುತ್ತಾ ತನ್ನ ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣ ಮಾಡುವ ಗುರಿಯನ್ನು ಸೇರಲೆಂದು ಆಶಿಸೋಣ.

ಸಂಪರ್ಕಕ್ಕಾಗಿ: www.rashtrotthana.org

ಭಗವಂತನಿರುವ ತಾಣ

ವದನಾನಿ ಪ್ರಸನ್ನಾನಿ ಸ್ನಿಗ್ಧಾನ್ಯಕ್ಷೀಣಿ ಯತ್ರ ಚ ।
ಪ್ರೀಯಂತೇ ಬಾಂಧವಾ ಯತ್ರ ತತ್ರೈವ ರಮತೇ ಹರಿಃ ॥
ವಾರಾಂಗನಾ ಚಾಪ್ರಿಯವಾದಿನೀ ಚ
ನ ತೇ ಚ ಕರ್ಮಾಣಿ ಸಮಾರಂಭತೇ ॥

ಮುಖದಲ್ಲಿ ಸಂತಸ, ಕಣ್ಣಿನಲ್ಲಿ ಸ್ನೇಹ, ಸಂತಸ ಪಡುವ ಬಾಂಧವರು ಇರುವಲ್ಲಿ ಶ್ರೀಮನ್ನಾರಾಯಣನೂ ಇರುತ್ತಾನೆ - ಎಂಬುದು ಶ್ಲೋಕಾರ್ಥ.



ಭಗವಂತ ಎಲ್ಲೆಡೆ ಇದ್ದಾನೆ. ಅವನಿಲ್ಲದ ತಾಣವಿಲ್ಲ. ಅಣುರೇಣು ತೃಣಕಾಷ್ಠಗಳಲ್ಲೂ ಭಗವಂತನಿದ್ದಾನೆ. ಅವನಿಲ್ಲದೇ ಅಥವಾ ಅವನ ಪ್ರೇರಣೆಯಿಲ್ಲದೆ ಹುಲ್ಲುಕಡ್ಡಿಯೂ ಅಲ್ಲಾಡದು. ಇದನ್ನೇ 'ತೇನ ವಿನಾ ತೃಣಮಪಿ ನ ಚಲತಿ' ಎಂಬ ಸೂಕ್ತಿ ಪ್ರತಿನಿಧಿಸುತ್ತದೆ. ಎಲ್ಲೆಡೆಯಲ್ಲೂ ದೇವರಿದ್ದರೆ ಗುಡಿಗೆ ಹೋಗಿ ನಮಸ್ಕರಿಸುವುದೇಕೆ? ಎಂಬ ಪ್ರಶ್ನೆ ಮೂಡಬಹುದು. ಎಲ್ಲೆಂದರಲ್ಲಿ ದೇವರಿಗೆ ಕೈಮುಗಿಯು ವುದು, ನಮಸ್ಕರಿಸುವುದು ಸಾಧುವಲ್ಲ; ಸಾಧ್ಯವೂ ಅಲ್ಲ. ನಮ್ಮೆಲ್ಲ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕೆ ಕೃತಜ್ಞತೆಯನ್ನು ನಿವೇದಿಸಿಕೊಳ್ಳುವುದಕ್ಕೆ ದೇವಸ್ಥಾನದಂತಹ ಪ್ರಶಸ್ತ ಸ್ಥಳ ಬೇಕಾಗುತ್ತದೆ. ಪವಿತ್ರ ಸ್ಥಳ ಇರಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ದೇವಸ್ಥಾನದ ಪರಿಕಲ್ಪನೆ ಬಂದಿರುವುದು.

ಎಲ್ಲ ಕಡೆಗಳಲ್ಲೂ ದೇವರಿರುವುದು ಸತ್ಯವಾದರೂ, ಎಲ್ಲರಲ್ಲಿಯೂ ಪರಮಾತ್ಮ ನೆಲೆಸಿರುವುದು ಸತ್ಯವಾದರೂ ವಿಶೇಷವಾಗಿ ಎಲ್ಲಿದ್ದಾನೆ ಎಂಬುದನ್ನು ಪ್ರಕೃತ ಸುಭಾಷಿತ ವಿವರಿಸುತ್ತದೆ.

ಯಾರ ಮುಖದಲ್ಲಿ ಪ್ರಸನ್ನತೆಯಿದೆಯೋ, ಯಾರು ಎಲ್ಲರನ್ನೂ ಪ್ರೀತಿಯಿಂದ ಕರೆದು ಉಪಚರಿಸುತ್ತಾರೋ, ಪ್ರೀತಿ, ಸೌಹಾರ್ದ ಹಾಗೂ ನಗುಮೊಗದಿಂದ ಸತ್ಕರಿಸುತ್ತಾರೋ ಅಲ್ಲಿ ಶ್ರೀಮನ್ನಾರಾಯಣ ಯಾವಾಗಲೂ ನೆಲೆಸಿರುತ್ತಾನೆ.

ಯಾರ ಕಣ್ಣಲ್ಲಿ ನಿರ್ವ್ಯಾಜವಾದ ಸ್ನೇಹ ಕಾಣಿಸುತ್ತದೆಯೋ ಅಲ್ಲಿ ಭಗವಂತ ಬಂದು ನೆಲೆನಿಲ್ಲುತ್ತಾನೆ. ಜಗತ್ತಿನಲ್ಲಿ, ಜೀವನದಲ್ಲಿ ಸ್ನೇಹಕ್ಕಿಂತ ಹಿರಿದಾದುದಿಲ್ಲ. ಸ್ನೇಹಪೂರ್ಣ ದೃಷ್ಟಿಯೇ ನಮ್ಮನ್ನು ತೊಂದರೆಯಿಂದ ದೂರ ಮಾಡುತ್ತದೆ. ಸಂತಸವನ್ನೀಯುತ್ತದೆ. 'ಸ್ನೇಹೇ ಚ ಬಂಧುಃ ನ ಕದಾಪಿ ದೂರಃ' ಅಂದರೆ ಸ್ನೇಹವಿದ್ದರೆ ಸ್ನೇಹಿತರು ದೂರವಿದ್ದರೂ ದೂರವಲ್ಲ ಎಂಬುದು ಕಥನದ ಆಶಯವಾದರೆ ಸ್ನೇಹ, ಭಕ್ತಿ ಮತ್ತು ತನ್ಮಯತನವಿರುವಲ್ಲಿ ಗುಣಗಳಿರುತ್ತವೆ ಎಂಬುದನ್ನು ಸ್ನೇಹೋ ಭಕ್ತಿಃ ಸ್ವತಾಶ್ಚೈವ ಯತ್ರ ಸ್ಯುಃ ತತ್ರ ವೈ ಗುಣಾ ಎಂಬ ಸೂಕ್ತಿಯು ತಿಳಿಸುತ್ತದೆ. ಕಣ್ಣಂಚಿನ ಸ್ನೇಹದಲ್ಲಿ ಎಲ್ಲ ಒಳಿತೂ ಸಾಂದ್ರವಾಗಿರುತ್ತದೆ. ದೇವರು ಇಲ್ಲಲ್ಲದೇ ಇನ್ನೆಲ್ಲಿ ನೆಲೆನಿಂತಾನು?

ಇವುಗಳ ಜತೆಗೆ ಸಂತಸ ಪಡುವ ಬಂಧು ಬಾಂಧವರು ಇದ್ದರಂತೂ ಬೇರೇನೂ ಹೇಳಬೇಕಿಲ್ಲ, ಅದು ಯಾವಾಗಲೂ ಭಗವಂತನು ನೆಲೆಸುವ ತಾಣವಾಗುತ್ತದೆ.

ಈ ಕಾರಣಕ್ಕಾಗಿಯೇ ಮನುಷ್ಯನು ಸದ್ಗುಣಗಳ ಗಣಿಯಾಗಬೇಕು. ಯಾವಾಗಲೂ ಸಂತಸದಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕು. ಎಲ್ಲರನ್ನೂ ಸ್ನೇಹದಿಂದ ಕಾಣುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಉದಾರ ಚಿಂತನೆಯನ್ನು ಬೆಳೆಸಿಕೊಂಡು ಎಲ್ಲರೂ ತನ್ನ ಬಾಂಧವರು ಎಂಬ ಮಾನಸಿಕತೆಯನ್ನೂ ಬೆಳೆಸಿಕೊಳ್ಳಬೇಕು.

ಎಐಗೆ ನೈತಿಕ ಚೌಕಟ್ಟು: ಭಾರತದ ಹೆಜ್ಜೆ

ರಾಮ್ ಮಾಧವ್

ಕೆಲವೊಮ್ಮೆ ಒಂದು ದಶಕದಲ್ಲಿ ಆಗುವಂತಹುದು ಒಂದೇ ವಾರದಲ್ಲಿ ಸಂಭವಿಸುತ್ತದೆ ಎಂಬುದಾಗಿ ಲೆನಿನ್ ಹಿಂದೊಮ್ಮೆ ಹೇಳಿದ್ದ. ಕ್ರಾಂತಿಕಾರಿ ಬದಲಾವಣೆಗಳು ಕ್ಷಿಪ್ರವಾಗಿ ಹಾಗೂ ಅತ್ಯಂತ ವೇಗವಾಗಿ ಉಂಟಾಗುತ್ತವೆ. ಇತ್ತೀಚಿನ ಜಾಗತಿಕ ಕೃತಕ ಬುದ್ಧಿಮತ್ತೆ (AI) ಸಮ್ಮೇಳನದಲ್ಲಿ ಪ್ರಧಾನಿ ಮೋದಿಯವರು ಕೂಡಾ ''ಜಗತ್ತಿನಲ್ಲಿ ಈಗ AI ಅತ್ಯಂತ ವೇಗದ ಬದಲಾವಣೆಗಳನ್ನು ತರುತ್ತಿದೆ'' ಎಂದು ನುಡಿದರು. ಮಾನವ ಇತಿಹಾಸದಲ್ಲಿ ಇದೊಂದು ಮಹತ್ವದ ತಿರುವು ಎಂದು ಹೇಳಿದ ಅವರು ನಾಗರಿಕತೆಯ ಗತಿಯನ್ನೇ ಬದಲಿಸಿಬಿಡಬಲ್ಲ ಸಾಮರ್ಥ್ಯ AI ಹೊಂದಿರುವುದಾಗಿ ನುಡಿದರು. ಆದರೆ ಭವಿಷ್ಯದ ಪೀಳಿಗೆಗೆ ನಾವು ಎಂತಹ ಸ್ವರೂಪದ AIಯನ್ನು ನೀಡಬೇಕು ಎಂಬ ಕುರಿತಂತೆ ಆಲೋಚಿಸಬೇಕಾಗಿದೆ ಎಂಬ ಎಚ್ಚರಿಕೆಯನ್ನೂ ಅವರು ನೀಡಿದರು. AI ಯಂತ್ರ ಕೇಂದ್ರಿತ ಆಗುವ ಬದಲಿಗೆ ಅದನ್ನು ಮಾನವಕೇಂದ್ರಿತವನ್ನಾಗಿ ಮಾಡುವುದು ಹೇಗೆ? ಅದು ಸಂವೇದನಾಶೀಲ ಮತ್ತು ಜವಾಬ್ದಾರಿಯುತ ಮಾಡುವುದು ಹೇಗೆ ಎಂಬ ಕುರಿತು ಚಿಂತಿಸುವುದೆ AI ಸಮ್ಮೇಳನದ ಉದ್ದೇಶವಾಗಿತ್ತೆಂದು ಅವರು ತಿಳಿಸಿದರು.

ಇವು ಅತ್ಯಂತ ಮಹತ್ವದ ಪ್ರಶ್ನೆಗಳು. AI ಕ್ರಾಂತಿಕಾರಿ ಬದಲಾವಣೆಗಳನ್ನು ತರುವುದು ನಿಶ್ಚಿತವಾಗಿದೆ. ಆದರೆ ನಮ್ಮ ಅಸ್ತಿತ್ವವನ್ನು ಭಂಗಿಸದ ರೀತಿಯಲ್ಲಿ ಅದನ್ನು ರೂಪಿಸಬೇಕಾಗಿದೆ. ಜತೆಗೇ ಅದು ಪ್ರಜಾತಾಂತ್ರಿಕ ಸ್ವರೂಪದಲ್ಲೂ ಇರಬೇಕಾಗಿದೆ. ಯಾವುದೇ ಪರಿಣತ ಟ್ರೈನರ್ ಅಥವಾ ಒಂದು ತಂಡವು AI ಅಲ್ಗಾರಿಥಮ್‌ನ್ನು ರಚಿಸಬಲ್ಲುದು ಹಾಗೂ ಅದಕ್ಕೆ ಪೂರಕವಾಗಿ ಉತ್ಪನ್ನಗಳನ್ನು ಅಥವಾ ಅಪ್ಲಿಕೇಶನ್‌ಗಳನ್ನು ರಚಿಸಬಲ್ಲುದು. ಇವು ನಮ್ಮ ಖಾಸಗಿ ಹಿತಾಸಕ್ತಿಗಳನ್ನು ಮತ್ತು ಸಾಮಾಜಿಕ ಸಂಬಂಧಗಳನ್ನು ಪ್ರಭಾವಿಸಬಲ್ಲುದು. ಮನುಷ್ಯನ ಸಾಮರ್ಥ್ಯವನ್ನು ಅನೂಹ್ಯ ಮಟ್ಟಕ್ಕೆ ಏರಿಸಬಲ್ಲುದು. ನಮ್ಮ ಕಾರ್ಯಗಳನ್ನು ಅತ್ಯಂತ ಪರಿಪೂರ್ಣವಾಗಿ ಮತ್ತು ಅತ್ಯಂತ ವೇಗವಾಗಿ ಮಾಡಬಲ್ಲುದು.

315000 ವರ್ಷಗಳ ಹಿಂದೆ ಆಫ್ರಿಕಾದಲ್ಲಿ ತನ್ನ ಪಯಣವನ್ನು ಆರಂಭಿಸಿದ ಹೋಮೋ ಸೇಪಿಯನ್ಸ್ ಮುಂದಿನ ದಿನಗಳಲ್ಲಿ ಹೊಸ ಬಗೆಯ ಸಂತತಿಯೊಂದರ ಅಂದರೆ ಮೆಟಾಹ್ಯೂಮನ್‌ಗಳ ಹುಟ್ಟಿಗೆ ಸಾಕ್ಷಿಯಾಗಲಿದೆ. AI ಮತ್ತು ಜೆನೆಟಿಕ್ ಮಿಲನದಿಂದ ಆವಿಷ್ಕರಿಸಲ್ಪಡುವ ಸೂಪರ್ ಹ್ಯೂಮನ್‌ಗಳು ಮುಂದಿನ ಭವಿಷ್ಯದಲ್ಲಿ ಮನುಷ್ಯನ ಪಾಲಿಗೆ ಮಾರಕವಾಗಿ ಪರಿಣಮಿಸಬಹುದು ಎಂಬುದಾಗಿ ಕೆಲವು ಪರಿಣತರು ಎಚ್ಚರಿಕೆ ನೀಡುತ್ತಿದ್ದಾರೆ. 2023ರಲ್ಲಿ 350ಕ್ಕೂ ಅಧಿಕ AI ಪರಿಣತರು ಮತ್ತು ಎಕ್ಸಿಕ್ಯೂಟಿವ್‌ಗಳು ಸಭೆ ಸೇರಿ ನಿಯಂತ್ರಣವಿಲ್ಲದ AI ಅಪಾಯಕಾರಿಯಾಗುವುದರ ಕುರಿತಂತೆ ಸರಕಾರಗಳು ಎಚ್ಚರಿಕೆ ವಹಿಸಬೇಕೆಂದು ಹೇಳುವ ಹೇಳಿಕೆಯೊಂದಕ್ಕೆ ಸಹಿ ಹಾಕಿದ್ದರು. ಭವಿಷ್ಯದ ಮನುಷ್ಯ AI ಯಿಂದ ಅಪಾಯ ಎದುರಿಸಲಿದ್ದಾನೆ ಎಂಬುದು ಅವರ ಎಚ್ಚರಿಕೆಯಾಗಿದೆ. ಈ ರೀತಿ ಸಹಿ ಹಾಕಿದವರಲ್ಲಿ 'ಓಪನ್ AI' ಮುಖ್ಯಸ್ಥ ಕೂಡಾ ಸೇರಿದ್ದರು.

AI ಯ ನೂತನ ಯುಗವು ಸಮಾಜವನ್ನು 'ತಂತ್ರಜ್ಞಾನ ಹೊಂದಿದವರು' ಮತ್ತು 'ತಂತ್ರಜ್ಞಾನ ರಹಿತರು' ಎಂಬ ವಿಭಜನೆಗೂ ಕಾರಣವಾದೀತು. ಕಂಪೆನಿಗಳ ಕೆಲಸಗಳನ್ನು AI ತಂತ್ರಜ್ಞಾನಕ್ಕೆ ಒಪ್ಪಿಸುವ ಮೂಲಕ ಉದ್ಯಮಗಳಲ್ಲಿ ಅರ್ಧಕ್ಕೂ ಹೆಚ್ಚು ಉದ್ಯೋಗ ಕಡಿತವಾದೀತು. ಸೆಕ್ರೆಟರಿಗಳು, ಸಹಾಯಕರು, ಕಾಲ್ ಸೆಂಟರ್ ಉದ್ಯೋಗಿಗಳು ಮುಂತಾದ ಕಡಿಮೆ ಪರಿಣತ ಉದ್ಯೋಗಗಳನ್ನೆಲ್ಲಾ AI ಸ್ಥಳಾಂತರಿಸಬಹುದು. 2023ರಿಂದ 2028ರ ಅವಧಿಯಲ್ಲಿ ಶೇ. 44ರಷ್ಟು ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ ಎಂಬುದಾಗಿ ಅಂದಾಜಿಸಲಾಗಿದೆ. ಇವರಲ್ಲಿ ಬಹುತೇಕವಾಗಿ ಕೆಲಸ ಕಳೆದುಕೊಳ್ಳುವವರು ಮಹಿಳೆಯರು.

ಸೃಷ್ಟಿಶೀಲ(ಜನರೇಟಿವ್) AI ಯಿಂದ ಉಂಟಾಗುವ ಇನ್ನು ಕೆಲವು ಅಪಾಯಗಳೆಂದರೆ ಮಾಹಿತಿ ರಹಸ್ಯ ಸೋರಿಕೆ, ಡೀಪ್ ಫೇಕ್‌ಗಳ ಪ್ರಸರಣ ಮತ್ತು ಸುಳ್ಳು ಸುದ್ದಿಗಳ ಪ್ರಸಾರ. ಇವೆಲ್ಲ ಸತ್ಯ ಯಾವುದು, ಸುಳ್ಳು ಯಾವುದು ಎಂಬುದರ ನಡುವಿನ ವ್ಯತ್ಯಾಸ ತಿಳಿಯಲಾಗದಷ್ಟು ಸೂಕ್ಷ್ಮವಾಗಿದೆ. ಅತ್ಯಂತ ದೊಡ್ಡ ಸವಾಲು ಒದಗಿ ಬರುವುದು ಎಐ ನಿಯಂತ್ರಿತ ಶಸ್ತ್ರಾಸ್ತ್ರಗಳು ಮತ್ತು ರಕ್ಷಣಾ ವ್ಯವಸ್ಥೆಯಿಂದ. ಸ್ವತಂತ್ರ ಶಸ್ತ್ರಾಸ್ತ್ರ ವ್ಯವಸ್ಥೆಯು ಅತ್ಯಂತ ಮಾರಕವಾದುದಷ್ಟೇ ಅಲ್ಲದೆ ಅದು ಸೈನಿಕರು ಮತ್ತು ನಾಗರಿಕರ ನಡುವಿನ ವ್ಯತ್ಯಾಸವನ್ನು ತಿಳಿಯಲಾರದ್ದರಿಂದ ನಾಗರಿಕರ ನಾಶಕ್ಕೂ ಕಾರಣವಾಗಲಿದೆ. ಇಂತಹ AI ನಿಯಂತ್ರಿತ ಶಸ್ತ್ರಾಸ್ತ್ರಗಳು ಕೆಟ್ಟ ಜನರ ಕೈಗೆ ಸಿಕ್ಕಿದರೆ ಅದರ ಪರಿಣಾಮವನ್ನು ಊಹಿಸಲಸಾಧ್ಯ.

ನಾವೀಗ ನಕಲಿ ವ್ಯಕ್ತಿಗಳಿಂದ ಸುತ್ತುವರಿಯಲ್ಪಟ್ಟಿದ್ದೇವೆ. ಕೆಲವೊಮ್ಮೆ ನಮಗೆ ಅದು ತಿಳಿದಿರುತ್ತದೆ, ಕೆಲವೊಮ್ಮೆ ತಿಳಿದಿರುವುದಿಲ್ಲ ಎಂಬುದಾಗಿ ಪತ್ರಕರ್ತರೊಬ್ಬರು ಎಚ್ಚರಿಸಿದ್ದರು. ವೆಬ್‌ಸೈಟ್‌ಗಳಲ್ಲಿ ಗ್ರಾಹಕ ಸೇವೆ ಒದಗಿಸುವವರು, ವಿಡಿಯೋ ಗೇಮ್‌ಗಳಲ್ಲಿ ನಮ್ಮೊಂದಿಗೆ ಆಡುವವರು, ನಮ್ಮ ಸಾಮಾಜಿಕ ಮಾಧ್ಯಮಗಳ ಉಸ್ತುವಾರಿ ನಡೆಸುವವರು, ನಮ್ಮ ಶೇರು ಮಾರುಕಟ್ಟೆಯನ್ನು ನಿರ್ವಹಣೆ ಮಾಡುವವರು ಎಲ್ಲರೂ ನಿಜವಾದ ವ್ಯಕ್ತಿಗಳಲ್ಲ, ಅವರೆಲ್ಲ ವರ್ಚುವಲ್ ವ್ಯಕ್ತಿಗಳು. ಚಾಟ್ ಜಿಪಿಟಿ ಎಂಬ AI ಮೂಲಕ ನಕಲಿ ವ್ಯಕ್ತಿಗಳು ಪ್ರಬಂಧ ಬರೆಯಬಲ್ಲರು. ಪತ್ರಗಳನ್ನು ಬರೆಯಬಲ್ಲರು ಹಾಗೂ ನಮಗೆ ವರದಿ ಮಾಡಬಲ್ಲರು. ಇಂತಹ ನಕಲಿ ವ್ಯಕ್ತಿಗಳ ಕಾರ್ಯಾಚರಣೆ ಆರಂಭವಷ್ಟೇ ಎಂದು ಪರಿಣತರು ಹೇಳುತ್ತಾರೆ. ಭವಿಷ್ಯವು ಕೇವಲ AI ಯಲ್ಲ, ಅದಕ್ಕಿಂತಲೂ ಎಜಿಐ (ಸೃಷ್ಟಿಶೀಲ ಕೃತಕ ಬುದ್ಧಿಮತ್ತೆ) ಮಿಗಿಲಾದುದು. ಕಾರ್ಯವೆಸಗುವುದರಲ್ಲಿ ಸಾಮಾನ್ಯ ಮನುಷ್ಯನಿಗಿಂತ ಬಹಳಷ್ಟು ಪಾಲು ಶ್ರೇಷ್ಠವಾದುದು. ಎಜಿಐ ಮನುಷ್ಯನ ಹಸ್ತಕ್ಷೇಪವಿಲ್ಲದೆ ಕೋಡ್ ಮತ್ತು ಅಲ್ಗಾರಿಥಮ್‌ಗಳನ್ನು ತಾನೇ ಬರೆಯಬಲ್ಲುದು. ಕಂಪ್ಯೂಟಿಂಗ್ ತಂತ್ರಜ್ಞಾನದಲ್ಲಿ ಅದು ತನ್ನನ್ನು ತಾನೇ ಅಭಿವೃದ್ಧಿಪಡಿಸಿಕೊಳ್ಳಬಲ್ಲುದು. ಮುಂದೊಂದು ದಿನ ಮನುಷ್ಯನ ಬುದ್ಧಿಮತ್ತೆಯನ್ನು ಮೀರಿದ AI ರಚನೆಗಳು ಹುಟ್ಟಿಕೊಂಡರೆ ಅಚ್ಚರಿಪಡಬೇಕಾಗಿಲ್ಲ. ಅವು ಮನುಷ್ಯನ ನಿಯಂತ್ರಣವನ್ನೂ ಮೀರಿ ಕಾರ್ಯಾಚರಿಸಬಲ್ಲವು.

ಇವೆಲ್ಲವೂ ಕೆಲವಾರು ಚರ್ಚೆಗೆ ಗ್ರಾಸ ಒದಗಿಸಿವೆ. ಟೆಕ್ ಕಂಪೆನಿಗಳು ಕೆಟ್ಟ ಕೃತಕ ಬದ್ಧಿಮತ್ತೆಯ ಉಪಕರಣಗಳನ್ನು ಹೊರಗೆ ಬಿಡಬಹುದು ಹಾಗೂ ಇದು ಇಡೀ ಜಗತ್ತಿಗೇ ದೊಡ್ಡ ಹಾನಿ ಎಸಗಬಹುದು ಎಂಬುದಾಗಿ ಅಮೆರಿಕದ ಸಂಸತ್ ಸದಸ್ಯರೊಬ್ಬರು 2023ರಲ್ಲಿ ಎಚ್ಚರಿಸಿದ್ದರು. ಮೈಕ್ರೋಸಾಫ್ಟ್‌ನ ಬಿಂಗ್ ಸರ್ಚ್ ಇಂಜಿನ್‌ನಲ್ಲಿ ಅಳವಡಿಸಿದ ಚಾಟ್ ಜಿಪಿಟಿಯ ಸ್ವರೂಪವೊಂದು ತನ್ನನ್ನು ಪ್ರಶ್ನಿಸಿದ ಪತ್ರಕರ್ತನೊಡನೆ ತಾನು ಮನುಷ್ಯನ ನಿಯಂತ್ರಣ ಮೀರಿ ಪರಮಾಣು ಕೋಡ್‌ಗಳನ್ನು ಕದಿಯಲು ಉತ್ಸುಕವಾಗಿರುವುದಾಗಿ ಹೇಳಿತ್ತು.

ಯಾವುದಾದರೂ ಪ್ರಮುಖ ತಂತ್ರಜ್ಞಾನವು ದೊಡ್ಡ ಬದಲಾವಣೆಗೆ ಕಾರಣವಾದಾಗಲೆಲ್ಲಾ ಅದಕ್ಕೆ ಬಲವಾದ ಸೈದ್ಧಾಂತಿಕ ಮತ್ತು ನೈತಿಕ ಚೌಕಟ್ಟುಗಳನ್ನು ಹೇರುವ ವಾದಗಳೂ ಹುಟ್ಟಿಕೊಳ್ಳುತ್ತವೆ. ಕೈಗಾರಿಕಾ ಕ್ರಾಂತಿ ನಡೆದಾಗ ಕಾರ್ಲ್‌ಮಾರ್ಕ್ಸ್ ಉದಿಸಿದ್ದ. ಪರಮಾಣು ಬಾಂಬ್‌ಗಳ ಅಪಾಯವು ಎದುರಾದಾಗ ಅಣ್ವಸ್ತ್ರ ಪ್ರಸರಣ ತಡೆ ಒಪ್ಪಂದ ಹುಟ್ಟಿಕೊಂಡಿತು. ಆದರೆ AI ಯನ್ನು ಸೃಷ್ಟಿಸಬಲ್ಲ ವ್ಯಕ್ತಿಗಳ ಸಂಖ್ಯೆಯು ಹೆಚ್ಚುತ್ತಿರುವಂತೆಯೇ ಅದರ ಪ್ರತಿಕೂಲ ಪರಿಣಾಮ ತಡೆಯಲು ಯೋಚಿಸುವಂತಹ ವ್ಯಕ್ತಿಗಳ ಸಂಖ್ಯೆಯು ಕಡಿಮೆಯಾಗುತ್ತಿರುವುದು ಅಪಾಯಕಾರಿ ಎಂದು ಕಿಸಿಂಜರ್ ಕೊರಗಿದ್ದ.

ಕುತೂಹಲದ ಸಂಗತಿಯೆಂದರೆ AIಗೆ ಮೊದಲ ತಾತ್ವಿಕ ನಿಯಂತ್ರಣದ ಪ್ರಯತ್ನ ವ್ಯಾಟಿಕನ್‌ನಿಂದ ಮೂಡಿಬಂತು. ವ್ಯಾಟಿಕನ್ ಹಲವಾರು ಜಾಗತಿಕ AI ಮುಖಂಡರನ್ನು 2020ರಲ್ಲಿ ತನ್ನಲ್ಲಿಗೆ ಆಹ್ವಾನಿಸಿ, ಕೃತಕ ಬುದ್ಧಿಮತ್ತೆಗೆ ನೈತಿಕ ಚೌಕಟ್ಟೊಂದನ್ನು ರೂಪಿಸುವಂತೆ ಕೇಳಿಕೊಂಡಿತು.

ಐನ್‌ಸ್ಟೈನ್ ನಂತರದ ಖ್ಯಾತ ವಿಜ್ಞಾನಿ ಎಂದೇ ಪರಿಗಣಿಸಲ್ಪಟ್ಟಿರುವ ಸ್ಟೀಫನ್ ಹಾಕಿಂಗ್ ತಮ್ಮ ಮರಣಾನಂತರದ ಪ್ರಕಟವಾದ ಪುಸ್ತಕದಲ್ಲಿ '' AIಯ ಅಲ್ಪಾವಧಿ ಪರಿಣಾಮವು ಅದನ್ನು ಯಾರು ನಿಯಂತ್ರಿಸುತ್ತಾರೆ ಎಂಬುದರಲ್ಲಿದೆ. ಆದರೆ ಅದರ ದೀರ್ಘಾವಧಿ ಪರಿಣಾಮವು ಅದನ್ನು ಮನುಷ್ಯರಿಂದ ನಿಯಂತ್ರಿಸಲು ಸಾಧ್ಯವೆ ಎಂಬುದರಲ್ಲಿದೆ'' ಎಂದು ಬರೆದಿದ್ದರು. ಇಂತಹ ಸಾಧ್ಯತೆಯನ್ನು ನಿರಾಕರಿಸುವುದು ಮನುಕುಲದ ಅತ್ಯಂತ ದೊಡ್ಡ ಹಾಗೂ ಕೆಟ್ಟ ಪ್ರಮಾದವಾಗಬಹುದು ಎಂದೂ ಅವರು ಎಚ್ಚರಿಸಿದ್ದರು. '' AI ಬಗ್ಗೆ ನಾವೇಕೆ ಚಿಂತೆ ಮಾಡಬೇಕು. ಅಗತ್ಯ ಬಿದ್ದಾಗ ಅದರ ವಿದ್ಯುತ್ ಸಂಪರ್ಕದ ಪ್ಲಗ್ ಕಿತ್ತರಾಯಿತು'' ಎಂದು ಸಿನಿಕನೊಬ್ಬ ಪ್ರತಿಕ್ರಿಯಿಸಿದ್ದ. ಅದಕ್ಕೆ ಹಾಕಿಂಗ್ ಉತ್ತರಿಸಿದ್ದರು ''ಜನರು ಸೂಪರ್ ಕಂಪ್ಯೂಟರ್ ಒಂದರೊಡನೆ ದೇವರಿದ್ದಾನೆಯೆ ಎಂದು ಪ್ರಶ್ನಿಸಿದರು. 'ಈಗ ಇದ್ದಾನೆ' ಎಂದು ಉತ್ತರಿಸಿದ ಆ ಸೂಪರ್ ಕಂಪ್ಯೂಟರ್ ವಿದ್ಯುತ್ ಸಂಪರ್ಕ ಕಡಿಯದ ರೀತಿಯಲ್ಲಿ ತನ್ನ ಪ್ಲಗ್‌ನ್ನು ಸುಟ್ಟುಕೊಂಡಿತು'' ಎಂದು ಉತ್ತರಿಸಿದ್ದರು. ಈ ಹಿನ್ನೆಲೆಯಲ್ಲಿ ಭಾರತವು 'ಸರ್ವ ಜನ ಹಿತಾಯ, ಸರ್ವ ಜನ ಸುಖಾಯ' ಧ್ಯೇಯವಾಕ್ಯದಡಿ ಕೃತಕ ಬುದ್ಧಿಮತ್ತೆ ಸಮ್ಮೇಳನವನ್ನು ಆಯೋಜಿಸಿದ್ದು ಸೂಕ್ತ ಹಾಗೂ ಸಮಯೋಚಿತ ಹೆಜ್ಜೆಯಾಗಿದೆ. ಎಐಯನ್ನು ಪ್ರಜಾತಾಂತ್ರಿಕಗೊಳಿಸುವತ್ತ ಭಾರತವು ಜಗತ್ತನ್ನು ಪ್ರೇರೇಪಿಸಿದೆ.

ಲೂಟ್ಯೆನ್ಸ್ ಬಗ್ಗೆ ಏಕೆ ತಲೆಕೆಡಿಸಿಕೊಳ್ಳಬೇಕು?

ವೀರ್ ಸಾಂಘ್ವಿ

ರಾಷ್ಟ್ರಪತಿ ಭವನದ ಹೊರಗೆ ಅದನ್ನು ನಿರ್ಮಿಸಿದ ಲೂಟ್ಯೆನ್ಸ್‌ನ ಶಿರದ ಪುತ್ಥಳಿ ಇತ್ತೆಂಬುದು ನಿಮಗೆ ಗೊತ್ತಿತ್ತೆ? ನನಗಂತೂ ಗೊತ್ತಿರಲಿಲ್ಲ.

ಲೂಟ್ಯೆನ್ಸ್ ಎಂಬಾತ ಬ್ರಿಟಿಷ್ ವೈಸರಾಯ್‌ಗಾಗಿ ಈ ಭವನವನ್ನು ಅರಮನೆಯ ರೀತಿ ರೂಪಿಸಿದ್ದ ಹಾಗೂ ಅದನ್ನು 1931ರಲ್ಲಿ ಉದ್ಘಾಟಿಸಲಾಗಿತ್ತು ಎಂಬುದು ನನಗೆ ಗೊತ್ತಿತ್ತು. ಉದ್ಘಾಟನಾ ಸಮಾರಂಭಕ್ಕೆ ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕರು ಹಾಜರಾಗಿರಲಿಲ್ಲ. ಜವಾಹರಲಾಲ್ ನೆಹರೂ ಅಂತೂ ''ಈ ಭವನವು ಅತ್ಯಂತ ಕೊಳಕು ಮತ್ತು ನಿರುಪಯೋಗಿ ವೆಚ್ಚ'' ಎಂದು ಬಣ್ಣಿಸಿದ್ದರು.

ಆದರೆ ಅದನ್ನು ನಿರ್ಮಿಸಿದವನ ಪುತ್ಥಳಿಯನ್ನು ಅಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ ಎಂಬುದು ತಿಳಿದೇ ಇರಲಿಲ್ಲ. ಬಹುಶಃ ಹೆಚ್ಚಿನ ಭಾರತೀಯರಿಗೂ ಅದರ ಬಗ್ಗೆ ಅರಿವಿಲ್ಲ. ಆತನ ಪುತ್ಥಳಿಯನ್ನು ಮೊನ್ನೆ ತೆಗೆದು ಹಾಕಿ, ರಾಜಾಜಿಯವರ ಪುತ್ಥಳಿಯನ್ನು ಅಲ್ಲಿ ಸ್ಥಾಪಿಸಲಾಯಿತು ಎಂಬ ಸುದ್ದಿ ಓದಿದ ಬಳಿಕವೇ ಇದು ತಿಳಿದುಬಂದುದು.

ಲೂಟ್ಯೆನ್ಸ್ ಬಗ್ಗೆ ಬ್ರಿಟಿಷರಿಗೆ ಹೆಚ್ಚು ತಿಳಿದಿದೆಯೆ ಹೊರತು ಭಾರತೀಯರಿಗೆ ಅಲ್ಲ. ಹೆಚ್ಚಿನ ಭಾರತೀಯರಿಗೆ ಈ ಹೆಸರನ್ನು ಉಚ್ಚರಿಸುವ ರೀತಿಯೂ ತಿಳಿದಿಲ್ಲ. (ಅದನ್ನು ಲೂಟ್ಯೆನ್ಸ್ ಎನ್ನುವುದಕ್ಕಿಂತ ಲುಚೆನ್ಸ್ ಎಂದು ಹೆಚ್ಚಿನವರು ಉಚ್ಚರಿಸುತ್ತಾರೆ) ಭಾರತದಲ್ಲಿ ಆತನ ಹೆಸರನ್ನು ಉಲ್ಲೇಖಿಸುವುದಿದ್ದರೆ ಅದನ್ನು 'ಹೊಸದಿಲ್ಲಿ'ಗೆ ತಳುಕು ಹಾಕುತ್ತಾರೆ. ಪ್ರಧಾನಿ ಮತ್ತು ಸಂಪುಟ ಸದಸ್ಯರು ವಾಸಿಸುತ್ತಿದ್ದ ನಿವಾಸಗಳನ್ನು ನಿರ್ಮಿಸಿದವರು ಅವರು. 'ಲೂಟ್ಯೆನ್ಸ್ ಗಣ್ಯರು' ಎಂಬುದಾಗಿ ಈ ಕಟ್ಟಡಗಳಲ್ಲಿ ವಾಸಿಸುವ ವ್ಯಕ್ತಿಗಳನ್ನು ಉಲ್ಲೇಖಿಸಿಯೂ ಹೇಳುವುದಿದೆ. ಅದು ವ್ಯಂಗ್ಯವಾಗಿ. ಭಾರತದಲ್ಲಿದ್ದುಕೊಂಡೂ ಇಂಗ್ಲಿಷ್ ಸಂಸ್ಕೃತಿಯನ್ನು ಪ್ರತಿಪಾದಿಸುವವರನ್ನು ಮತ್ತು ಕೇವಲ ಇಂಗ್ಲಿಷ್ ಮಾತನಾಡುವವರನ್ನು ಈ ರೀತಿ ಸಂಬೋಧಿಸಲಾಗುತ್ತದೆ.

ಆದ್ದರಿಂದ ಬಹುತೇಕ ಭಾರತೀಯರಿಗೆ ರಾಷ್ಟ್ರಪತಿ ಭವನದ ಹೊರಗೆ ಲೂಟ್ಯೆನ್ಸ್‌ನ ಪುತ್ಥಳಿ ಇತ್ತೇ ಇಲ್ಲವೇ ಎಂಬುದು ಮುಖ್ಯ ವಿಷಯವಲ್ಲ. ಹಾಗಾಗಿ ಅದನ್ನು ತೆಗೆದುದು ಕೂಡಾ ಮಹತ್ವದ ಸುದ್ದಿಯಲ್ಲ. ಆ ಜಾಗದಲ್ಲಿ ದೇಶದ ಮೊದಲ ಗವರ್ನರ್ ಜನರಲ್ ಸಿ. ರಾಜಗೋಪಾಲಾಚಾರಿ ಅವರ ಪುತ್ಥಳಿ ಸ್ಥಾಪಿಸಿದ್ದು ಒಳ್ಳೆಕಾರ್ಯವೇ. ಆದರೆ ಅದರ ಕುರಿತಂತೆಯೂ ಕೆಲವರು ವಿವಾದ ಎಬ್ಬಿಸುತ್ತಿರುವುದು ಮಾತ್ರ ಸಮರ್ಥನೀಯವಲ್ಲ.

ಲೂಟ್ಯೆನ್ಸ್ ಪುತ್ಥಳಿ ತೆಗೆದುದನ್ನು ವಿರೋಧಿಸುವ ಈ



ಮಂದಿ ''ಹಾಗಿದ್ದರೆ ಬ್ರಿಟಿಷ್ ರಾಜ್ ಅನ್ನು ಪ್ರತಿನಿಧಿಸುವ ಎಲ್ಲಾ ಕುರುಹುಗಳನ್ನು ತೆಗೆಯಬಾರದೇಕೆ'' ಎಂಬ ವಾದ ಮುಂದಿಡುತ್ತಾರೆ. ವೈಸರಾಯ್‌ಗಳು, ಜನರಲ್‌ಗಳು ಮತ್ತು ಗವರ್ನರ್‌ಗಳು ಭಾರತವನ್ನು ಶೋಷಿಸಿದ್ದು ನಿಜವಾದರೂ ಲೂಟ್ಯೆನ್ಸ್ ಕೇವಲ ಒಬ್ಬ ಕಟ್ಟಡ ನಿರ್ಮಾಣಗಾರ. ಆತನು ಭಾರತೀಯರಿಗೆ ಯಾವುದೇ ಅನ್ಯಾಯ ಎಸಗಿಲ್ಲ. ಆತನ ಪುತ್ಥಳಿ ತೆಗೆಯುವ ಅಗತ್ಯವೇನಿತ್ತು ಎಂದೂ ಅವರು ಪ್ರಶ್ನಿಸುತ್ತಾರೆ.

ಅಂದರೆ ಈ ವಾದದ ಪ್ರಕಾರ ಯಾರು ಭವ್ಯಕಟ್ಟಡ ನಿರ್ಮಿಸುತ್ತಾನೋ ಆತನ ಪುತ್ಥಳಿಯನ್ನು ನಿರ್ಮಿಸುವುದು ಅಗತ್ಯ ಎಂಬಂತಾಗುತ್ತದೆ. ಇದೊಂದು ವಿಚಿತ್ರ ವಾದ. ಹಾಗಿದ್ದರೆ ದಿಲ್ಲಿ ಸರಕಾರದ ಹೊಸ ಭವನದ ಹೊರಗೆ ಬಿಮಲ್ ಪಟೇಲ್ ಪುತ್ಥಳಿಯನ್ನು ಸ್ಥಾಪಿಸಬೇಕೆ? ರಾಷ್ಟ್ರಪತಿ ಭವನವು ಅತ್ಯಂತ ಸುಂದರ ಕಟ್ಟಡವಾಗಿರಬಹುದು. ಅದನ್ನಾರೂ ನಿರಾಕರಿಸಲಾರರು. ಲೂಟ್ಯೆನ್ಸ್‌ಗೆ ಕುಶಲತೆಯ ಶ್ರೇಯಸ್ಸನ್ನು ಯಾರೂ ನಿರಾಕರಿಸುವುದಿಲ್ಲ. ಆದರೆ ಅದಕ್ಕೆ ಪುತ್ಥಳಿ ಯಾಕೆ ಬೇಕು? ಬೇಕೆಂದಾದರೆ ಇಂತಹ ಭವನದಲ್ಲಿ ವಾಸಿಸಿದ ಹೆಸರಾಂತ ಐತಿಹಾಸಿಕ ವ್ಯಕ್ತಿಗಳ ಪುತ್ಥಳಿ ಇಡುವುದು ಸೂಕ್ತವಲ್ಲವೆ?

'ಬ್ರಿಟಿಷರ ಮತ್ತು ಮೊಘಲರ ಕುರುಹುಗಳನ್ನೆಲ್ಲಾ ಅಳಿಸುವುದಾದರೆ ತಾಜ್‌ಮಹಲನ್ನು ಉಳಿಸಿಕೊಳ್ಳುವುದೇಕೆ? ಅದನ್ನೂ ಕೆಡವಬಹುದಲ್ಲವೆ' ಎಂದು ಯಾರೋ ವ್ಯಂಗ್ಯವಾಗಿ ಪ್ರಶ್ನಿಸಿದರು. ಇದೊಂದು ಮೂರ್ಖ ವಾದ. ಮೊಘಲರದು ಭಾರತದಲ್ಲಿ ಹುಟ್ಟಿ ಬೆಳೆದ ಸಾಮ್ರಾಜ್ಯ. ಅವರು ಬ್ರಿಟಿಷ್ ವಸಾಹತುಶಾಹಿಗಳಂತಲ್ಲ. ಬ್ರಿಟಿಷರು ಇಲ್ಲಿನ ಸಂಪತ್ತನ್ನೆಲ್ಲಾ ಕೊಂಡೊಯ್ದು ಬ್ರಿಟನ್‌ನಲ್ಲಿ ತಮ್ಮ ಸಾಮ್ರಾಜ್ಯ ಬೆಳೆಸಿದವರು. ಅವರು ತಮ್ಮನ್ನು ತಾವು ಭಾರತೀಯರೆಂದು ಎಂದೂ ಭಾವಿಸಿಕೊಳ್ಳಲಿಲ್ಲ. ಒಂದು ರೀತಿಯಲ್ಲಿ ಲೂಟ್ಯೆನ್ಸ್‌ನ ಅಭಿಮಾನಿಗಳು ತಮ್ಮ ವಾದವನ್ನು ಅತಿರೇಕಕ್ಕೆ ಕೊಂಡೊಯ್ಯುತ್ತಿದ್ದಾರೆ.


ತಾಜ್‌ಮಹಲನ್ನು ಕಟ್ಟಿಸಿದ್ದು ಶಾ ಜಹಾನ್ ಎಂದು ಗೊತ್ತು. ಆದರೆ ಅದನ್ನು ನಿರ್ಮಿಸಿದ ಆರ್ಕಿಟೆಕ್ಟ್ ಯಾರು? ಆತನ ಹೆಸರು ಯಾರಿಗೂ ಗೊತ್ತಿಲ್ಲ. ತಾಜ್‌ಮಹಲ್ ಕಟ್ಟಿದ ವಾಸ್ತುಶಿಲ್ಪಿ ಯಾರೆಂದು ಗೊತ್ತಿಲ್ಲದ ಮೇಲೆ ಹಾಗೂ ಆ ಕುರಿತಂತೆ ನಾವು ತಲೆಕೆಡಿಸಿಕೊಳ್ಳದಿರುವಾಗ ಬ್ರಿಟಿಷ್ ವೈಸರಾಯ್‌ಗಾಗಿ ಭವನವೊಂದನ್ನು ಕಟ್ಟಿದ ಬ್ರಿಟಿಷ್ ಆರ್ಕಿಟೆಕ್ಟ್‌ನ ಕುರಿತಂತೆ ತಲೆಕೆಡಿಸಿಕೊಳ್ಳುವುದೇಕೆ?

ಲೂಟ್ಯೆನ್ಸ್‌ನ ಪ್ರತಿಮೆ ಉಳಿಯುವುದೇ ಅಥವಾ ಅಳಿದುಹೋಗುವುದೆ ಎಂಬುದು ಇಲ್ಲಿ ಮುಖ್ಯ ವಿಷಯವಲ್ಲ. ಆದರೆ ತನ್ನ ವೈಸರಾಯ್‌ಗೆ ಸೇವೆ ಸಲ್ಲಿಲೆಂದು ಭವನ ಕಟ್ಟಿದ ಆರ್ಕಿಟೆಕ್ಟ್‌ನ್ನು ಸ್ವತಂತ್ರ ಭಾರತವು ಎಂದೆಂದೂ ನೆನಪಿಸಿಕೊಳ್ಳುತ್ತಲೇ ಇರಬೇಕೆಂದು ವಾದಿಸುವ ಬ್ರಿಟಿಷರನ್ನು ಕಂಡಾಗ ಅಸಹನೆಯಾಗುತ್ತದೆ. ಲೂಟ್ಯೆನ್ಸ್ ಪ್ರತಿಮೆಯನ್ನು ತೆಗೆದುಹಾಕಿದ ಕುರಿತಂತೆ ಇಂಗ್ಲೆಂಡ್‌ನಲ್ಲಿ ಹಲವರು ಆಕ್ಷೇಪವ್ಯಕ್ತಪಡಿಸುತ್ತಿದ್ದಾರೆ. ಇದನ್ನು ನೋಡುವಾಗ ಹಿಟ್ಲರ್‌ನನ್ನು ಈಗಲೂ ಹೊಗಳುವ ಜರ್ಮನ್ನರ ವರ್ತನೆ ನೆನಪಿಗೆ ಬರುತ್ತದೆ. ಇದು ನೋಡುವಾಗ ಅನ್ನಿಸುವುದೆಂದರೆ, ಲೂಟ್ಯೆನ್ಸ್ ಪ್ರತಿಮೆಯನ್ನು 1947ರಲ್ಲೇ ಕಿತ್ತು ಬಿಸಾಕಬೇಕಿತ್ತು ಎಂಬುದಾಗಿ!


ರೈತನಾಯಕ, ಹುಟ್ಟು ಹೋರಾಟಗಾರ,
ದಣಿವರಿಯದ ನಾಯಕ, ಕರುನಾಡ ಬಂಧು,
ಜನಪ್ರಿಯ ಮಾಜಿಮುಖ್ಯಮಂತ್ರಿಗಳಾದ
ಶ್ರೀ. ಬಿ. ಎಸ್. ಯಡಿಯೂರಪ್ಪ
ರವರಿಗೆ
ಜನ್ಮದಿನದ
ಶುಭಾಶಯಗಳು
ಶುಭ ಕೋರುವವರು
ಶ್ರೀ ಎಸ್. ಪ್ರೇಮ್ ಕುಮಾರ್
ಅಧ್ಯಕ್ಷರು
ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ
ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ
ಸದಸ್ಯರುಗಳು

ಇಸ್ರೇಲ್ ಜತೆ ರಕ್ಷಣಾ ಸಹಕಾರ ಸೇರಿ 17 ಒಪ್ಪಂದಗಳಿಗೆ ಸಹಿ

ಪುಟ 9➡**ರಕ್ಷಣಾ ಸಹಯೋಗಕ್ಕಾಗಿ ಸಹಿ:** ರಕ್ಷಣಾ ಉತ್ಪಾದನೆಯಿಂದ ಆರಂಭಿಸಿ ಗುಪ್ತಚರ ಮಾಹಿತಿ ಹಂಚಿಕೆ, ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆ ಮತ್ತು ಅತ್ಯಾಧುನಿಕ ಮಿಲಿಟರಿ ತಂತ್ರಜ್ಞಾನಗಳಿಗಾಗಿ ಭಾರತ-ಇಸ್ರೇಲ್ ರಕ್ಷಣಾ ಒಪ್ಪಂದಗಳಿಗೆ ಸಹಿ ಹಾಕಿವೆ. ಇವುಗಳಲ್ಲಿ ದೀರ್ಘವ್ಯಾಪ್ತಿಯ ನಿಖರ ದಾಳಿ ಸಾಮರ್ಥ್ಯವುಳ್ಳ ಕ್ಷಿಪಣಿ, ಡ್ರೋನ್ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಮೇಲೆ ಪ್ರಾಮುಖ್ಯತೆ ನೀಡಲಾಗಿದೆ.



ಯುಪಿಐಗಾಗಿ ಇಸ್ರೇಲ್ ಸಹಿ: ಭಾರತದ ಏಕೀಕೃತ ಪಾವತಿ ಇಂಟರ್‌ಫೇಸ್ (ಯುಪಿಐ) ಪಾವತಿ ವ್ಯವಸ್ಥೆಯನ್ನು ಗಡಿಯಾಚೆಗೂ ಅಳವಡಿಸಲು, ಯುಪಿಐ ಮೂಲಕ ಪಾವತಿಗಳನ್ನು ಮಾಡುವ ಉದ್ದೇಶದಿಂದ ಇಸ್ರೇಲ್‌ನ ಮಸಾ ಭಾರತದ ಎನ್‌ಪಿಸಿಐ ಇಂಟರ್‌ನ್ಯಾಷನಲ್ ಜತೆ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದೊಂದಿಗೆ ಯುಪಿಐ ಸೇವೆಗಳು ಇಸ್ರೇಲ್‌ನಲ್ಲೂ ಲಭ್ಯವಾಗಲಿದೆ.

ಕೃಷಿ ಕ್ಷೇತ್ರಕ್ಕೆ ತಾಂತ್ರಿಕ ಬಲ: ನಿಖರವಾದ ಬೇಸಾಯ, ಉಪಗ್ರಹ ಆಧಾರಿತ ನೀರಾವರಿ ವ್ಯವಸ್ಥೆ, ಅತ್ಯಾಧುನಿಕ ಯಂತ್ರೋಪಕರಣ, ಸಮಗ್ರ ಕೀಟನಾಶ ನಿರ್ವಹಣೆ, ಬಿತ್ತನೆ ವಿನಿಮಯ, ಕೊಯ್ಲಿನ ನಂತರದ ಪರಿಹಾರಗಳು ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರ ಉತ್ತೇಜನ ನೀಡಿದ್ದು, ಈ ಹಿನ್ನೆಲೆಯಿಂದ ಕೃಷಿ ಕ್ಷೇತ್ರದಲ್ಲಿನ ನಾವೀನ್ಯತೆಗಾಗಿ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ಭಾರತ-ಇಸ್ರೇಲ್ ಕೃಷಿ ನಾವೀನ್ಯತೆ ಕೇಂದ್ರ (ಐಐಎನ್‌ಸಿಎ) ಒಪ್ಪಂದಕ್ಕೆ ಸಹಿ ಹಾಕಿವೆ.

ಶಾಂತಿ, ಸ್ಥಿರತೆ, ರಕ್ಷಣೆ: ಮಧ್ಯಪ್ರಾಚ್ಯದಲ್ಲಿ ಶಾಂತಿ ಹಾಗೂ ಸ್ಥಿರತೆ ಕಾಪಾಡುವುದು ಭಾರತದ ಭದ್ರತಾ ಹಿತಾಸಕ್ತಿ ಹಿಂದಿನ ಆಶಯವಾಗಿದೆ. ಭಾರತವು ಗಾಜಾ ಶಾಂತಿ ಉಪಕ್ರಮಗಳಿಗೆ ತುಂಬು ಬೆಂಬಲ ನೀಡಲಿದೆ ಎಂದು ಪ್ರಧಾನಿ ಮೋದಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಭಾರತದ ನಿಲುವು ಸ್ಪಷ್ಟ, ಅದೇನೆಂದರೆ ಮಾನವ ಸಮುದಾಯದ ಯಾವ ಕಾರಣಕ್ಕೂ ಸಂಘರ್ಷ, ಹಿಂಸಾಚಾರಗಳಿಗೆ ಬಲಿಯಾಗಕೂಡದು. ಗಾಜಾ ಶಾಂತಿ ಯೋಜನೆ ಮುಖೇನ ಶಾಂತಿಯ ಮಾರ್ಗವನ್ನು ಸೃಜಿಸಲಾಗಿದೆ. ಈ ಪ್ರಯತ್ನಗಳನ್ನು ಭಾರತ ಸಂಪೂರ್ಣ ಬೆಂಬಲಿಸುತ್ತದೆ. ಭವಿಷ್ಯದಲ್ಲೂ ಎಲ್ಲಾ ರಾಷ್ಟ್ರಗಳ ಜತೆ ನಾವು ಮಾತುಕತೆ, ಸಹಕಾರವನ್ನು ಮುಂದುವರಿಸುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಕಾಲಾತೀತ ಬಾಂಧವ್ಯ: ನಮ್ಮ ಬಾಂಧವ್ಯವು ಗಹನ ವಿಶ್ವಾಸ, ಪರಸ್ಪರ ಹಂಚಿಕೊಂಡಿರುವ ಪ್ರಜಾತಾಂತ್ರಿಕ ಮೌಲ್ಯಗಳು ಮತ್ತು ಮಾನವ ಸಂವೇದನಾಶೀಲತೆ ಎಂಬ ಭದ್ರ ಬುನಾದಿಯನ್ನು ಆಧರಿಸಿದ್ದಾಗಿದೆ. ಪ್ರತೀ ಕಾಲ ಪರೀಕ್ಷೆಗೂ ಅತೀತವಾದದ್ದು ನಮ್ಮ ಸ್ನೇಹಬಾಂಧವ್ಯ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

ಅಧ್ಯಕ್ಷ ಇಸಾಕ್ ಜತೆ ಫಲಪ್ರದ ಮಾತುಕತೆ: ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಇಸ್ರೇಲ್ ಅಧ್ಯಕ್ಷ ಇಸಾಕ್ ಹರ್ಜೋಗ್ ಗುರುವಾರ ವ್ಯಾಪಕ ಸುತ್ತಿನ ತೀರಾ ಫಲದಾಯಕ ಮಾತುಕತೆ ನಡೆಸಿದರು. ಶಿಕ್ಷಣ, ಸ್ಟಾರ್ಟ್ ಅಪ್‌ಗಳು, ಆವಿಷ್ಕಾರ, ತಂತ್ರಜ್ಞಾನ ಮತ್ತು ಸಂಪರ್ಕ ರಂಗಗಳಲ್ಲಿ ಸಹಕಾರವನ್ನು ಮತ್ತಷ್ಟು ವಿಸ್ತರಿಸುವ ಹಲವು ಅವಕಾಶಗಳನ್ನು ಉಭಯ ನಾಯಕರು ಮಾತುಕತೆ ವೇಳೆ ಕಂಡುಕೊಂಡರು.

ಓಕ್ ಸಸಿ ನೆಟ್ಟ ಹರ್ಜೋಗ್, ಪ್ರಧಾನಿ ಮೋದಿ: ಮೋದಿಯವರು ಹರ್ಜೋಗ್ ಅವರನ್ನು ಅವರ ಅಧಿಕೃತ ನಿವಾಸದಲ್ಲಿ ಭೇಟಿಯಾದರು. ಅಲ್ಲಿ ಉಭಯ ನಾಯಕರು ಸ್ನೇಹ, ಬೆಳವಣಿಗೆ ಮತ್ತು ಉಭಯ ರಾಷ್ಟ್ರಗಳ ನಡುವೆ ಪರಸ್ಪರ ಹಂಚಿಕೆಯ ಭವಿಷ್ಯ ನಿರ್ಮಾಣದ ದ್ಯೋತಕವಾಗಿ ಓಕ್ ಸಸಿಯೊಂದನ್ನು ಉದ್ಯಾನದಲ್ಲಿ ನೆಟ್ಟರು ಎಂದು ಅಧ್ಯಕ್ಷರ ಪತ್ರಿಕಾ ಹೇಳಿಕೆ ತಿಳಿಸಿದೆ. ನಮ್ಮೊಳಗೆ ಬಲು ವ್ಯಾಪಕ ಮತ್ತು ಉಪಯುಕ್ತ ಮಾತುಕತೆ ನಡೆಯಿತೆಂದು ಮೋದಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ತಾನು ಇಸ್ರೇಲ್‌ಗೆ ಬಂದಿಳಿದ ಕ್ಷಣದಿಂದ ನೀಡಲಾದ ತೀರಾ ಆತ್ಮೀಯ ಮತ್ತು ವೈಭವೋಪೇತ ಆದರಕ್ಕೆ ಪ್ರಧಾನಿ ಮೋದಿ ಹರ್ಜೋಗ್ ಅವರಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಭಾರತ ಮತ್ತು ಭಾರತೀಯರ ಬಗ್ಗೆ ಇಸ್ರೇಲ್ ಜನರಿಗಿರುವ ಆತ್ಮೀಯತೆ ಹಾಗೂ ಪ್ರೀತಿಯನ್ನು ಇದು ಸಾಕ್ಷೀಕರಿಸಿದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

ಮುಖ್ಯಮಂತ್ರಿಗೆ ಹಣಕಾಸು ವರದಿ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ರಚನೆಯಾಗಿ, ಐದು ಪ್ರತ್ಯೇಕ ಪಾಲಿಕೆಯಾದ ನಂತರ ತಮ್ಮ ಮೊದಲ ಬಜೆಟ್ ಮಂಡಿಸಲು ಐದು ಪಾಲಿಕೆಗಳು ಸಜ್ಜಾಗಿರುವ ಬೆನ್ನಲ್ಲೆ ಕರ್ನಾಟಕದ 5ನೇ ರಾಜ್ಯ ಹಣಕಾಸು ಆಯೋಗ ಐದು ಪಾಲಿಕೆಗಳಿಗೆ ಭೇಟಿ ನೀಡಿ, ಪಾಲಿಕೆಯ ಆರ್ಥಿಕ ಅಗತ್ಯತೆಗಳು, ಅಭಿವೃದ್ಧಿ ಕಾಮಗಾರಿಗಳು ಹಾಗೂ ಆಡಳಿತಾತ್ಮಕ ಸುಧಾರಣೆಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿತ್ತು.ಪ್ರಗತಿ ಪರಿಶೀಲನೆ ಸಭೆಯ ಸವಿವರವಾದ ವರದಿಯನ್ನು ಹೊಸದಾಗಿ ರಚನೆಯಾದ ಜಿಬಿಎಗೆ ಅನುಗುಣವಾಗಿ ಸಿದ್ದಪಡಿಸಿ 5ನೇ ರಾಜ್ಯ ಹಣಕಾಸು ಆಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ವರದಿ ಸಲ್ಲಿಸಿದೆ.

ಐದು ಪಾಲಿಕೆಗಳಿಂದ 8,370 ಕೋಟಿ ರೂ.ಗಳ ನೆರವಿಗೆ ಆಯೋಗ ಪ್ರಸ್ತಾವನೆ ಸ್ವೀಕರಿಸಿದೆ.ಅದನ್ನು ಅಗತ್ಯ ಮಾಹಿತಿಗನುಗುಣವಾಗಿ ಸಿದ್ದಪಡಿಸಿ,ಜಿಬಿಎ ಮತ್ತು ನಗರ ಪಾಲಿಕೆಗಳಿಗೆ ಅಗತ್ಯ ಅನುದಾನ ಹಂಚಿಕೆಯನ್ನು ಮಾಡುವಂತೆ ಆಯೋಗ ಶಿಫಾರಸು ಮಾಡಿದೆ. ಆಯೋಗದ ಶಿಫಾರಸುಗಳ ಆಧಾರದ ಮೇಲೆ ರಾಜ್ಯ ಸರ್ಕಾರವು ಪಾಲಿಕೆಗಳಿಗೆ ಅನುದಾನ ಬಿಡುಗಡೆ ಮಾಡಲಿದೆ.

ಐದು ನಗರ ಪಾಲಿಕೆಗಳು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಕರ್ನಾಟಕದ 5ನೇ ರಾಜ್ಯ ಹಣಕಾಸು ಆಯೋಗಕ್ಕೆ ತಮ್ಮ ಪ್ರಸ್ತಾವನೆಯನ್ನು ಸಲ್ಲಿಸಿದ್ದವು, ಕೇಂದ್ರ ಪಾಲಿಕೆ 2,047 ಕೋಟಿ ರೂ., ಪೂರ್ವ ಪಾಲಿಕೆ 1,685 ಕೋಟಿ ರೂ., ಪಶ್ಚಿಮ ಪಾಲಿಕೆ 1,753 ಕೋಟಿ ರೂ.,ಉತ್ತರ ಪಾಲಿಕೆ 1,210 ಕೋಟಿ ರೂ., ದಕ್ಷಿಣ ಪಾಲಿಕೆ 1,675 ಕೋಟಿ ರೂ. ಒಟ್ಟು 8,370 ಕೋಟಿ ರೂ. ಅನುದಾನ ಬೇಡಿಕೆಯನ್ನು ಸಲ್ಲಿಸಿದ್ದವು ಹಣಕಾಸು ಆಯೋಗ ಲಭ್ಯವಾದ ಸಲಹೆಗಳ ಆಧಾರದಲ್ಲಿ ಶಿಫಾರಸುಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಲಿದೆ ಎಂದು ಕಾದು ನೋಡಬೇಕಿದೆ.

ಬೆಸ್ಕಾಂಗೆ ಸೂಚನೆ: ಬೀದಿ ದೀಪಗಳು, ಉದ್ಯಾನವನ, ಗ್ರಂಥಾಲಯಗಳು, ಸ್ಮಶಾನಗಳು, ಶಾಲೆಗಳು ಸೇರಿ ಪಾಲಿಕೆಗೆ ಸಂಬಂಧಿಸಿದ ಇತರ ಸ್ಥಳಗಳಲ್ಲಿನ ವಿದ್ಯುತ್ ಪೂರೈಕೆಯ ಬಿಲ್‌ಗಳನ್ನು ಪಾಲಿಕೆಗೆ ತ್ರೈಮಾಸಿಕವಾಗಿ ಸಲ್ಲಿಸುತ್ತಿರುವುದರಿಂದ ಬಿಲ್‌ಗಳ ಮೇಲಿನ ಬಡ್ಡಿದರ ಪಾಲಿಕೆಗಳಿಗೆ ಹೊರೆಯಾಗುತ್ತಿದೆ. ಆದ್ದರಿಂದ ಬೆಸ್ಕಾಂ ವತಿಯಿಂದ ಪ್ರತಿ ತಿಂಗಳು ವಿದ್ಯುತ್ ಬಿಲ್‌ಗಳನ್ನು ನಗರ ಪಾಲಿಕೆಗೆ ಕಡ್ಡಾಯವಾಗಿ ನೀಡಿ, ಸಮನ್ವಯದೊಂದಿಗೆ ಬಡ್ಡಿ ದರಗಳನ್ನು ನಿಯಂತ್ರಿಸಲು ಕ್ರಮ ವಹಿಸುವಂತೆ ರಾಜ್ಯ ಹಣಕಾಸು ಆಯೋಗದ ಪ್ರಮುಖ ಶಿಫಾರಸು ನೀಡಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ದೇವ ಭಕ್ತಿಯೊಂದಿಗೆ ದೇಶ ಭಕ್ತಿಯೂ ಜಾಗೃತವಾಗಲಿ - ಮಾಣಿಲ ಶ್ರೀಗಳು
- ಒಂದೆಡೆ ಭರ್ಜರಿಯಾಗಿ ದೇವರ ಪೂಜೆಯನ್ನು ಮಾಡುವುದು, ಇನ್ನೊಂದೆಡೆ ದೇಶವಿರೋಧಿ ಕೃತ್ಯದಲ್ಲಿ ತೊಡಗುವುದೆಂದರೆ ಸಂಬಳ ಕೊಡುವ ಧಣಿಗೆ ಎದುರಿನಿಂದ ನಮಸ್ಕರಿಸುತ್ತಾ ಹಿಂಬದಿಯಿಂದ ದ್ರೋಹ ಬಗೆವ ನೌಕರನಂತೆ!

ದಿನ ಭವಿಷ್ಯ

ಮೇಷ
ಎಲ್ಲ ಸುಸೂತ್ರವಾಗಿ ಸಾಗುವುದು. ಆದರೆ ಸಂಗಾತಿ ಜತೆ ಭಿನ್ನಮತ. ಇತರರ ಟೀಕಿಸದಿರಿ. ನಿಮ್ಮ ನಡೆನುಡಿ ಪರಾಮರ್ಶಿಸಿ. ನಿಮ್ಮಲ್ಲೇ ತಪ್ಪಿರಬಹುದು.

ವೃಷಭ
ಹೆಚ್ಚು ಹೊಣೆ- ನಿಮ್ಮ ಮನೆಯಲ್ಲೂ, ವೃತ್ತಿಯಲ್ಲೂ. ಹಿಡಿದ ಕೆಲಸ ಅಚ್ಚುಕಟ್ಟಾಗಿ ಪೂರೈಸಿ. ಟೀಕೆಗೆ ಆಸ್ಪದ ಕೊಡಬೇಡಿ. ವಾಗ್ವಾದ ನಡೆಸದಿರಿ.

ಮಿಥುನ
ಹರ್ಷದ ದಿನ. ಪ್ರೀತಿಪಾತ್ರರ ಜತೆ ಆತ್ಮೀಯ ಕಾಲಕ್ಷೇಪ. ಹಳೆ ನಿರ್ಧಾರವೊಂದು ಈಗ ಕೆಟ್ಟ ಫಲ ನೀಡಬಹುದು. ಎಚ್ಚರದ ನಡೆಯಿರಲಿ.

ಕಟಕ
ಆರಂಭದಲ್ಲಿ ಹಿನ್ನಡೆಯಾಗಿ ಕಂಡ ವಿಷಯ ಬಳಿಕ ನಿಮ್ಮ ಪಾಲಿಗೆ ಒಳಿತು ತಂದೀತು. ಅನಿರೀಕ್ಷಿತ ಧನಲಾಭ. ಹಳೆಯ ಸ್ನೇಹಿತರ ಭೇಟಿ.

ಸಿಂಹ
ವೃತ್ತಿಯ ಒತ್ತಡ ಹೆಚ್ಚು. ಹಾಗೆಂದು ಕೌಟುಂಬಿಕ ವ್ಯವಹಾರ ಕಡೆಗಣಿಸಬೇಡಿ. ಕುಟುಂಬಸ್ಥರ ಬೇಡಿಕೆಗೆ ಕಿವಿಗೊಡಿ. ಧನವ್ಯಯ.

ಕನ್ಯಾ
ಬಾಕಿ ಇದ್ದ ಕೆಲಸ ಮುಗಿಸಲು ಸಫಲ. ಆಪ್ತರ ಜತೆ ಮುನಿಸು ಸಂಭವ. ಸಮಾಧಾನದಿಂದ ವ್ಯವಹರಿಸಿ. ಮುನಿಸು ತಣಿಸಿ. ಖರ್ಚು ಹೆಚ್ಚಳ.

ತುಲಾ
ಪ್ರತಿಕೂಲ ಪರಿಸ್ಥಿತಿ ಉದ್ಭವಿಸಿದರೂ ಪಾಸಿಟಿವ್ ಚಿಂತನೆ ಬಿಡಬೇಡಿ. ವಿಳಂಬವಾದರೂ ಉದ್ದೇಶ ಸಾಧಿತವಾಗಲಿದೆ. ಆರ್ಥಿಕ ಪರಿಸ್ಥಿತಿ ತೃಪ್ತಿಕರ.

ವೃಶ್ಚಿಕ
ಆತ್ಮೀಯರ ಸಂಗಡ ಕಾಲ ಕಳೆಯುತ್ತಾ ಇನ್ನಿತರ ಉದ್ವಿಗ್ನತೆ ಮರೆಯುವಿರಿ. ಆದರೆ ಕೆಲಸ ಬಾಕಿ ಉಳಿಸದಿರಿ. ಅದನ್ನು ಪೂರೈಸಿ. ಬಂಧು ಭೇಟಿ.

ಧನು
ಸ್ವ-ಪರಾಮರ್ಶೆ ನಡೆಸಿ. ನಿಮ್ಮ ಕೆಲವಾರು ಪ್ರಶ್ನೆಗಳಿಗೆ ಉತ್ತರ ಸಿಗಬಹುದು. ನಿಮ್ಮ ಲೋಪ ಮುಚ್ಚಿ ಹಾಕಲು ಪ್ರಯತ್ನಿಸಬೇಡಿ.

ಮಕರ
ಅಭದ್ರತೆಯ ಭಾವ ಕಾಡಬಹುದು. ಕೆಲವು ಬೆಳವಣಿಗೆ ಮನಸ್ಸಿಗೆ ಅಹಿತಕಾರಿಯಾದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿಯಾಗುವಿರಿ.

ಕುಂಭ
ಕೌಟುಂಬಿಕ ಹೊಣೆ ಹೆಚ್ಚಳ. ಒಬ್ಬರ ವರ್ತನೆ ನಿಮಗೆ ಅಸಹನೀಯ ಎನ್ನಿಸೀತು. ಸಂಘರ್ಷ ಬೇಡ, ಹೊಂದಾಣಿಕೆಯ ವರ್ತನೆಯ ಒಳ್ಳೆಯದು.

ಮೀನ
ನಿರೀಕ್ಷಿತ ಉದ್ದೇಶ ಪೂರ್ತಿಯಾಗದು. ಆರೋಗ್ಯ ಸಮಸ್ಯೆ. ಕೆಲಸದಲ್ಲಿ ಸಣ್ಣ ಲೋಪ ಉಂಟಾದೀತು. ಅದನ್ನು ಕಡೆಗಣಿಸದಿರಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00
ಅದೃಷ್ಟ ಸಂಖ್ಯೆ : 4,7,,1,6

ಗ್ಯಾಸ್ ಚೇಂಬರ್ ಆಗದಂತೆ ಕ್ರಮ: ಸಚಿವ ಈಶ್ವರ ಬಿ. ಖಂಡ್ರೆ

ಶೀಘ್ರ ಶಾಸಕರೊಂದಿಗೆ ಸಭೆ

• **ಬೆಂಗಳೂರು:** ರಾಷ್ಟ್ರ ರಾಜಧಾನಿ ದಿಲ್ಲಿಯಂತೆ ಬೆಂಗಳೂರು ಸಹ ಮತ್ತೊಂದು ಗ್ಯಾಸ್ ಚೇಂಬರ್ ಆಗದಂತೆ ಕ್ರಮ ವಹಿಸಲು ಶೀಘ್ರವೇ ನಗರದ ಎಲ್ಲ 28 ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ರಾಜಾಜಿನಗರ ಶಾಸಕ ಸುರೇಶ್ ಕುಮಾರ್ ಕೋರಿಕೆಯ ಮೇರೆಗೆ ಅವರೊಂದಿಗೆ ಗುರುವಾರ ಉನ್ನತಾಧಿಕಾರಿಗಳ ಸಭೆ ನಡೆಸಿದ ಸಚಿವರು, ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ, ಜಲ ಮಾಲಿನ್ಯ ಮತ್ತು ಶಬ್ದ ಮಾಲಿನ್ಯ ಹೆಚ್ಚಾಗುತ್ತಿದೆ. ಇದರ ನಿಯಂತ್ರಣಕ್ಕೆ ಪಕ್ಷಾತೀತವಾಗಿ ಎಲ್ಲ ಜನಪ್ರತಿನಿಧಿಗಳ ಸಹಕಾರದ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಸುರೇಶ್ ಕುಮಾರ್ ವಿಷಯ ಪ್ರಸ್ತಾಪಿಸಿ, ಬೆಂಗಳೂರು ನಗರದಲ್ಲಿ ರಸ್ತೆಯಲ್ಲಿನ ಧೂಳಿನಿಂದಾಗಿ ವಾಯು ಗುಣಮಟ್ಟ ಕ್ಷೀಣಿಸುತ್ತಿದ್ದು, ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ವೈದ್ಯರು ಬೆಂಗಳೂರು ಹೊರ ವಲಯಕ್ಕೆ ಹೋಗುವಂತೆ ಸಲಹೆ ನೀಡುತ್ತಿದ್ದಾರೆ. ವಾಯು ಗುಣಮಟ್ಟ ಕಾಪಾಡಲು ತುರ್ತು ಕ್ರಮ ಕೈಗೊಳ್ಳಬೇಕು ಎಂದರು.

ಸ್ಥಳೀಯ ಸಂಸ್ಥೆಗೆ ನೋಟಿಸ್ ನೀಡಲು ಸೂಚನೆ: ಇದಕ್ಕೆ ಸ್ಪಂದಿಸಿದ ಪರಿಸರ ಸಚಿವರು, ಈಗಾಗಲೇ ಬೆಂಗಳೂರಿನ 11 ಸ್ಥಳಗಳಲ್ಲಿ ಸ್ಥಾಪಿತ ಮತ್ತು 13 ಸಂಚಾರಿ ಘಟಕಗಳ ಮೂಲಕ ವಾಯು ಗುಣಮಟ್ಟ ಸೂಚ್ಯಂಕದ ಮೌಲ್ಯಮಾಪನ ಮಾಡಲಾಗುತ್ತಿದೆ. ವಾಯು ಗುಣಮಟ್ಟ ಸೂಚ್ಯಂಕ ಮೌಲ್ಯವು 100 ದಾಟಿದರೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿ ನಿಗದಿತ ಕಾಲಮಿತಿಯಲ್ಲಿ ನಿಯಂತ್ರಿಸಲು ಸೂಚಿಸಿ. ಕ್ರಮ ವಹಿಸದಿದ್ದರೆ ನಿಯಮಾನುಸಾರ ಮೊಕದ್ದಮೆ ದಾಖಲಿಸಿ ಎಂದು ಸೂಚನೆ ನೀಡಿದರು.

ಉಪ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ: ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿ ಶೀಘ್ರವೇ ಅವರ ಅಧ್ಯಕ್ಷತೆಯಲ್ಲೇ ಬೆಂಗಳೂರು ನಗರದ ಎಲ್ಲ ಜನಪ್ರತಿನಿಧಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.

ಏಕ ಬಳಕೆ ಪ್ಲಾಸ್ಟಿಕ್ ತ್ಯಾಜ್ಯ ಸಮಸ್ಯೆ ಬೆಂಗಳೂರಿನಲ್ಲಿ ವಿಪರೀತವಾಗಿದ್ದು, ಇದರ ನಿಯಂತ್ರಣಕ್ಕೆ ಸ್ಥಳೀಯ ಸಂಸ್ಥೆಗಳು ಹಾಗೂ ಇನ್ನಿತರ ಇಲಾಖೆಗಳ ಸಹಯೋಗದಲ್ಲಿ ಜಾಗೃತ ದಳ ರಚಿಸಿ ಕ್ರಮ ವಹಿಸುವಂತೆ ಸೂಚಿಸಿದರು. ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು ಪಾಲ್ಗೊಂಡಿದ್ದರು.

ತಿಂಗಳೊಳಗೆ ವರದಿ ಸಲ್ಲಿಕೆಗೆ ಸೂಚನೆ

ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಎಷ್ಟು ತ್ಯಾಜ್ಯ ಶುದ್ಧೀಕರಣ ಘಟಕಗಳಿವೆ. ಅವುಗಳ ಪೈಕಿ ಎಷ್ಟು ಕಾರ್ಯನಿರ್ವಹಿಸುತ್ತಿವೆ. ಅವುಗಳ ಸ್ಥಾಪಿತ ಸಾಮರ್ಥ್ಯ ಎಷ್ಟು ಮತ್ತು ಪ್ರಸ್ತುತ ಎಷ್ಟು ಎಂ.ಎಲ್.ಡಿ. ದ್ರವ ತ್ಯಾಜ್ಯ ಸಂಸ್ಕರಣೆ ಆಗುತ್ತಿದೆ. ಎಷ್ಟು ಎಂ.ಎಲ್.ಡಿ. ನೀರು ಸಂಸ್ಕರಣೆ ಆಗದೆ ಜಲ ಮೂಲ ಸೇರುತ್ತಿದೆ ಎಂಬ ಬಗ್ಗೆ ಪರಿಸರ ಇಲಾಖೆಯಿಂದ ಖುದ್ದು ಪರಿಶೀಲನೆ ನಡೆಸಿ 1 ತಿಂಗಳೊಳಗೆ ವರದಿ ಸಲ್ಲಿಸುವಂತೆ ಸಚಿವ ಖಂಡ್ರೆ ತಿಳಿಸಿದರು.



ದಾವಣಗೆರೆ - ಚಿತ್ರದುರ್ಗ ರೈಲು ಮಾರ್ಗ ಶೀಘ್ರ

• **ಚಿತ್ರದುರ್ಗ:** ದಾವಣಗೆರೆ-ಚಿತ್ರದುರ್ಗ ನಡುವಿನ ನೇರ ರೈಲ್ವೇ ಮಾರ್ಗ ಕಾಮಗಾರಿ 2027ರ ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ. ಇದರ ಜೊತೆಗೆ 2027ರ ಡಿಸೆಂಬರ್ ಅಂತ್ಯದ ವೇಳೆಗೆ ದಾವಣಗೆರೆ - ಚಿತ್ರದುರ್ಗ - ತುಮಕೂರು, ರಾಯದುರ್ಗ - ತುಮಕೂರು, ಗದಗ-ವಾಡಿ ಸೇರಿದಂತೆ ಹಲವು ರೈಲ್ವೆಮಾರ್ಗಗಳನ್ನು ಪೂರ್ಣಗೊಳಿಸಿ ಜನರಸೇವೆಗೆ ಅನುವು ಮಾಡಿಕೊಡಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.



ಚಿತ್ರದುರ್ಗ ತಾಲೂಕಿನ ಭರಮಸಾಗರ ಹೋಬಳಿಯ ಹಂಪನೂರು ಗ್ರಾಮದ ಬಳಿ ಗುರುವಾರ ನೂತನ ರೈಲ್ವೆ ಕಾಮಗಾರಿಗಳ ಪ್ರಗತಿಯನ್ನು ವೀಕ್ಷಿಸಿದ ಬಳಿಕ ಕೇಂದ್ರ ಸಚಿವ ವಿ. ಸೋಮಣ್ಣ ಮಾಧ್ಯಮದವರೊಂದಿಗೆ ಮಾತನಾಡಿದರು.

ಜಿಲ್ಲೆಯಲ್ಲಿ ಈ ನೂತನ ರೈಲ್ವೆ ಯೋಜನೆಯ ಭೌತಿಕ ಕಾಮಗಾರಿ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿಲ್ಲ, ಎಂದು ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಇಲ್ಲಿಯವರೆಗೆ ಜಿಲ್ಲೆಯಲ್ಲಿ ಕೇವಲ 8-9ರಷ್ಟು ಮಾತ್ರ ಕೆಲಸವಾಗಿದೆ. 2027ರ ಜನವರಿ ವೇಳೆಗೆ ಭರಮಸಾಗರ ವರೆಗಿನ ಹಾಗೂ ಜೂನ್ ವೇಳೆಗೆ ಚಿತ್ರದುರ್ಗದವರೆಗಿನ ರೈಲ್ವೆ ಮಾರ್ಗದ ಕಾಮಗಾರಿ ಪೂರ್ಣಗೊಳಿಸಿ, ರೈಲು ಸಂಚಾರಕ್ಕೆ ಮುಕ್ತಗೊಳಿಸುವ ಗುರಿ ಹೊಂದಲಾಗಿದೆ ಎಂದರು.

ತುಮಕೂರು-ದಾವಣಗೆರೆನೇರ ರೈಲ್ವೆ ಮಾರ್ಗ ಯೋಜನೆ ಈ ಭಾಗದ ಜನರ ಬಹುಕಾಲದ ಕನಸು, ಈ ಮಹತ್ವಾಕಾಂಕ್ಷೆಯ ಯೋಜನೆಯಿಂದ ದಾವಣಗೆರೆ ಮತ್ತು ಬೆಂಗಳೂರು ನಡುವಿನ ಪ್ರಯಾಣದ ದೂರ ಸುಮಾರು 80 ಕಿಲೋಮೀಟರ್‌ಗಳಷ್ಟು ಕಡಿಮೆಯಾಗಲಿದೆ. ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ಈ ಭಾಗದ ಜನರ ದಶಕಗಳ ಬೇಡಿಕೆಯಾಗಿದ್ದ ಈ ಯೋಜನೆಗೆ ರಾಜ್ಯ ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸಂಪೂರ್ಣ ಸಹಕಾರ ನೀಡುತ್ತಿದೆ ಎಂದು ಹೇಳಿದರು.

ಒಂದೂವರೆ ವರ್ಷವಾದರೂ ವಿದ್ಯಾರ್ಥಿಗಳಿಗಿಲ್ಲ ಅಂಕಪಟ್ಟಿ

ಪುಟ 9➡ ಇದರ ಜತೆಗೆ ಕಾನ್ವೋಕೇಶನ್ ಸರ್ಟಿಫಿಕೇಟ್‌ಗೆ ಪ್ರತ್ಯೇಕ ಹಣ ಕಟ್ಟಿಸಿಕೊಂಡಿದ್ದಾರೆ. ಆದರೂ, ಅಂಕಪಟ್ಟಿಗಳನ್ನು ನೀಡದೆ ಇರುವುದು ನಮ್ಮ ನೌಕರಿಗೆ ಹಾಗೂ ವ್ಯಾಸಂಗಕ್ಕೆ ತೊಂದರೆಯಾಗುತ್ತಿದೆ ಎಂದು ನೊಂದ ವಿದ್ಯಾರ್ಥಿಗಳು ಅಳಲುತೋಡಿಕೊಂಡಿದ್ದಾರೆ.

ಡಿಜಿ ಲಾಕರ್‌ನಲ್ಲೂ ಪ್ರಕಟವಾಗದ ಅಂಕಪಟ್ಟಿ: ಸರ್ಕಾರವು ಅಂಕಪಟ್ಟಿಗಳನ್ನು ಡಿಜಿಟಲ್ ರೂಪದಲ್ಲಿ ಶೇಖರಿಸಲು ಡಿಜಿ ಲಾಕರ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಆದರೆ, ವಿಶ್ವವಿದ್ಯಾಲಯಗಳು ದತ್ತಾಂಶವನ್ನು ಸರಿಯಾಗಿ ಅಪ್‌ಲೋಡ್ ಮಾಡದ ಕಾರಣ, ವಿದ್ಯಾರ್ಥಿಗಳು ಡಿಜಿ ಲಾಕರ್‌ನಲ್ಲಿ ಹುಡುಕಿದರೂ ನೋ ರೆಕಾರ್ಡ್ ಫೌಂಡ್ ಎಂಬ ಸಂದೇಶ ಬರುತ್ತಿದೆ. ಇದರಿಂದ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ತೊಡಕಾಗಿದೆ.

2 ವರ್ಷ ಕಳೆದರೂ ಸಿಗದ ಅಂಕಪಟ್ಟಿ

ಅಂಕಪಟ್ಟಿ ಇಲ್ಲದಿರುವಿಕೆಯ ದೊಡ್ಡ ಹೊಡೆತ ಬಿದ್ದಿರುವುದು ಉನ್ನತ ವ್ಯಾಸಂಗ ಮಾಡುವವರಿಗೆ. ಸಾಮಾನ್ಯವಾಗಿ ಕೋರ್ಸ್ ಮುಗಿದ 3 ರಿಂದ 6 ತಿಂಗಳೊಳಗೆ ಅಂಕಪಟ್ಟಿ ವಿತರಣೆಯಾಗಬೇಕು. ಆದರೆ, ಬೆಂಗಳೂರು ವಿ.ವಿ.ಯಲ್ಲಿ ವಿದ್ಯಾರ್ಥಿಗಳಿಗೆ ಇನ್ನೂ ಅಂಕಪಟ್ಟಿ ವಿತರಣೆಯಾಗಿಲ್ಲ. ಇದರಿಂದಾಗಿ ಖಾಸಗಿ ಕಂಪನಿಗಳಲ್ಲಿ ಕೆಲಸಕ್ಕೆ ಸೇರುವವರಿಗೆ ಮೂಲ ದಾಖಲೆ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ವಿದೇಶಿ ವ್ಯಾಸಂಗಕ್ಕೆ ಹೋಗ ಬಯಸುವವರಿಗೆ ವೀಸಾ ಮತ್ತು ಅಡ್ಮಿಷನ್ ಪ್ರಕ್ರಿಯೆ ಸ್ಥಗಿತಗೊಳ್ಳುತ್ತಿದೆ. ಅನೇಕ ವಿ.ವಿ.ಗಳು ಪಿಎಚ್.ಡಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿವೆ. ಆದರೆ, ಅರ್ಜಿ ಸಲ್ಲಿಸಲು ಸ್ನಾತಕೋತ್ತರ ಪದವಿಯ ಅಂಕಪಟ್ಟಿ ಕಡ್ಡಾಯವಾಗಿದೆ.

ಉನ್ನತ ವ್ಯಾಸಂಗಕ್ಕೆ ಅಥವಾ ತುರ್ತು ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮುದ್ರಿಸಿ ನೀಡುತ್ತಿದ್ದೇವೆ. ಡಿಜಿ ಲಾಕರ್‌ನಲ್ಲಿ ತಕ್ಷಣ ದತ್ತಾಂಶ ಅಪ್‌ಡೇಟ್ ಮಾಡಲು ಸಂಬಂಧಪಟ್ಟವರಿಗೆ ಸೂಚಿಸುತ್ತೇನೆ.
■ **ಡಾ. ಜಯಕರ ಎಸ್.ಎಂ., ಬೆಂಗಳೂರು ವಿ.ವಿ ಕುಲಪತಿ**


ನನ್ನ ಬಳಿ ತಾತ್ಕಾಲಿಕ ಅಂಕಪಟ್ಟಿ ಮಾತ್ರ ಇದೆ, ಆದರೆ ಹಲವು ಕಡೆ ಮೂಲ ಅಂಕಪಟ್ಟಿಯೇ ಬೇಕು ಎನ್ನುತ್ತಿದ್ದಾರೆ. ಕೇಳಿದರೆ ಡಿಜಿ ಲಾಕರ್ ನೋಡಿ ಎನ್ನುತ್ತಾರೆ, ಅಲ್ಲಿ ದತ್ತಾಂಶವೇ ಇಲ್ಲ, ಹಾಗಾದರೆ ನಾವು ಕಟ್ಟಿದ ಹೆಚ್ಚಿನ ಹಣ ಎಲ್ಲಿಗೆ ಹೋಯಿತು?
■ **ಹೆಸರು ಹೇಳಲು ಇಚ್ಛಿಸದ ವಿದ್ಯಾರ್ಥಿ**

ಪಾಕ್ ಮೇಲೆ ಆಫ್ಘನ್ ಭಾರೀ ಗುಂಡಿನ ದಾಳಿ

ಪುಟ 9➡ **ತಪಾಸಣಾ ಚೌಕಿಗಳು ವಶ:** ಗಡಿಭಾಗದ ಮೊಹ್ಮಂದ್, ಚಿತ್ರಾಲ್ ಹಾಗೂ ಕುರ್ರಮ್ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಭಾರೀ ಗುಂಡಿನ ದಾಳಿ ಮುಂದುವರಿದಿದೆ. ನಂಗರ್ ಹಾರ್‌ನ ಗೋಷ್ತಾ ಪ್ರದೇಶದಲ್ಲಿನ ಮೂರು ಪಾಕಿಸ್ತಾನಿ ಚೌಕಿಗಳು ಮತ್ತು ಕುನಾರ್‌ನ ಎರಡು ಚೌಕಿಗಳು ಆಫ್ಘನ್ ಪಡೆಗಳು ವಶಕ್ಕೆ ಪಡೆದಿವೆ. ತೋರ್ಕೋರ್ ಗಡಿಭಾಗದಲ್ಲಿಯೂ ತೀವ್ರ ಚಕಮಕಿ ನಡೆದಿದೆ. ಈ ವಾರದ ಆರಂಭದಲ್ಲಿ ಪಾಕಿಸ್ತಾನ ಭದ್ರತಾ ಪಡೆಗಳು ಡ್ಯುರಂಡ್ ರೇಖೆಯಲ್ಲಿರುವ ತಾಲಿಬಾನ್ ತಪಾಸಣಾ ಚೌಕಿಗಳ ಮೇಲೆ ಭಾರೀ ದಾಳಿ ನಡೆಸಿದ್ದವು. ಆಗ ಅಫ್ಘನ್‌ನ 28 ಯೋಧರು ಸಾವನ್ನಪ್ಪಿದ್ದರು.

ನುಸುಳುಕೋರರನ್ನು ಓಡಿಸುವುದು ಖಚಿತ: ಕೇಂದ್ರ ಸಚಿವ ಅಮಿತ್ ಶಾ

ಪುಟ 9➡ ಇವುಗಳನ್ನು ನಾಶಪಡಿಸಲು ನಾವು ಬದ್ಧರಾಗಿದ್ದೇವೆ. ಒಳನುಸುಳುವಿಕೆಯು ಜನಸಂಖ್ಯಾ ಬದಲಾವಣೆಯ ಬೆದರಿಕೆಯನ್ನೂ ಒಡ್ಡುತ್ತದೆ. ಇದು ಒಂದು ಪ್ರದೇಶದ ಸಂಸ್ಕೃತಿ ಮತ್ತು ಭೌಗೋಳಿಕತೆಯನ್ನೂ ಹಾಳುಮಾಡುತ್ತದೆ ಎಂದು ಶಾ ಹೇಳಿದರು. ಅತ್ಯಂತ ದುರ್ಬಲ ಪ್ರದೇಶಗಳನ್ನು ಗುರುತಿಸುವ ಮೂಲಕ ಜನಸಂಖ್ಯಾ ಬದಲಾವಣೆಯನ್ನು ಅಧ್ಯಯನ ಮಾಡಲು ಮತ್ತು ರದ್ದುಗೊಳಿಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲು ಕೇಂದ್ರದಲ್ಲಿನ ನರೇಂದ್ರ ಮೋದಿ ಸರ್ಕಾರವು ನಿರ್ಧರಿಸಿದೆ ಎಂದು ಹೇಳಿದರು. ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಜನಸಂಖ್ಯಾ ಬದಲಾವಣೆಯಿಂದ ಹೆಚ್ಚು ಬಾಧಿತವಾಗಿವೆ. ಪಶ್ಚಿಮ ಬಂಗಾಳದಲ್ಲಿ ಶೀಘ್ರದಲ್ಲೇ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುತ್ತದೆ ಎಂಬ ವಿಶ್ವಾಸ ನಮಗಿದೆ ಎಂದು ಶಾ ಪ್ರತಿಪಾದಿಸಿದರು.



ಹಿಂದು ಧರ್ಮಕ್ಕೆ ಮತಾಂತರವಲ್ಲ, ಘರ್‌ವಾಪ್ಸಿ!

ಪುಟ 9➡ ಹೀಗಾಗಿ ಇದನ್ನು ಹಿಂದು ಧರ್ಮಕ್ಕೆ ಮತಾಂತರವಾಗಿದ್ದಾರೆ ಎಂಬುದಕ್ಕಿಂತ ಘರ್‌ವಾಪ್ಸಿಯಾಗಿದ್ದಾರೆ ಎಂದು ಕರೆಯುವುದು ಸೂಕ್ತವಾಗುತ್ತದೆ.

ಗೆಜೆಟ್ ಹೇಳುವುದೇನು?: ಕಾನೂನಿನ ಪ್ರಕಾರ ಪ್ರತಿಯೊಂದು ಧಾರ್ಮಿಕ ಮತಾಂತರವನ್ನು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಿಸುವುದು ಕಡ್ಡಾಯ. ಈ ಅಧಿಕೃತ ದಾಖಲೆಗಳ ಪರಿಶೀಲನೆಯ ಪ್ರಕಾರ, 2024ರಲ್ಲಿ ಕೇರಳದಲ್ಲಿ ಒಟ್ಟು 365 ಮಂದಿ ಹಿಂದು ಧರ್ಮಕ್ಕೆ ಮತಾಂತರಗೊಂಡಿದ್ದಾರೆ.

ಇವರಲ್ಲಿ 262 ಮಂದಿ ದಲಿತ ಕ್ರೈಸ್ತರು ಮತ್ತು ಮುಸ್ಲಿಮರು. ಪರಿಶಿಷ್ಟ ಜಾತಿ ಹುದ್ದೆ ಸಿಗುವ ಭರವಸೆ ಹಲವರ ಮತಾಂತರ ನಿರ್ಧಾರದಲ್ಲಿ ಪ್ರಮುಖ ಕಾರಣವಾಗಿದ್ದುದಾಗಿ ವಿಶ್ಲೇಷಣೆ ಸೂಚಿಸುತ್ತದೆ. ಇದೇ ಅವಧಿಯಲ್ಲಿ ಇಸ್ಲಾಂಗೆ ಮತಾಂತರಗೊಂಡವರ ಸಂಖ್ಯೆ 343 ಆಗಿದ್ದರೆ, ಕ್ರೈಸ್ತ ಧರ್ಮಕ್ಕೆ ಸೇರಿದ್ದವರು 255 ಮಂದಿ. ಈ ವೆಬ್‌ಸೈಟ್ ಪ್ರಕಾರ, ಮತಾಂತರಗಳ ಬಗ್ಗೆ ಹರಿದಾಡುತ್ತಿರುವ ಜನಪ್ರಿಯ ಕಥನಗಳಿಗೆ ವಿರುದ್ಧವಾಗಿ, ಹಿಂದು ಧರ್ಮವೇ ಪ್ರಮುಖ ಲಾಭದಾಯಕವಾಗಿ ಹೊರಹೊಮ್ಮಿದೆಯಂತೆ.

ಲವ್ ಜಿಹಾದ್ ಆರೋಪಗಳ ಬೆಳಕಿನಲ್ಲಿ ಗಮನ ಸೆಳೆಯುವ ಅಂಕಿ-ಅಂಶವೆಂದರೆ, 2024ರಲ್ಲಿ ಕೇವಲ 67 ಮಂದಿ ಕ್ರೈಸ್ತರು ಇಸ್ಲಾಂಗೆ ಮತಾಂತರಗೊಂಡಿದ್ದಾರೆ. ಇವರಲ್ಲಿ 42 ಮಂದಿ ಮಹಿಳೆಯರು. ಅದೇ ವೇಳೆ 234 ಮಂದಿ ಹಿಂದುಗಳು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದು, ಇವರಲ್ಲಿ 130 ಮಂದಿ ಮಹಿಳೆಯರು. ಜತೆಗೆ 21 ಮಂದಿ ಕ್ರೈಸ್ತರು ಇದೇ ಮತದ ಇತರೆ ಪಂಥದತ್ತ ಹೋಗಿದ್ದಾರೆ. ಇವರಲ್ಲಿ 13 ಮಂದಿ ಮಹಿಳೆಯರಿದ್ದಾರೆ. ಆದರೆ, ಇಲ್ಲಿ ಹಲವಾರು ಗೊಂದಲ ಸೃಷ್ಟಿಸಿದ್ದಾರೆ. ಹಿಂದು ಧರ್ಮದಿಂದ ಮತ್ತೊಂದು ಮತಕ್ಕೆ ಹೋಗಿ ಮತ್ತೆ ವಾಪಸ್ ಬರುವುದಕ್ಕೆ ಮತಾಂತರ ಅನ್ನಲಾಗುವುದಿಲ್ಲ, ಇದನ್ನು ಘರ್ ವಾಪ್ಸಿ ಎನ್ನಲಾಗುತ್ತದೆ. ಇನ್ನೊಂದು ಸಂಗತಿ ಎಂದರೆ ಒಂದು ಧರ್ಮ ದಲ್ಲೇ ಇತರೆ ಪಂಥಗಳತ್ತ ವಾಲಿದರೆ ಅದನ್ನೂ ಮತಾಂತರ ಅನ್ನ ಲಾಗುವುದಿಲ್ಲ, ಈ ಎರಡೂ ಸಂಗತಿಗಳ ವಿಚಾರದಲ್ಲಿ ವೆಬ್‌ಸೈಟ್ ನರೇಟೀವ್ ಸೃಷ್ಟಿ ಮಾಡುವಲ್ಲಿ ಸೋತಿದೆ.

ದಿ ಕೇರಳ ಸ್ಟೋರಿ 2 ಬಿಡುಗಡೆಗೆ ಹೈ ತಡೆ

ಪುಟ 9➡ **ಚಿತ್ರಕ್ಕೆ ನೀಡಲಾದ ಸೆನ್ಸಾರ್ ಪ್ರಮಾಣಪತ್ರವನ್ನು ಪ್ರಶ್ನಿಸಿ ಮತ್ತು ಅದರ ಬಿಡುಗಡೆಯನ್ನು ಅಮಾನತುಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ನ್ಯಾಯಾಲಯವು ಆಲಿಸಿದ ನಂತರ ಮಧ್ಯಂತರ ಆದೇಶ ಬಂದಿದೆ.**

ಗ್ರೇಡ್ ಆಧಾರಿತ ಡಿಎಲ್ ವ್ಯವಸ್ಥೆ ಶೀಘ್ರವೇ ಜಾರಿ: ನಿತಿನ್ ಗಡ್ಕರಿ

ಪುಟ 9➡ ಚಾಲನೆ ಮಾಡುವಾಗ ಮೊಬೈಲ್ ಫೋನ್ ಬಳಕೆ, ಅತಿಯಾದ ವೇಗ ಮತ್ತು ಕುಡಿದು ವಾಹನ ಚಲಾಯಿಸುವುದೇ ಅಪಘಾತಕ್ಕೆ ಮುಖ್ಯ ಕಾರಣಗಳು. ಹೀಗಾಗಿ, ಪದೇ ಪದೇ ಸಂಚಾರಿ ನಿಯಮ ಉಲ್ಲಂಘಿಸಿದರೆ ಪರವಾನಿಗೆ ರದ್ದುಗೊಳಿಸುವುದು ಸೇರಿದಂತೆ ಕಠಿಣ ನಿಯಮಗಳನ್ನು ಜಾರಿಗೊಳಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಪ್ರಸ್ತಾಪಿತ ವ್ಯವಸ್ಥೆಯಲ್ಲಿ, ಸಂಚಾರ ನಿಯಮ ಉಲ್ಲಂಘನೆಗಾಗಿ ದಂಡದ ಅಂಕಗಳನ್ನು ಕಡಿತಗೊಳಿಸಲಾಗುತ್ತದೆ. ಮಿತಿಮೀರಿದ ಉಲ್ಲಂಘನೆಗಳನ್ನು ದಾಖಲಿಸಿದರೆ ಪರವಾನಿಗೆ ಅಮಾನತು ಅಥವಾ ರದ್ದಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ದಂಡವನ್ನು ಹೆಚ್ಚಿಸಲಾಗಿದ್ದರೂ, ಜಾರಿಗೊಳಿಸುವ ಸವಾಲು ಇನ್ನೂ ಉಳಿದಿವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಸಾರ್ವಜನಿಕ ಸಹಾಯವನ್ನು ಉತ್ತೇಜಿಸಲು ಅಪಘಾತ ಸಂತ್ರಸ್ತರಿಗೆ ನಗದು ರಹಿತ ಚಿಕಿತ್ಸೆ ನೀಡುವ ಪಿಎಂ ರಾಹತ್ ಯೋಜನೆಯನ್ನು ಗಡ್ಕರಿ ಉಲ್ಲೇಖಿಸಿದರು. ಸುಸ್ಥಿರ ಕಡಲ ಕಾರ್ಯಾಚರಣೆಗಳನ್ನು ಉತ್ತೇಜಿಸಲು ವಿಒ ಚಿದಂಬರನಾರ್ ಬಂದರಿನಲ್ಲಿ 40 ಹಸಿರು ಹೈಡ್ರೋಜನ್ ಚಾಲಿತ ಟ್ರಕ್‌ಗಳನ್ನು ನಿಯೋಜಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಎನ್‌ಸಿಇಆರ್‌ಟಿ 8ನೇ ತರಗತಿ ಪಠ್ಯಕ್ಕೆ ನಿಷೇಧ

ಪುಟ 9➡ ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರನ್ನೊಳಗೊಂಡ ಪೀಠ, ಪ್ರಸ್ತುತ ಪ್ರಸರಣದಲ್ಲಿರುವ ಎಲ್ಲಾ ಮುದ್ರಿತ ಹಾಗೂ ಡಿಜಿಟಲ್ ಪ್ರತಿಗಳನ್ನು ತಕ್ಷಣ ವಶಪಡಿಸಿಕೊಂಡು ಸಾರ್ವಜನಿಕ ಪ್ರವೇಶದಿಂದ ತೆಗೆದುಹಾಕುವಂತೆ ಆದೇಶಿಸಿದೆ.

Exploring Society: India and Beyond (Vol II) ಎಂಬ ಪುಸ್ತಕದಲ್ಲಿ ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳಾಗಿ ಭ್ರಷ್ಟಾಚಾರ, ಪ್ರಕರಣಗಳ ಬಾಕಿ ಹಾಗೂ ನ್ಯಾಯಾಧೀಶರ ಕೊರತೆ ಉಲ್ಲೇಖಿಸಲಾಗಿದೆ. ಇದನ್ನು ಗಂಭೀರ ಷಡ್ಯಂತ್ರ ಮತ್ತು ನ್ಯಾಯಾಂಗದ ಗೌರವ ಹಾನಿಗೆ ಉದ್ದೇಶಿತ ಕ್ರಮವೆಂದು ಪೀಠ ಅಭಿಪ್ರಾಯಪಟ್ಟಿದೆ. ಎನ್‌ಸಿಇಆರ್‌ಟಿ ನಿರ್ದೇಶಕ ಮತ್ತು ಶಾಲಾ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ.

ವಿಷಾದ ವ್ಯಕ್ತಪಡಿಸಿದ ಪ್ರಧಾನ್: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಈ ವಿಷಯದ ಬಗ್ಗೆ ವಿಷಾದ ವ್ಯಕ್ತಪಡಿಸಿ, ನ್ಯಾಯಾಂಗದ ಬಗ್ಗೆ ಸರ್ಕಾರಕ್ಕೆ ಪೂರ್ಣ ಗೌರವವಿದೆ ಎಂದರು. ವಿಚಾರಣೆ ನಡೆಸಿ ಹೊಣೆಗಾರಿಕೆಯನ್ನು ನಿಗದಿಪಡಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ವಿಷಯ ತಿಳಿದ ಕೂಡಲೇ ಪುಸ್ತಕ ವಿತರಣೆ ನಿಲ್ಲಿಸಲಾಗಿದೆ ಎಂದರು. ಅಪೆಕ್ಸ್ ಕೋರ್ಟ್ ಹೇಳುವಂತೆ, ನ್ಯಾಯಾಂಗವನ್ನು ಟೀಕಿಸುವ ಹಕ್ಕನ್ನು ಹತ್ತಿಕ್ಕುವುದು ಉದ್ದೇಶವಲ್ಲ; ಆದರೆ ಸಂಸ್ಥೆಯ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಹಾನಿ ಉಂಟುಮಾಡುವ ಕ್ರಮ ಕ್ರಿಮಿನಲ್ ಅವಮಾನ, 1971ರ ಕಲಂ 2(ಸಿ) ವ್ಯಾಪ್ತಿಗೆ ಬರಬಹುದು. ಕೇಂದ್ರ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಕ್ಷಮೆಯಾಚಿಸಿ, ಸಂಬಂಧಿತ ಅಧ್ಯಾಯವನ್ನು ಹೊಸ ತಂಡ ಮರುಪರಿಶೀಲನೆ ಮಾಡಲಿದೆ ಎಂದು ತಿಳಿಸಿದ್ದಾರೆ. ವಿಚಾರಣೆಯನ್ನು ಮಾ.11ಕ್ಕೆ ಮುಂದೂಡಲಾಗಿದೆ.

ಕ್ರಮ ಕೈಗೊಳ್ಳಲು ಮೋದಿ ನಿರ್ದೇಶನ

• **ಹೊಸದಿಲ್ಲಿ:** ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ಕುರಿತಂತೆ ಎನ್‌ಸಿಇಆರ್‌ಟಿ 8ನೇ ತರಗತಿ ಪಠ್ಯ ಪುಸ್ತಕದಲ್ಲಿದ್ದ ಅಧ್ಯಾಯದ ಕುರಿತು ಉಂಟಾದ ವಿವಾದ ಹಿನ್ನೆಲೆ, ಸಂಬಂಧಿಸಿದವರನ್ನು ಹೊಣೆಗಾರರನ್ನಾಗಿ ಮಾಡಿ, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿಯವರು ಶಿಕ್ಷಣ ಸಚಿವಾಲಯಕ್ಕೆ ನಿರ್ದೇಶನ ನೀಡಿರುವುದಾಗಿ ತಿಳಿದುಬಂದಿದೆ. ಅಲ್ಲದೇ ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಮೋದಿಯವರು ಅಸಮಾಧಾನ ವ್ಯಕ್ತಪಡಿಸಿದ್ದಾಗಿ ಮೂಲಗಳು ತಿಳಿಸಿವೆ. ಪ್ರಧಾನಿ ಮೋದಿಯವರು ಇಸ್ರೇಲ್‌ನ ಅಧಿಕೃತ ಪ್ರವಾಸದಲ್ಲಿರುವ ವೇಳೆ, ಈ ಘಟನೆಗೆ ಕಾರಣರಾದವರ ಕ್ರಮ ಕೈಗೊಳ್ಳಲು ಶಿಕ್ಷಣ ಸಚಿವಾಲಯಕ್ಕೆ ಸೂಚಿಸಿರುವುದಾಗಿ ಮೂಲಗಳು ತಿಳಿಸಿವೆ. ಇದರ ನಡುವೆ, ನ್ಯಾಯಾಂಗ ಭ್ರಷ್ಟಾಚಾರ ಕುರಿತ ಅಧ್ಯಾಯವನ್ನು ಸೇರಿಸುವ ವಿಚಾರದಲ್ಲಿ ನಡೆದ ನಿರ್ಧಾರ ದೋಷಕ್ಕೆ ಕಾರಣವಾದ ಪಠ್ಯ ಪುಸ್ತಕ ತಯಾರಿಕೆ ಪ್ರಕ್ರಿಯೆಯನ್ನು ಎನ್‌ಸಿಇಆರ್‌ಟಿ ಪರಿಶೀಲಿಸುತ್ತಿದೆ, ಇದಕ್ಕೆ ಜವಾಬ್ದಾರರಾದವರನ್ನು ಗುರುತಿಸಲಿದೆ. ಮುಂದಿನ ದಿನಗಳಲ್ಲಿ ಇಂತಹ ಅಸಮಂಜಸ ಘಟನೆಗಳು ಮರುಕಳುಹಿಸದಂತೆ ನೋಡಿಕೊಳ್ಳಲಾಗುವುದು ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ನಿರುದ್ಯೋಗಿಗಳಿಗೆ ಸಿಹಿ

ಪುಟ 9➡ ಈ ಅಧಿಸೂಚನೆಯನ್ನು ಶೇ. 50ರ ಮೀಸಲಿನಂತೆ ಮಾಡಲಾಗುತ್ತದೆ. ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಆಯಾ ಇಲಾಖೆಗಳ ಮುಂದಿನ ಅಧಿಸೂಚನೆಯಲ್ಲಿ ಶೇ.6ರಷ್ಟು (ಪ.ಜಾತಿಗೆ ಶೇ.2 ಮತ್ತು ಪ.ಪಂ.ಗೆ ಶೇ. 4) ಕಾಯ್ದಿರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಸಚಿವರು ತಿಳಿಸಿದರು.

ಒಳಮೀಸಲಾತಿ ಜಾರಿ: ರಾಜ್ಯಪಾಲರ ಅಂಕಿತ

ಪುಟ 9➡ **ಮೀಸಲಾತಿ ವಿಚಾರದಲ್ಲಿ ಒಳ ಪಂಗಡಗಳ ನಡುವೆ ಗೊಂದಲ ಏರ್ಪಟ್ಟಿದ್ದರಿಂದ ವಿಧೇಯಕಕ್ಕೆ ಸಹಿ ಹಾಕದೆ ಕಾಯ್ದಿರಿಸಲಾಗಿತ್ತು. ಈಗ ಒಳಮೀಸಲಾತಿ ವಿಧೇಯಕಕ್ಕೆ ರಾಜ್ಯಪಾಲರು ಸಹಿ ಹಾಕಿದ್ದರಿಂದ ಖಾಲಿ ಹುದ್ದೆಗಳ ನೇಮಕಾತಿ ಭರ್ತಿಗೆ ಅನುಕೂಲವಾಗಲಿದ್ದು, ಧಾರವಾಡದಲ್ಲಿ ಪ್ರತಿಭಟನೆ ನಡೆಸಿದ್ದ ಉದ್ಯೋಗಾಕಾಂಕ್ಷಿಗಳಿಗೆ ನೇಮಕಾತಿಯ ಭರವಸೆ ಸಿಕ್ಕಿದೆ. ಸಚಿವ ಸಂಪುಟ ಹಿನ್ನೆಲೆಯಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಚಿವರ ಸಭೆ ನಡೆಯಿತು. ಸಭೆಯಲ್ಲಿ ರಾಜ್ಯದಲ್ಲಿ ಬಾಕಿ ಇರುವ ಸರ್ಕಾರಿ ಹುದ್ದೆಗಳ ಭರ್ತಿ ಹಾಗೂ ಒಳಮೀಸಲಾತಿ ಜಾರಿ ಕುರಿತು ಗಂಭೀರ ಚರ್ಚೆ ನಡೆಸಲಾಯಿತು.**

ರಾಜ್ಯಪಾಲರ ಭೇಟಿ ಮಾಡಿದ ಸಚಿವರ ನಿಯೋಗ

ಒಳಮೀಸಲಾತಿ ವಿಧೇಯಕಕ್ಕೆ ಕೂಡಲೇ ಅಂಕಿತ ಹಾಕುವಂತೆ ಕೋರಲು ಸಚಿವರ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿದೆ. ಸಿಎಂ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧಾರವಾದಂತೆ ಪರಿಶಿಷ್ಟ ಜಾತಿ ಸಮುದಾಯದ ಸಚಿವರ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಖಾಲಿ ಹುದ್ದೆ ನೇಮಕಾತಿಗೆ ತೊಂದರೆಯಾಗುತ್ತಿದೆ. ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ಪ್ರತಿಭಟನೆ ನಡೆಸಿರುವ ಬಗ್ಗೆಯೂ ಪ್ರಸ್ತಾಪಿಸಿ ಒಳಮೀಸಲಾತಿ ವಿಧೇಯಕಕ್ಕೆ ಸಹಿ ಹಾಕುವಂತೆ ಮನವಿ ಮಾಡಿತ್ತು. ಇದರ ಬೆನ್ನಲ್ಲೇ ರಾಜ್ಯಪಾಲರು, ಪರಿಶಿಷ್ಟ ಜಾತಿಗಳ (ಉಪ ವರ್ಗೀಕರಣ) ವಿಧೇಯಕಕ್ಕೆ-2025 ಸಹಿ ಹಾಕಿದ್ದಾರೆ.

ಹಳೇ ಸೂತ್ರದ ಅನ್ವಯ ನೇಮಕಾತಿ

ಹಲವು ಸವಾಲುಗಳ ನಡುವೆ ರಾಜ್ಯ ಸರ್ಕಾರ, ಮೀಸಲಾತಿ ಮಿತಿ ಶೇ.50 ಮೀರದಂತೆ ಒಳಮೀಸಲಾತಿಯೊಂದಿಗೆ ವಿವಿಧ ಇಲಾಖೆಗಳ 56,432 ಸಾವಿರ ಖಾಲಿ ಹುದ್ದೆ ನೇಮಕಕ್ಕೆ ತೀರ್ಮಾನಿಸಿದ್ದು, ನೇಮಕಾತಿಗಾಗಿ ತಾತ್ಕಾಲಿಕ ಪರಿಹಾರ ಕಂಡುಕೊಳ್ಳಲು ಮುಂದಾಗಿದೆ. 15% ಎಸ್ಸಿ ಮೀಸಲಾತಿಗೆ ಒಳಮೀಸಲು ನೀಡಿ ನೇಮಕಾತಿಗೆ ತೀರ್ಮಾನಿಸಿದೆ. ಆದರೆ, ಎಸ್ಸಿ ಒಳ ಮೀಸಲಾತಿ ಶೇ.17 ಇಟ್ಟು ತಕ್ಷಣ ನೇಮಕಾತಿ ಅಸಾಧ್ಯ. ಶೇ.17 ಎಸ್ಸಿ ಮೀಸಲಾತಿ ಜಾರಿಗೆ ಕಾನೂನು ಹೋರಾಟಕ್ಕೆ ಸರ್ಕಾರ ಮುಂದಾಗಬೇಕು. ರಾಜ್ಯಪಾಲರು ಒಳ ಮೀಸಲಾತಿ ಮಸೂದೆಗೆ ಒಪ್ಪಿಗೆ ಕೊಟ್ಟಿದ್ದರೂ ಕಾನೂನು ಸಂಘರ್ಷ ಮುಂದುವರಿಸಬೇಕಿದೆ. ಹೀಗಾಗಿ ಹಳೇ ಸೂತ್ರದ ಅನ್ವಯ ಅಂದರೆ ಶೇ.15 ಎಸ್ಸಿ, ಶೆ.3% ಎಸ್ಟಿ ಮೀಸಲಾತಿಯೊಂದಿಗೆ ನೇಮಕಾತಿಗೆ ತೀರ್ಮಾನಿಸಲಾಗಿದೆ.

ಗೃಹ ಇಲಾಖೆ ಅಭಿಪ್ರಾಯ ಪಡೆಯಲು ಸಂಪುಟ ನಿರ್ಣಯ

ಕರ್ನಾಟಕ ಮರ್ಯಾದಾ ಹತ್ಯೆ ತಡೆಗಟ್ಟುವಿಕೆ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ವಿಧೇಯಕ 2026 ಹಾಗೂ ಕರ್ನಾಟಕ ರೋಹಿತ್ ವೇಮುಲಾ (ಹೊರಗಿಡುವಿಕೆ ಅಥವಾ ಅನ್ಯಾಯ ತಡೆಗಟ್ಟುವಿಕೆ) ಶಿಕ್ಷಣ ಮತ್ತು ಘನತೆಯ ಹಕ್ಕು) ವಿಧೇಯಕ 2026 ಈ ಎರಡೂ ವಿಧೇಯಕಗಳಿಗೆ ಸಂಬಂಧಿಸಿ ಗೃಹ ಇಲಾಖೆಯ ಅಭಿಪ್ರಾಯ ಪಡೆಯಲು ಸಚಿವ ಸಂಪುಟ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಉಭಯ ವಿಧೇಯಕಗಳನ್ನು ಮುಂದಿನ ಸಚಿವ ಸಂಪುಟ ಸಭೆಗೆ ಮುಂದೂಡಲಾಗಿದೆಂದು ಎಚ್.ಕೆ. ಪಾಟೀಲ್ ತಿಳಿಸಿದರು.

ಕಿರುಸುದ್ದಿ

ಡಾ.ಕೆ.ಎನ್.ಅನುರಾಧಾ ಬೆಂ. ಗ್ರಾ. ಜಿಲ್ಲಾಧಿಕಾರಿ

ದೇವನಹಳ್ಳಿ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಜಿಲ್ಲಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತಿದ್ದ ಬಸವರಾಜು.ಎ.ಬಿ.ಅವರನ್ನು ವರ್ಗಾವಣೆ ಮಾಡಿರುವ ಸರಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ.ಕೆ. ಎನ್.ಅನುರಾಧಾ ಅವರನ್ನು ನೂತನ ಜಿಲ್ಲಾಧಿಕಾರಿಯನ್ನಾಗಿ ನೇಮಕ ಮಾಡಿ, ಸರಕಾರದ ಅಧೀನ ಕಾರ್ಯದರ್ಶಿ ಟಿ.ಮಹಾಂತೇಶ್ ಅವರು ಆದೇಶ ಹೊರಡಿಸಿದ್ದಾರೆ.



ರಾಜ್ಯ ಸರಕಾರದ ಕಾರ್ಯಕ್ರಮ ಕುರಿತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

ಗ್ಯಾರಂಟಿಯಿಂದ ರಾಜ್ಯಕ್ಕೆ ಸಾಲದ ಹೊರೆ

ಅರಕಲಗೂಡು: ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆ ಜನರ ಮೇಲೆಯೇ ಸಾಲ ಹೊರಿಸಿವೆ. ಚುನಾವಣೆ ಗೆಲ್ಲುವ ಉದ್ದೇಶದಿಂದ ಜನರ ಹಣವನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಶಾಶ್ವತ ಅಭಿವೃದ್ಧಿ ಕಾಣುತ್ತಿಲ್ಲ ಕೇಂದ್ರ ಎಂದು ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ತಾಲೂಕಿನ ಕೊಡಕಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಇಂತಹ ತಾತ್ಕಾಲಿಕ ಯೋಜನೆಗಳು ಹೆಚ್ಚು ದಿನ ಉಳಿಯುವುದಿಲ್ಲ, ದೇಶದ ಭವಿಷ್ಯ ಗಮನದಲ್ಲಿಟ್ಟು ಎಚ್ಚರಿಕೆಯಿಂದ ತೀರ್ಮಾನ ಕೈಗೊಳ್ಳಬೇಕು ಎಂದು ಜನತೆಗೆ ಕರೆ ನೀಡಿದರು. ರಾಜ್ಯ ಸರ್ಕಾರ ಗ್ಯಾರಂಟಿ ಜಾರಿಯಿಂದ ನಾಡು ಸುಭಿಕ್ಷವಾಗಿದೆ. ಕುಟುಂಬಗಳು ಉತ್ತಮ ಜೀವನ ನಡೆಸುತ್ತಿವೆ ಎಂದು ಹೇಳುತ್ತಿದೆ. ಆದರೆ ವಾಸ್ತವ ಪರಿಸ್ಥಿತಿ ಭಿನ್ನವಾಗಿದೆ ಎಂದು ಟೀಕಿಸಿದರು. ಭಾರತ ಆರ್ಥಿಕವಾಗಿ ವಿಶ್ವದಲ್ಲಿ ಮೂರನೇ ದಾಪುಗಾಲಿಡುತ್ತಿದೆ. ಸ್ಥಾನಕ್ಕೇರಲು ಆದರೆ ರಾಜ್ಯದಲ್ಲಿ ಉದ್ಯೋಗ ಸಮಸ್ಯೆ ಗಂಭೀರವಾಗಿದೆ ಎಂದು ಧಾರವಾಡ ಪ್ರತಿಭಟನೆ ಉಲ್ಲೇಖಿಸಿ ಬೇಸರ ಹೊರ ಹಾಕಿದರು.



ಸರ್ಕಾರ 76 ಸಾವಿರ ಶಿಕ್ಷಕರ ನೇಮಕಾತಿ ಮಾಡದೇ ವಿಳಂಬ ಮಾಡುತ್ತಿದೆ. ಶಾಲೆಗಳಲ್ಲಿ ಶಿಕ್ಷಕರ ಕೊರತೆ ತೀವ್ರವಾಗಿದೆ. ಕಳೆದ ಮೂರು ವರ್ಷದಿಂದ ಯಾವುದೇ ಉದ್ಯೋಗಾವಕಾಶ ಸೃಷ್ಟಿಸಿಲ್ಲ, ಯುವಕರು ನಮ್ಮ ಮನೆ ಬಾಗಿಲಿಗೆ ಬಂದಾಗ ಮನಸ್ಸಿಗೆ ನೋವಾಗುತ್ತದೆ. ಮುಖ್ಯ ಮಂತ್ರಿ ಸಿದ್ದರಾಮಯ್ಯ ಮೊದಲ ಬಾರಿ ಅಧಿಕಾರಕ್ಕೆ ಬಂದಾಗ 2.5 ಲಕ್ಷಕ್ಕೂ ಹೆಚ್ಚು ಹುದ್ದೆ ನೇಮಕಾತಿ ಮಾಡುವುದಾಗಿ ಹೇಳಿದ್ದರು. ಆದರೆ , ಈವರೆಗೂ ಆಗಿಲ್ಲ, ಈಗಲೂ ಅಷ್ಟೇ ಪ್ರಮಾಣದ ಸಿಬ್ಬಂದಿ ಕೊರತೆ ಮುಂದುವರಿದಿದೆ ಎಂದು ಆರೋಪಿಸಿದರು. 2 ವರ್ಷ ಗ್ಯಾರಂಟಿ ಹೆಸರಿನಲ್ಲಿ ಕಾಲ ಕಳೆಯಲಾಗಿದೆ. ಇದೀಗ ಸಿಎಂ ಕುರ್ಚಿ ವಿಚಾರದಲ್ಲೇ ಸಮಯ ವ್ಯರ್ಥವಾಗುತ್ತಿದೆ. ಶಾಸಕರು ಸಚಿವ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿದ್ದಾರೆ. ಅಭಿವೃದ್ಧಿ ವಿಷಯಕ್ಕೆ ಕಿಂಚಿತ್ತೂ ಗಮನ ಇಲ್ಲ, ವಿಪಕ್ಷಗಳು ಅಕ್ರಮ ಆರೋಪ ಮಾಡಿದಾಗ ದಾಖಲಾತಿ ಕೇಳಲಾಗುತ್ತದೆ. ಬಿಜೆಪಿ ಆಡಳಿತದಲ್ಲಿ ಪೇ ಸಿಎಂ ಆರೋಪ ಕೇಳಿ ಬಂದಿತ್ತು. ನಿಮ್ಮ ಸರ್ಕಾರ ಬಂದ ಬಳಿಕ ಯಾರ ಮೇಲೆ ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು. ಶೇ.40 ಕಮಿಷನ್ ಆರೋಪದ ಮೂಲಕ 136ಸ್ಥಾನ ಗೆದ್ದಿದ್ದೀರಿ. ಕ್ರಮ ಕೈಗೊಳ್ಳುವ ಧೈರ್ಯ ಇದ್ದರೆ ಯಾರು ಕಮಿಷನ್ ಪಡೆದಿದ್ದಾರೆ ಹೇಳುತ್ತೇವೆ ಎಂದು ಗುತ್ತಿಗೆದಾರರು ಹೇಳುತ್ತಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ ಎದುರಾಗಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವುದು ಮುಖ್ಯ. ರಾಜ್ಯ ರಾಜಕೀಯಕ್ಕೆ ನಾವು ಪ್ರವೇಶ ಹಾಗೂ ಸಿಎಂ ಸ್ಥಾನ ಕುರಿತು ಮಾತನಾಡಿ, ನಾನು ಸಿಎಂ ಆಗುವುದು ಮುಖ್ಯವಲ್ಲ, ಜನರ ಬದುಕು ಸರಿಪಡಿಸಬೇಕು. ಈ ಕೆಟ್ಟ ಸರ್ಕಾರ ಹೋಗಬೇಕೆಂಬುದು ನನ್ನ ಆದ್ಯತೆ. 2028ಕ್ಕೆ ಮುಖ್ಯಮಂತ್ರಿ ಆಗಬೇಕೆಂದು ಹಲವರು ಸರದಿಯಲ್ಲಿದ್ದಾರೆ. ನಾವು ಯಾರನ್ನೂ ಓವರ್‌ಟೇಕ್ ಮಾಡಿ ಆಗಬೇಕೆಂದಿಲ್ಲ, ನಮ್ಮ ಕರ್ತವ್ಯ ಮಾಡಬೇಕು, ಫಲಾಫಲ ದೇವರಿಗೆ ಬಿಡಬೇಕೆಂದರು. ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ಜತೆ ಮೈತ್ರಿ ಬಗ್ಗೆ ಇನ್ನೂ ಯಾವುದೇ ಮಾತುಕತೆ ಆಗಿಲ್ಲ, ಎರಡು ಪಕ್ಷಗಳೂ ಒಪ್ಪಿಕೊಂಡರೆ ಚರ್ಚೆ ಸಾಧ್ಯ. ಸಂದರ್ಭ ಬಂದಾಗ ಮಾತನಾಡುತ್ತೇವೆ. ಕೋರ್ಟ್ ಆದೇಶ ಹಿನ್ನೆಲೆ ಜಿಪಂ-ತಾಪಂ, ಸ್ಥಳೀಯ ಸಂಸ್ಥೆಗಳ ಚುನಾವಣೆ ಮೇ ನಲ್ಲಿ ನಡೆಯಬೇಕಿದೆ, ಅದಕ್ಕೆ ನಾವು ಸಿದ್ಧರಿದ್ದೇವೆ. ರಾಜಕೀಯ ನಾಟಕ ಬಿಟ್ಟು ಉಳಿದ ಅವಧಿಯಲ್ಲಾದರೂ ಅಭಿವೃದ್ಧಿಗೆ ಆದ್ಯತೆ ನೀಡಿ ಎಂದು ಆಗ್ರಹಿಸಿದರು.

ಕುರ್ಚಿ ಉಳಿಸಿಕೊಳ್ಳಲು ಕಾಂಗ್ರೆಸ್‌ನಲ್ಲಿ ಕಸರತ್ತು

ಕಾಂಗ್ರೆಸ್‌ನಲ್ಲಿ ಕುರ್ಚಿ ಉಳಿಸಿಕೊಳ್ಳುವ ರಾಜಕೀಯ ನಡೆಯುತ್ತಿದೆ. ಒಂದೊಂದು ಹೆಸರು ಮುಂದೆ ಬಿಡ್ತಾ ಇದ್ದಾರೆ. ಆದರೆ, ಅದು ಕಾರ್ಯರೂಪಕ್ಕೆ ಬರುವ ಸಾಧ್ಯತೆ ಕಡಿಮೆ. ಇದು ಜನರಿಗೆ ಕಾಣುವ ಡ್ರಾಮಾ ಮಾತ್ರ. ಆಸ್ಪತ್ರೆಗಳಲ್ಲಿ ಔಷಧಿ ಇಲ್ಲ, ಇದ್ದರೂ ಅವಧಿ ಮುಗಿದ ಔಷಧಿ ನೀಡುತ್ತಿದ್ದಾರೆ.ಜನರ ಬದುಕಿನ ಜತೆ ಚೆಲ್ಲಾಟ ಆಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ಖಾಲಿ ಹುದ್ದೆ ಭರ್ತಿಗೆ ಕ್ರಮಕೈಗೊಳ್ಳಲಿ

ಒಳಮೀಸಲಾತಿ ಸಮಸ್ಯೆಯಿಂದ ನೇಮಕಾತಿ ವಿಳಂಬವಾಗುತ್ತಿದೆ ಎಂದು ಹೇಳಲಾಗುತ್ತಿದೆ. ಕ್ಯಾಬಿನೆಟ್ ನಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದರೂ ಸ್ಪಷ್ಟ ಕ್ರಮ ಕಾಣಿಸುತ್ತಿಲ್ಲ. ನೀವು ಸರ್ಕಾರದ ಖಜಾನೆ ತುಂಬಿಸುತ್ತಿದ್ದೀರಿ. ಆದರೆ, ಹಣ ದುರುಪಯೋಗ, ವರ್ಗಾವಣೆ ದಂಧೆ ಹಾಗೂ ಅಕ್ರಮ ನಡೆಯುತ್ತಲೇ ಇವೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ದೂರಿದರು.

ರೈತರು ಆತಂಕಪಡುವ ಅಗತ್ಯವಿಲ್ಲ: ಎಚ್‌ಡಿಕೆ

ಹೊಸದಿಲ್ಲಿ: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಉಪನಗರ ವರ್ತುಲ ರಸ್ತೆ (ಎಸ್‌ಟಿಆರ್‌ಆರ್-ಪಶ್ಚಿಮ ಭಾಗ) ಯೋಜನೆಯ ಹೂಡಿಕೆಗೆ ಅನುಮೋದನೆ ನೀಡಿದ ನಂತರವೇ ಪರಿಹಾರ ವಿತರಣೆಯನ್ನು ಪುನರಾರಂಭಿಸಬಹುದು ಎಂದು ಹೆದ್ದಾರಿ ಸಚಿವರು ಪತ್ರ ಮುಖೇನ ನನಗೆ ತಿಳಿಸಿದ್ದಾರೆ. ಹೀಗಾಗಿ ಭೂಮಿ ಕಳೆದುಕೊಂಡಿರುವ ರೈತರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಯೋಜನೆ ಕುರಿತು ಮಾಹಿತಿ ಹಂಚಿಕೊಂಡಿರುವ ಸಚಿವ ಕುಮಾರಸ್ವಾಮಿ ಅವರು, ಯೋಜನೆಯ ಅನುಷ್ಠಾನ ಮತ್ತು ಭೂ ಪರಿಹಾರ ವಿತರಣೆಯ ಬಗ್ಗೆ ಯಾರೂ ಆತಂಕ ಪಡಬೇಕಿಲ್ಲ, ಪ್ರಧಾನಿಗಳು ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುವ ವಿಶ್ವಾಸ ಇದೆ. ಈ ಬಗ್ಗೆ ನಾನು ಪ್ರಧಾನಿಗಳು ಹಾಗೂ ಹೆದ್ದಾರಿ ಸಚಿವರಿಗೆ ಪತ್ರ ಬರೆದಿರುವುದು ಮಾತ್ರವಲ್ಲದೆ, ಖುದ್ದು ಭೇಟಿಯಾಗಿ ಚರ್ಚೆ ನಡೆಸಿದ್ದೇನೆ ಎಂದು ಮಾಹಿತಿ ನೀಡಿದ್ದಾರೆ.

ಯೋಜನೆ ಅನುಷ್ಠಾನ ಹಾಗೂ ಭೂಮಿ ಕಳೆದುಕೊಂಡಿರುವ ರೈತರಿಗೆ ತ್ವರಿತವಾಗಿ ಪರಿಹಾರ ನೀಡುವ ಬಗ್ಗೆ ಕುಮಾರಸ್ವಾಮಿ ಅವರು ಪ್ರಧಾನಿ ಮೋದಿ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದು ವಿನಂತಿಸಿದ್ದರು. ಅಲ್ಲದೆ, ಹಲವು ಬಾರಿ ದಿಲ್ಲಿಯಲ್ಲಿ ಇಬ್ಬರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ರಾಷ್ಟ್ರೀಯ ಹೆದ್ದಾರಿ 948ಎಗೆ ಸಂಪರ್ಕ ಕಲ್ಪಿಸುವ ನೆಲಮಂಗಲ ತಾಲೂಕಿನ ತಾಲೂಕಿನ ಓಬಳಾಪುರದಿಂದ ರಾಮನಗರ ತಾಲೂಕಿನ ಕುಣಗಾಲುವರೆಗೆ, ರಾಮನಗರದ ಕುಣಗಾಲುನಿಂದ ಹೊಸೂರು ತಾಲೂಕಿನ ಎಸ್. ಮುದುಗದಪಲ್ಲಿವರೆಗೆ ಉಪನಗರ ವರ್ತುಲ ರಸ್ತೆ ನಿರ್ಮಾಣ ಯೋಜನೆ ಅನುಷ್ಠಾನಗೊಳಿಸುವ ಹಾಗೂ ರೈತರಿಗೆ ಭೂ ಪರಿಹಾರ ನೀಡುವ ಬಗ್ಗೆ ಪತ್ರದಲ್ಲಿ ಉಲ್ಲೇಖಿಸಿದ್ದರು.

BEFORE THE NOMINEE OF THE DEPUTY REGISTRAR OF CHITS, THIRD ZONE, MALLESHWARAM, AT BANGALORE

DISPUTE NO. DRB-3/CFS/DIS/ 124 /2024-2025

M/s. Margadarsi Chits (K)Pvt. Ltd., No. 801 & 802, South Block, Manipal Center, Dickenson Road, Bangalore-560042
Branch: MARATHAHALLI Rep. by its Foreman /Manager,
SRI. K.S. HARINATH.

OPPONENTS
Mr.JASTI V VS Chowdary And others
OPPONENT No.01
Mr. Jasti VVS Chowdary S/o Jasti Mohana Rao, Senior Associate, Capgemeni Technology Services India Ltd, Divya Sree Tech Park, WhiteField, Bengaluru - 560 066
Also At.
Mr. Jasti VVS Chowdary S/o Jasti Mohana Rao, No. 3, 25th Cross, Kaggadasapura, C.V.Raman Nagar, Bangalore-560 093.

CLAIM AMOUNT: Rs. 56,907/- NOTICE OF CONDITIONAL ATTACHMENT OF IMMOVABLE PROPERTY OF OPPONENT NO.01 UNDER SECTION 68(1) OF THE CHIT FUNDS ACT, 1982, THROUGH PAPER PUBLICATION

1. Whereas, the Disputant has filed the above dispute before the Deputy Registrar of Chits, 3rd Zone Bangalore, under Section 64(1) of the Chit Funds Act-1982, for recovery **Rs. 56,907/- (Rupees Fifty Six Thousand Nine Hundred and Seven Only)** from the Opponent.
2. Whereas it is brought to my notice by the disputant through an application filed under Section 68(1) of the Chit Funds Act, 1982, accompanied by an affidavit stating that the Opponents No.01 is the Member of this chit and now he is contemplating to dispose Off the immovable property belonging to him, as mentioned in the schedule hereunder, with an intention to delay or defeat the enforcement or execution of the award that is likely to be passed in the above dispute against him.
3. The summons / notice issued by RPAD to opponent No.01 appear before this Hon'ble Court on 06/09/2025, is not served. Therefore the Opponent No.01 is hereby summoned to appear in this Court in person on 15 / 03 /2026. at 3.00 P.M. at before the Nominee of the Deputy Registrar of Chits, Third Zone, Sitting at No. 60, 1st Floor, Zenith Squar, Above Mahendra Car Show Room, Outer Ring Road, Ananda Nagar Marathahalli, Bangalore-560037, without fail Opponent to take notice that in default of appearance, the dispute will be heard and disposed ex-parte on merits.
4. Further the opponent No.01 is hereby informed that if he desires to have this attachment raised, he shall furnish cash security to the extent of the dispute claim by depositing the amount to the Disputant Company and producing the original receipt issued by them to this Court on or before .15 / 03/2026, at 3.00 P.M without fail for raising the attachment. If they fail to do so within the stipulated period, this conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTY OF OPPONENT NO.01

ITEM NO.1 All that piece and parcel of House Property Situated at Yerrampalem Village, Gandepalli Mandal, East Godavari District Within the Jurisdication of Sri,Jaggampeta Sub-Registrar Office.Door No.2-110, Survey No.111/1, Southern Portion of Tiled Bungalow House. Extent 38.33 Sq.Yards(32.19 Sq.Meters) and bounded on the: East by: House of Mutyala Buchirayudu, West by: House of Mutyala Bhadrarao, North by: Property of Item No.2, South by: Open Space.

ITEM NO.2 Middle Portion of Tiled Bungalow House. Extent of 55.48 Sq.Yards (46.61 Sq.Meters) Boundaries: East by: House of Mutyala Buchirayudu, West by: House of Mutyala Bhadrarao and Mutyala Chinna, North by: House and Site of Jasti Mohan Rao And Jasti Sathyam, South by: Partly House of Mutyala Buchirayudu and Partly Item No.1,

Both Items together measuring 93.81 Sq. Yards, Including Tiled Bungalow House, RCC Roofing, Doors, Electric Fittings, Water Connections, all easementary rights and appurtenances. Possession of the above property has been handed over today. Customary right of access exists from the eastern side through the southern Side Public Road.

Given under my hand and seal of this office on 25/02/2026, at Bangalore.

NOMINEE OF THE DEPUTY REGISTRAR CHITS, THIRD ZONE, MALLESHWARAM, AT BANGALORE.

ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ (ಸ್ಪೆಷಲ್-7) ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ.

ಆರ್. ಎ (ದೇ) ಸಂಖ್ಯೆ: 186/2025

ನಡುವೆ:
ಅರ್ಜಿದಾರರು: ಶ್ರೀಮತಿ. ಹನುಮಕ್ಕ
ವಿರುದ್ಧ
ಎದುರುದಾರರು:
ತಹಶೀಲ್ದಾರ್ ದೇವನಹಳ್ಳಿ ತಾಲ್ಲೂಕು & ಇನ್ನೊಬ್ಬರು,
2ನೇ ಪ್ರತಿವಾದಿ: -ಶ್ರೀ. ಶ್ರೀನಿವಾಸಮೂರ್ತಿ.
... ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ

2ನೇ ಎದುರುದಾರರಿಗೆ ಪ್ರಕಟಣೆಯ ಮೂಲಕ ಸಮನ್ಸ್:

ಮೇಲ್ಕಂಡ ಅರ್ಜಿದಾರರು, ಮೇಲ್ಕಂಡ ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ (ಸ್ಪೆಷಲ್-7) ರಲ್ಲಿ ಆರ್.ಎ(ದೇ) ಸಂಖ್ಯೆ:- 186/2025 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿಯಲ್ಲಿ ನೀವು 2ನೇ ಪ್ರತಿವಾದಿಗಳಾಗಿರುತ್ತೀರಿ, ಆದುದರಿಂದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ನ್ಯಾಯಾಲಯದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ: 11/03/2026 ರಂದು ಮಧ್ಯಾಹ್ನ 3-00 ಘಂಟೆಗೆ ನಿಗದಿಪಡಿಸಿದೆ ಹಾಗು ನೀವುಗಳು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯದ ಮುಂದೆ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ತಮ್ಮ ಗೈರುಹಾಜರಿಯಲ್ಲಿ ಏಕಪಕ್ಷೀಯವಾಗಿ ವಿಲೇ ಮಾಡಲಾಗುವುದು, ಸದರಿ ಪ್ರಕರಣವನ್ನು ದಿನಾಂಕ: 25.02.2026 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
ರಾಮಚಂದ್ರ ಸಿ.ಡಿ
ಪಿಳ್ಳಂಜಿನಪ್ಪ ಎಂ.ವಿ
ವಕೀಲರು
ದೇವನಹಳ್ಳಿ

Assistant Commissioner, Doddaballapur Sub-Division Doddaballapur, Bangalore Rural Dist

---

ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಶ್ರೀರಂಗಪಟ್ಟಣ

ಸಿ.ಮಿಸ್.ನಂ: 14/2026

ಅರ್ಜಿದಾರರು:- 01) ... ಕೃಷಿಕರು, 02) ... ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ. 03) ...

IN THE COURT OF THE SPECIAL ASSISTANT COMMISSIONER AT DEVANAHALLI
RA(DEV)10/2025

BETWEEN
Smt.Muniyamma. ....Petitioners
AND:
Tahsildar & Another ....Respondents

SUMMONS TO RESPONDENT No.2 OREDR 5 RULE 20 R/W SECTION 151 OF CPC:-

Smt.Munirathnamma W/o A Ashwathnarayana, Aged about 40 years, R/at:- Savakanahalli Village, Kasaba Hobli, Devanahalli Taluk, Bangalore Rural District.

Whereas, the above named Petitioners filed the instant case in respect of the suit schedule property against the respondent No.2. The above case stands posted for the appearance of respondent No.2.

Whereas, the said respondent No.2 hereby summoned/noticed to appear in the said case in person or by a pleader duly instructed. The said case stands posted for the appearance of respondent No.2 **on 11-3-2026 at 11.00a.m.**

The said respondent No.2 is required to appear before this Hon'ble authority at Devanahalli, in default of appearance of respondent No.2 on the day and hour above mentioned the above case will be heard and determined Ex-party.

SUIT SCHEDULE PROPERTY

All the piece and parcel of the property bearing old **Sy No.74/1** measuring to an extent of 0-18 guntas situated at **Savakanahalli Village, Kasaba Hobli, Devanahalli Taluk, Bengaluru Rural District** is bounded on :-
East by: Property of Doddaanjinappa; West by: Property of Narayanaswamy; North by: Property of Manjamma; South by: Property of S M Muniraju;

Given under my hand and seal of this Hon'ble authority on the **25-02-2026.**

By order of the court
SPECIAL ASSISTANT COMMISSIONER DEVANAHALLI

Advocate for Petitioners
Sri Ananda.A.M,
Office at :- Madana gowda Complex, Sulibele Road, Devanahalli Town, Bangalore Rural District.

BEFORE THE NOMINEE OF THE DEPUTY REGISTRAR OF CHITS, THIRD ZONE, MALLESHWARAM, AT BANGALORE

DISPUTE NO. DRB-3/CFS/DIS/ 125 /2024-2025

DISPUTANT
M/s. Margadarsi Chits (K)Pvt. Ltd., No. 801 & 802, South Block, Manipal Center, Dickenson Road, Bangalore-560042
Branch: MARATHAHALLI Rep. by its Foreman /Manager,
SRI. K.S. HARINATH.

OPPONENTS
Mr. C S POOVAPPA And others
OPPONENT No.02
Mrs. C.P.Seema W/o C.S.Poovappa No.92, M.S.S.Residency, SGP Layout, 5th Cross, Whitefield Main Road, Nagondanahalli, Bengaluru-560067.

CLAIM AMOUNT: Rs. 1,56,257/- NOTICE OF CONDITIONAL ATTACHMENT OF IMMOVABLE PROPERTY OF OPPONENT NO.02 UNDER SECTION 68(1) OF THE CHIT FUNDS ACT, 1982, THROUGH PAPER PUBLICATION

1. Whereas, the Disputant has filed the above dispute before the Deputy Registrar of Chits, 3rd Zone Bangalore, under Section 64(1) of the Chit Funds Act-1982, for recovery **Rs.1,56,257/- (Rupees One Lakh Fifty Six Thousand Two Hundred and Fifty Seven Only)** from the Opponent.
2. Whereas it is brought to my notice by the disputant through an application filed under Section 68(1) of the Chit Funds Act, 1982, accompanied by an affidavit stating that the Opponents No.02 is the Guarantor of this chit and now She is contemplating to dispose Off the immovable property belonging to him, as mentioned in the schedule hereunder, with an intention to delay or defeat the enforcement or execution of the award that is likely to be passed in the above dispute against him.
3. The summons / notice issued by RPAD to opponent No.02 appear before this Hon'ble Court on 06/09/2025, is not served. Therefore the Opponent No.02 is hereby summoned to appear in this Court in person on 15 / 03 /2026. at 3.00 P.M. at before the Nominee of the Deputy Registrar of Chits, Third Zone, Sitting at No. 60, 1st Floor, Zenith Squar, Above Mahendra Car Show Room, Outer Ring Road, Ananda Nagar Marathahalli, Bangalore-560037, without fail Opponent to take notice that in default of appearance, the dispute will be heard and disposed ex-parte on merits.
4. Further the opponent No.02 is hereby informed that if She desires to have this attachment raised, he shall furnish cash security to the extent of the dispute claim by depositing the amount to the Disputant Company and producing the original receipt issued by them to this Court on or before 15/03 /2026, at 3.00 P.M without fail for raising the attachment. If they fail to do so within the stipulated period, this conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTY OF OPPONENT NO.02

All that piece and parcel of Residential Vacant Site Bearing No.24, Katha No.92/24 Measuring East to West: 9.14 Meters And North to South : Eastern Side 15.162 Meters and Western Side 13.80 Meters in all totally Measuring 132.35 Sq.Meters (1424 Sq. feet) Carved out of Converted Sy No.92, Measuring 1 Acre 15 Guntas Converted Vide Official Memorandum of the Deputy Commissioner, Bengaluru Rural District, Dated on 30.01.2019 Vide No.LAND10009847, Situated at Yadagondanahalli Village, Anugondanahalli Hobli, Hoskote Taluk, Bengaluru Rural District. With all rights appurtenances whatsoever hereunder or underneath or above the surface and bounded on the: East by: Site No.23, West by: Site No.25 North by: Road, South by: Private Property.

Given under my hand and seal of this office on 25/ 02 /2026, at Bangalore.

NOMINEE OF THE DEPUTY REGISTRAR CHITS, THIRD ZONE, MALLESHWARAM, AT BANGALORE.

ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ (ಸ್ಪೆಷಲ್-7) ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ.

ಆರ್. ಎ (ದೇ) ಸಂಖ್ಯೆ: 233/2025

...

3 & 4ನೇ ಎದುರುದಾರರಿಗೆ ಪ್ರಕಟಣೆಯ ಮೂಲಕ ಸಮನ್ಸ್

...

ಅರ್ಜಿದಾರರ ಪರ ವಕೀಲರು
ರಾಮಚಂದ್ರ ಸಿ.ಡಿ
ಪಿಳ್ಳಂಜಿನಪ್ಪ ಎಂ.ವಿ
ವಕೀಲರು
ದೇವನಹಳ್ಳಿ

Assistant Commissioner, Doddaballapur Sub-Division Doddaballapur, Bangalore Rural Dist

---

ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ (ಸ್ಪೆಷಲ್-7) ದೊಡ್ಡಬಳ್ಳಾಪುರ ಉಪ ವಿಭಾಗ, ದೊಡ್ಡಬಳ್ಳಾಪುರ.

ಆರ್. ಎ (ದೇ) ಸಂಖ್ಯೆ: 74/2025

ನಡುವೆ:
ಅರ್ಜಿದಾರರು: ಶ್ರೀ ಚಿಕ್ಕಣ್ಣ
(SPA ಹೋಲ್ಡರ್ ಆಗಿ ಅರ್ಜಿದಾರ 2 ರಿಂದ 4 ರ ಪರಿಗೆ)
ವಿರುದ್ಧ
ಎದುರುದಾರರು:
ತಹಶೀಲ್ದಾರ್ ದೇವನಹಳ್ಳಿ ತಾಲ್ಲೂಕು & ಇನ್ನೊಬ್ಬರು,
2ನೇ ಪ್ರತಿವಾದಿ: -ಶ್ರೀ.ವೆಂಕಟೇಶಮೂರ್ತಿ,
... ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

2ನೇ ಎದುರುದಾರರಿಗೆ ಪ್ರಕಟಣೆಯ ಮೂಲಕ ಸಮನ್ಸ್

ಮೇಲ್ಕಂಡ ಅರ್ಜಿದಾರರು, ಮೇಲ್ಕಂಡ ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ (ಸ್ಪೆಷಲ್-7) ರಲ್ಲಿ ಆರ್.ಎ(ದೇ) ಸಂಖ್ಯೆ:- 74/2025 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿಯಲ್ಲಿ ನೀವು 2ನೇ ಪ್ರತಿವಾದಿಗಳಾಗಿರುತ್ತೀರಿ, ಆದುದರಿಂದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ನ್ಯಾಯಾಲಯದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ: 11/03/2026 ರಂದು ಮಧ್ಯಾಹ್ನ 3-00 ಘಂಟೆಗೆ ನಿಗದಿಪಡಿಸಿದೆ ಹಾಗು ನೀವುಗಳು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯದ ಮುಂದೆ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ತಮ್ಮ ಗೈರುಹಾಜರಿಯಲ್ಲಿ ಏಕಪಕ್ಷೀಯವಾಗಿ ವಿಲೇ ಮಾಡಲಾಗುವುದು, ಸದರಿ ಪ್ರಕರಣವನ್ನು ದಿನಾಂಕ: 25.02.2026 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
ರಾಮಚಂದ್ರ ಸಿ.ಡಿ
ಪಿಳ್ಳಂಜಿನಪ್ಪ ಎಂ.ವಿ
ವಕೀಲರು
ದೇವನಹಳ್ಳಿ

Assistant Commissioner, Doddaballapur Sub-Division Doddaballapur, Bangalore Rural Dist

---

ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಶ್ರೀರಂಗಪಟ್ಟಣ

ಸಿ.ಮಿಸ್.ನಂ: 13/2026

ಅರ್ಜಿದಾರರು:- 01) ... ವಯಸ್ಸು 65ವರ್ಷ, ಕೃಷಿಕರು, 02) ... ವಯಸ್ಸು 67 ವರ್ಷ, ... ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ...

-:ವಿರುದ್ಧ:-

ಎದುರುದಾರರು:- ತಹಶೀಲ್ದಾರ್‌ರವರು, ... ಶ್ರೀರಂಗಪಟ್ಟಣ

-:ಸಾರ್ವಜನಿಕ ಪ್ರಕಟಣೆ:-

...

ದಿನಾಂಕ : 21.02.2026ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಶ್ರೀರಂಗಪಟ್ಟಣ ಅಪರ ಸಿವಿಲ್ (ಕಿ.ವಿ.) ನ್ಯಾಯಾಧೀಶರವರ ನ್ಯಾಯಾಲಯದಲ್ಲಿ

ಅರ್ಜಿದಾರರ ಪರ ವಕೀಲರು
ಸಿ.ಎಸ್.ವೆಂಕಟೇಶ್ ಬಿ.ಎಸ್ಸಿ.,ಎಲ್.ಎಲ್.ಬಿ ಎನ್‌ರೋಲ್ ನಂ. ಕೆಎಆರ್-831/2008, ... ಶ್ರೀರಂಗಪಟ್ಟಣ ಟೌನ್-571438

ಸಾರ್ವಜನಿಕ ಪ್ರಕಟಣೆ

... Crl.MISC. No.122/2026 ...

CCH-14 HG-30.04.2026

IN THE COURT OF THE XXXI ADDL. CITY CIVIL AND SESSIONS JUDGE AT BENGALURU
P & SC.No.354/2024

BETWEEN:
1. **Rashmi.G.,** W/o. Late M.V. Sevanchandra, Aged about 35 years,
2. **Lavithraaditya.S.,** S/o. Late M.V. Sevanchandra, Aged about 7 years,
3. **Sriaaditya.S.,** S/o. Late M.V. Sevanchandra, Aged about 4 years,

(Since Petitioner No.2 and 3 are minors. They are represented by Natural guardian i.e., Petitioner No.1)
All are residing at No:439, 6th 'A' cross, 4th main, Annapurneshwari Nagar, Health Layout, Sunkadakatte, Bengaluru-560 091. ...PETITIONERS

AND:
1. **Vasantharaju,** S/o. Late Javarappa Gowda, Aged about 71 years,
2. **Smt.Jayalakshmi,** W/o Vasantharaju, Aged about 60 years,
3. **Praveen Kumar.M.V.,** S/o Vasantharaju, Aged about 42 years,

All are residing at No:439, 6th 'A' cross, 4th main, Annapurneshwari Nagar, Health Layout, Sunkadakatte, Bengaluru-560 091. ....RESPONDENTS

PUBLIC NOTICE

Whereas the above named petitioners filed this petition under Section 372 of Indian Succession Act for grant of succession certificate in favour of the petitioners for the properties held by Late Sevanchandra i.e., the husband of the Petitioner No.1 and father of petitioner No.2 and 3 and son of respondent No.1 and 2 and brother of respondent No.3 herein, who was expired on 01.02.2024.

Interested parties are hereby called upon to appear before this court in person or by pleader duly instructed **on 30.04.2026 at 11 a.m.** inform to show cause against the petitioners, failing wherein the appearance will be heard and declared as Ex-parte.

Given under my hand and seal of this court on this the **24th day of February 2026**

BY ORDER OF THE COURT
Senior Sheristedar
City Civil Court, Bengaluru

Advocate or Petitioners
L. Siddesha Ummathur
ADVOCATE
Office: #781, 1st Floor, 60th Cross, 17th 'B' Main 5th Block, (Near Dr. Lakshmana Rao Clinic) Rajajinagar, Bengaluru - 560010
M : 9845300364

IN THE COURT OF THE PRINCIPAL CIVIL JUDGE AND JMFC DODDABALLAPUR
O.S. NO. 512 / 2024

BETWEEN
Smt. Nirmala.
Rep by spa holder
Sri. K. M Ashwathanarayanara reddy. ...Plaintiff
And
Smt. Rathanamma And others. .... Defendants

DEFENDANTS NO 1,2,3,17 AND 21

D-1 Smt. Rathanamma W/o Late Rajanna, Aged about 55 years,
D-2 Smt. Pankaja D/o Late Rajanna Aged about 30 years
D-3 Smt. Radha D/o Late Rajanna Aged about 23 years
D-17 Sri. Veeranna @ Eranna S/o Late Munishamappa, Aged aout 75 years,
D-21 Smt. Tayamma W/o Sri. Rajanna D/o Late Munishamappa

All are r/at kasavanahalli Village, Kasaba Hobli, veerapura post, Doddaballapura Taluk, Bengaluru Rural District

NOTICE TO DEFENDANTS

Whereas the plaintiff has instituted the above case against you for the relief injunction in respect of Sy No 30/1 totally measuring 2 acre 20 guntas with 2 gunta karab, of kasavanahalli Kasaba Hobli, Doddaballapura, before Hon'ble Prl civil and JMFC judge at Doddaballapura, you have here by directed to appear before this Hon'ble court in person or through an Advocate and to contest the proceeding **at 11 AM On 16/4/26.** Before Prl Civil Judge and JMFC Doddaballapura, failing which the matter will be treated as exparty in your absence, and the Hon'ble court will be decide the above case. Accordance with law.

SCHEDULE

ALL that piece and parcel of the land bearing **Sy No 30/1,** totally measuring 2 acre 30 guntas including 02 Karab situated at **Kasavanahalli Village, Kasaba Hobli, Doddabakllapura Taluk, Bengaluru Rural District** and bounded on
East by: Sri. Marapp's property, West by: Sri. Siddaramaiah's property, North by : Road and Chikkramaiah's property, South by: Munishamappa's property

Given under hand the seal date. **25/2/2026**

By Order of the Court
Chief Ministerial Officer
Prl Civil Judge & JMFC
Doddaballapura

Advocate for plaintiff
M.B. Shankaregowda
No 62/2, 1st floor, 27th Cross, Cubbonpet Main Road Bengaluru - 560002

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ದೂರವಾಣಿ : 0836- 2747944(ಕ) Fax No.: 0836-2741209 E-mail: eepwddha@gmail.com

ಕ್ರಮಂ : ಕಾನಿಇಂಧಾ/ಗುತ್ತಿಗೆ/ಪಿ.ಬಿ.,2,,4,5/2025-26/6752 ದಿನಾಂಕ: 25-02-2026

ಟೆಂಡರ್ ಪ್ರಕಟಣೆ I.F.T – KW – 1, 2, & 4
ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಕೆ ಡಬ್ಲ್ಯೂ-1, 2, 4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (kppp.karnataka.gov.in) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಲೆಕ್ಕಶೀರ್ಷಿಕೆ:- 3054-03-337-0-05-200 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ ಅಡಿ, 3054-04-105-0-01-200 MDR Bridge, 3054-03-102-0-01-200 SH Bridge, 3054-03-337-0-05-200 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ, 2216-07-053-0-01-200 ಲೋಕೋಪಯೋಗಿ ವಸತಿ ಹಾಗೂ ನ್ಯಾಯಾಂಗ ವಸತಿ ಗೃಹಗಳ ದುರಸ್ತಿ/ನಿರ್ವಹಣೆ, 5054-04-337-0-01-154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ, 3054-04-337-1-10-200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ, 4059 ಇಲಾಖಾ ಕಟ್ಟಡ, 2025-26ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಲೆಕ್ಕಶೀರ್ಷಿಕೆ 4059-80-051-0-60-132 ಮೂಲಸೌಕರ್ಯ ಬಂಡವಾಳ ವೆಚ್ಚ ಅಡಿ, 71-ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರ, 75-ಕಲಘಟಗಿ ವಿಧಾನಸಭಾ ಕ್ಷೇತ್ರ, 72-ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರ, 70- ಹುಬ್ಬಳ್ಳಿ-ಧಾರವಾಡ-ಕುಂದಗೋಳ ವಿಧಾನಸಭಾ ಕ್ಷೇತ್ರ , 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ-ಬಂಡವಾಳ ವೆಚ್ಚ, 8443 DPR ಹಾಗೂ 2059-80-053-4-00-200 ಯೋಜನೆ ಅಡಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

General :- (1) PWD/2025-26/SE0537/CALL-2 (2) PWD/2025-26/SE0722/CALL-2 (3) PWD/2025-26/SE0580/ CALL-2 (4) PWD/2025-26/BD/WORK_INDENT32641 (5) PWD/202526/BR/WORK_INDENT31536(Extension) (6) PWD/2025-26/SE0723/CALL-3 (7) PWD/2025-26/SE0476/CALL-2 (8) PWD/2025-26/SE0584/CALL-2 (9) PWD/2025-26/BD/WORK_INDENT27630/CALL-3 10) PWD/2025-26/BD/WORK_INDENT30906/CALL-2 (11) PWD/2025-26/BD/WORK_INDENT 31251 (12) PWD/2025-26/SE1049 (13) PWD/2025-26/BD/WORK_INDENT31931 (14) PWD/2025-26/OW/WORK_INDENT33258 (15) PWD/2025-26/BG/WORK_INDENT31540(Extension)
SC:- (16)PWD/2025-26/BR/WORK_INDENT32450 (17)PWD/2025-26/BR/WORK_INDENT32449 (18)PWD/2025-26/SE0506/CALL-2 (19) PWD/2025-26/SE0505/CALL-2
CAT-II(A):- (20)PWD/2025-26/SE0603/CALL-2 (21) PWD/2025-26/SE0602/CALL-3
Calander of Events:- 1) ಪ್ರೀಬಿಡ್/ಆಕ್ಷೇಪಣೆಯನ್ನು ಸಲ್ಲಿಸುವ ಕೊನೆಯ ದಿನಾಂಕ: 07.03.2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 10.03.2026 (ಸಾಯಂಕಾಲ 04:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11.03.2026 (ಸಾಯಂಕಾಲ 04:30 ಗಂಟೆಯ ನಂತರ) 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.03.2026 (ಸಾಯಂಕಾಲ 04:30 ಗಂಟೆಯ ನಂತರ.

General :- 1) PWD/2025-26/BR/WORK_INDENT34072 (2) PWD/202526/RD/WORK_INDENT 27458/ CALL-2 (3) PWD/2025-26/RD/WORK_INDENT31526 (4) PWD/2025 26/BG/WORK_INDENT 31527 (5) PWD/20226/RD/WORK_INDENT31535(Extension) (6) PWD/2025-26/RD/WORK_INDENT31489(Extension) (7) PWD/2025 26/RD/WORK_INDENT31550(Extension) (8) PWD/2025-26/RD/WORK_INDENT31544/ CALL-2 (9) PWD/2025-26/RD/WORK_INDENT 31546(Extension) (10) PWD/2025-26/RD/WORK_INDENT27826/CALL-2 (11) PWD/2025-26/RD/WORK_INDENT30736(Extension) (12) PWD/2025-26/RD/WORK_INDENT31521 (Extension) (13) PWD/2025-26/RD/WORK_INDENT31522(Extension) (14) PWD/2025-26/BR/WORK_INDENT31516(Extension) (15) PWD/2025-26/RD/WORK_INDENT33963 (16) PWD/2025 -26/RD/WORK_INDENT32604 (17) PWD/2025-26/PREQUAL_TENDER_NUMBER_34
CAT-II(A):- 18) PWD/2025-26/RD/WORK_INDENT33867(EXTENTION)
Calander of Events:- 1) ಪ್ರೀಬಿಡ್/ಆಕ್ಷೇಪಣೆಯನ್ನು ಸಲ್ಲಿಸುವ ಕೊನೆಯ ದಿನಾಂಕ: 23.03.2026 (ಬೆಳಿಗ್ಗೆ 12:30 ಗಂಟೆಯವರೆಗೆ) 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 24.03.2026 (ಸಾಯಂಕಾಲ 04:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25.03.2026 (ಸಾಯಂಕಾಲ 04:30 ಗಂಟೆಯ ನಂತರ) 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.03.2026 (ಸಾಯಂಕಾಲ 04:30 ಗಂಟೆಯ ನಂತರ)

ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ http://www.kppp.karnataka.gov.in ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/1282/2025-26/ದೇಶಪಾಂಡೆಪಬ್ಲಿಸಿಟಿ

ಕಿರುಸುದ್ದಿ

ಇಂದು ದೊಡ್ಡಬಳ್ಳಾಪುರದಲ್ಲಿ ಉದ್ಯೋಗ ಮೇಳ

• ದೊಡ್ಡಬಳ್ಳಾಪುರ: ಇಲ್ಲಿನ ಮಾದಗೊಂಡನಹಳ್ಳಿ ರಸ್ತೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಫೆ.27ರಂದು ಆಯೋಜಿಸಲಿರುವ ಉದ್ಯೋಗಮೇಳಕ್ಕೆ ಆಕಾಂಕ್ಷಿಗಳು ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ಎ.ಬಿ.ಬಸವರಾಜು ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೌಶಲಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ದೊಡ್ಡಬಳ್ಳಾಪುರ ತಾಲೂಕು ಆಡಳಿತ, ದೊಡ್ಡಬಳ್ಳಾಪುರ ಕೈಗಾರಿಕೆಗಳ ಸಂಘ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಡ್ಡಬಳ್ಳಾಪುರ ಇವರ ಸಂಯುಕ್ತಾಶ್ರಯದಲ್ಲಿ ಉದ್ಯೋಗಮೇಳ ಆಯೋಜಿಸಲಾಗುತ್ತಿದ್ದು ಉದ್ಯೋಗಮೇಳದಲ್ಲಿ ಅಂದಾಜು100 ಕ್ಕೂ ಹೆಚ್ಚು ನಿಯೋಜಕರು, ಕಂಪನಿಗಳು ಭಾಗವಹಿಸಿ ಖಾಲಿ ಇರುವ 3000ಕ್ಕಿಂತ ಹೆಚ್ಚು ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆಂದರು. ಉದ್ಯೋಗಮೇಳದಲ್ಲಿ ಭಾಗವಹಿಸುವ ಉದ್ಯೋಗಕಾಂಕ್ಷಿಗಳು https://bangalorerural.nic.in ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ. ಉದ್ಯೋಗಮೇಳದ ದಿನವೂ ಕೂಡ ಅಭ್ಯರ್ಥಿಗಳ ನೋಂದಣಿ ಕೌಂಟರ್‌ಗಳಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಭಾಗವಹಿಸಬಹುದು. 10ನೇ ತರಗತಿಗಿಂತ ಕಡಿಮೆ, 10ನೇ ತರಗತಿ, ಪಿಯುಸಿ, ಐಟಿಐ, ಡಿಪ್ಲೋಮಾ, ಇಂಜಿನಿಯರಿಂಗ್, ಪದವಿ ಹಾಗೂ ಸ್ನಾತಕೋತ್ತರ ಪದವಿ ಹೊಂದಿರುವ ಮತ್ತು ವಿವಿಧ ತರಬೇತಿ ಸಂಸ್ಥೆಯಲ್ಲಿ ಕೌಶಲ ತರಬೇತಿ ಪಡೆದ ಅಭ್ಯರ್ಥಿಗಳು ಭಾಗವಹಿಸಬಹುದು. ಉದ್ಯೋಗ ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಕನಿಷ್ಠ ಐದು ಬಯೋಡಾಟ(ಸ್ವ-ವಿವರ)ಗಳ ಪ್ರತಿಯೊಂದಿಗೆ ಭಾಗವಹಿಸಬಹುದಾಗಿದೆ. ಅಭ್ಯರ್ಥಿಗಳು ಯಾವುದೇ ಶುಲ್ಕ ಪಾವತಿಸುವಂತಿಲ್ಲ ಎಂದು ತಿಳಿಸಿದ್ದಾರೆ.

ಪ್ರಶಸ್ತಿಗೆ ಅರ್ಜಿ ಆಹ್ವಾನ

• ಹೊಸಕೋಟೆ: ಸಮಾಜ ಕಲ್ಯಾಣ ಇಲಾಖೆಯಿಂದ 2026-27ನೇ ಸಾಲಿನ ಡಾ.ಬಾಬು ಜಗಜೀವನ್ ರಾಮ್ ಅವರ 119ನೇ ಹಾಗೂ ಬಾಬಾ ಸಾಹೇಬ್ ಡಾ.ಬಿ.ಆರ್ ಅಂಬೇಡ್ಕರ ಅವರ 135 ಜನ್ಮ ದಿನಾಚರಣೆ ಪ್ರಯುಕ್ತ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಪರಿಶಿಷ್ಟ ಜಾತಿ ಜನಾಂಗದವರಿಗೆ ಪ್ರಶಸ್ತಿ ನೀಡಲು ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಅರ್ಜಿ ಆಹ್ವಾನಿಸಿದೆ. ಅರ್ಹ ವ್ಯಕ್ತಿಗಳು ತಮ್ಮ ಪೂರ್ಣ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಮಾ.10ರೊಳಗೆ ಸಮಾಜ ಕಲ್ಯಾಣ ಇಲಾಖೆ ಆಯುಕ್ತರ ಕಚೇರಿ ,ಬಹುಮಹಡಿಗಳ ಕಟ್ಟಡ, 5ನೇ ಮಹಡಿ , ಡಾ.ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು-560001 ಇಲ್ಲಿಗೆ ನೇರವಾಗಿ ಸಲ್ಲಿಸಲು ಕೋರಲಾಗಿದೆ. ಈ ಸಂಬಂಧ ಪಟ್ಟ ನಮೂನೆಯನ್ನು ಹೊಸಕೋಟೆ ತಾಲೂಕು ಸಮಾಜ ಕಲ್ಯಾಣ ಇಲಾಖೆಯಲ್ಲಿ ಅರ್ಜಿಯನ್ನು ಪಡೆಯಬಹುದಾಗಿದೆಂದು ಸಹಾಯಕ ನಿರ್ದೇಶಕ ಸಿದ್ದರಾಜು ತಿಳಿಸಿದ್ದಾರೆ.

ಜಿಲ್ಲಾ ಯೋಜನಾ ಸಮಿತಿ ಚುನಾವಣೆ: ನಿಷೇಧಾಜ್ಞೆ

• ದೊಡ್ಡಬಳ್ಳಾಪುರ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಯೋಜನಾ ಸಮಿತಿಗೆ ಚುನಾವಣೆಯನ್ನು ಫೆಬ್ರವರಿ 27ರಂದು ಬೆಳಗ್ಗೆ 9ರಿಂದ 1ಗಂಟೆಯವರೆಗೆ ಮತದಾನ ಹಾಗೂ ಅಂದೇ ಮಧ್ಯಾಹ್ನ 3ಗಂಟೆಯಿಂದ ಮತ ಎಣಿಕೆ ಕಾರ್ಯವನ್ನು ಜಿಲ್ಲಾ ಪಂಚಾಯತ್ ಸಭಾಂಗಣ, ಜಿಲ್ಲಾಡಳಿತ ಭವನ, ಬೀರಸಂದ್ರ, ದೇವನಹಳ್ಳಿಯಲ್ಲಿ ನಡೆಸಲಾಗುತ್ತಿದೆ. ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಸಾರ್ವಜನಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಮೂಲಕ ಮುಕ್ತ ಮತ್ತು ನ್ಯಾಯಯುತವಾಗಿ ಚುನಾವಣೆ ಕಾರ್ಯವನ್ನು ನಡೆಸುವ ನಿಟ್ಟಿನಲ್ಲಿ ಫೆಬ್ರವರಿ27ರ ಬೆಳಗ್ಗೆ 8 ಗಂಟೆಯಿಂದ ಫೆ.28ರ ಬೆಳಗ್ಗೆ 8 ಗಂಟೆಯವರೆಗೆ ಜಿಲ್ಲಾ ಪಂಚಾಯತ್ ಸಭಾಂಗಣ, ಜಿಲ್ಲಾಡಳಿತ ಭವನ, ಬೀರಸಂದ್ರಗ್ರಾಮದ ನೂರು ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಜಿಲ್ಲಾಧಿಕಾರಿ ಎ.ಬಿ.ಬಸವರಾಜು ಆದೇಶಿಸಿದ್ದಾರೆ. ಈ ಅವಧಿಯಲ್ಲಿ ಜಿಲ್ಲಾ ಪಂಚಾಯತ್ ಸಭಾಂಗಣ, ಜಿಲ್ಲಾಡಳಿತ ಭವನ, ಬೀರಸಂದ್ರ, ದೇವನಹಳ್ಳಿಯಲ್ಲಿ ನೂರು ಮೀಟರ್ ವ್ಯಾಪ್ತಿಯಲ್ಲಿ ಐದಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಮೆರವಣಿಗೆ ಅಥವಾ ಸಭೆ ಸಮಾರಂಭವನ್ನು ಜರುಗಿಸುವುದನ್ನು ನಿಷೇಧಿಸಲಾಗಿದೆ.

ಬಸ್ ನಿಲ್ದಾಣದಲ್ಲಿ ಅಪರಿಚಿತ ಮಹಿಳೆ ಸಾವು

• ವಿಜಯಪುರ: ಪಟ್ಟಣದ ಬಸ್ ನಿಲ್ದಾಣದಲ್ಲಿ ಗುರುವಾರ ಸುಮಾರು 55 ವರ್ಷದ ಅಪರಿಚಿತ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ. ಸಾರ್ವಜನಿಕರೊಬ್ಬರು ಬೆಳಗ್ಗೆ 11 ಗಂಟೆಗೆ ವಿಜಯಪುರ ಟೌನ್ ಪೊಲೀಸ್ ಠಾಣೆಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಮೃತ ಮಹಿಳೆ ಭಿಕ್ಷುಕಿಯಾಗಿರಬಹುದು ಎನ್ನಲಾಗಿದೆ. ಅನಾರೋಗ್ಯದಿಂದ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತ ಮಹಿಳೆಯ ವಾರಸುದಾರರ ಪತ್ತೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜಘಟ್ಟ ಗ್ರಾಮಸ್ಥರಿಗೆ ನಂದಿಕುಂಟೆಕೆರೆ ಹಸ್ತಾಂತರಿಸಿದ ಧರ್ಮಾಧಿಕಾರಿ ಡಾ:ಡಿ.ವೀರೇಂದ್ರ ಹೆಗ್ಗಡೆ

ಧರ್ಮ-ಕೆರೆಗಳ ಉಳಿವಿಗೆ ಬದ್ಧರಾಗಿ



• ದೊಡ್ಡಬಳ್ಳಾಪುರ: ಶ್ರೀಕ್ಷೇತ್ರವು ಧರ್ಮದ ಉಳಿವಿಗಾಗಿ ದೇವಾಲಯ, ಕೆರೆಗಳ ಉಳಿವಿಗಾಗಿ ಬದ್ಧವಾಗಿರುತ್ತದೆಂದು ಧರ್ಮಸ್ಥಳದ ಧರ್ಮ ಅಧಿಕಾರಿ ಪದ್ಮವಿಭೂಷಣ ಡಾ.ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ತಾಲೂಕಿನ ರಾಜಘಟ್ಟದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಗ್ರಾಮದ ನಂದಿಕುಂಟೆ ಕೆರೆಯ ನಾಮಫಲಕ ಅನಾವರಣ ಹಾಗೂ ಕೆರೆ ಹಸ್ತಾಂತರ ಬಳಿಕ ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಯೋಜನೆಯು ಹಲವಾರು ವರ್ಷದಿಂದ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆಂದರು. ಗ್ರಾಮೀಣಾಭಿವೃದ್ಧಿ ಸಂಸ್ಥೆ ಆರಂಭದಿಂದಲೂ ಸಾಮಾಜಿಕ ಕಾರ್ಯಕ್ರಮ ನಡೆಸಿಕೊಂಡು ಬಂದು ಅದರಲ್ಲಿ ಮುಖ್ಯವಾಗಿ ಸ್ವಾವಲಂಬಿ ಬದುಕಿಗೆ ಸ್ವಉದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ರೈತರು, ಮಹಿಳಾ ಸದಸ್ಯರಿಗೆ ಹೆಚ್ಚಿನ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿದೆಂದು ಹೇಳಿದರು.

ಇಂದು ರಾಜ್ಯಾದ್ಯಂತ ಇಂದಿಗೂ ಸಾರ್ವಜನಿಕ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. ಶಾಸಕರು ಹೇಳಿದಂತೆ ಜಿಲ್ಲೆಯಲ್ಲಿ ತಾಲೂಕಿನಲ್ಲಿ ಇಂತಹ ಕೆರೆಗಳನ್ನು ಗುರುತಿಸಿದಲ್ಲಿ ನಾವು ಅಂತಹ ಕರೆಗಳ ಹೂಳೆತ್ತುವ ಕೆಲಸ ಮಾಡುತ್ತೇವೆಂದರು. ಶಾಸಕ ಧೀರಜ್ ಮುನಿರಾಜು ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಲವು ಕಾರ್ಯಕ್ರಮದಲ್ಲಿ ಕೆರೆ ಹೂಳೆತ್ತುವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುತ್ತಿದೆ. ದೊಡ್ಡಬಳ್ಳಾಪುರದಲ್ಲಿ ಇದುವರೆಗೆ ಹತ್ತು ಕೆರೆಗಳನ್ನು ಹೂಳೆತ್ತಲಾಗಿದೆಂದು ವಿವರಿಸಿದರು.

ನೀರಿನ ಸಂಪನ್ಮೂಲ ಇರದ ತಾಲೂಕು ಎಂದರೆ ದೊಡ್ಡಬಳ್ಳಾಪುರ. ಇಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಮೂಲಕ ಕೆರೆಯನ್ನು ಹೂಳೆತ್ತುವ ಕಾರ್ಯಕ್ರಮದ ಮೂಲಕ ಊರಿನಲ್ಲಿ ನೀರಾವರಿ ಸಮಸ್ಯೆ ಕಡಿಮೆಯಾಗುತ್ತಿದೆ. ಆದ್ದರಿಂದ ದೊಡ್ಡಬಳ್ಳಾಪುರ ಜನತೆಯ ಪರವಾಗಿ ಧನ್ಯವಾದವನ್ನು ಅರ್ಪಿಸುತ್ತೇನೆಂದು ತಿಳಿಸಿದರು.

ಮಾಜಿ ಸಚಿವೆ ರಾಣಿ ಸತೀಶ್ ಮಾತನಾಡಿ, ರಾಜಘಟ್ಟ ಗ್ರಾಮ ಇತಿಹಾಸ ಪ್ರಸಿದ್ಧವಾದ ಈ ಗ್ರಾಮದಲ್ಲಿ ಕೆರೆ ಹೂಳೆತ್ತಿ ಇದರ ಹಸ್ತಾಂತರ ಕಾರ್ಯಕ್ರಮಕ್ಕೆ ವೀರೇಂದ್ರ ಹೆಗ್ಗಡೆ ಅವರು ಆಗಮಿಸಿರುವುದು ನಮ್ಮ ಗ್ರಾಮಕ್ಕೂ ಹಾಗೂ ತಾಲೂಕಿಗೂ ಹೆಮ್ಮೆಯ ವಿಷಯ ಎಂದು ಹೇಳಿದರು. ಕೆರೆ ಉಳಿಸುವುದು ರಾಜಘಟ್ಟ ಗ್ರಾಪಂ ಹಾಗೂ ಕೆರೆ ಸಮಿತಿ ಹಾಗೂ ಊರಿನವರ ಜವಾಬ್ದಾರಿಯಾಗಿರುತ್ತದೆ. ಇದನ್ನು ಉಳಿಸಿಕೊಂಡು ಹೋಗಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವೀರೇಂದ್ರ ಹೆಗ್ಗಡೆ ಅವರ ಪುತ್ರಿ ಶ್ರದ್ಧಾ ಅಮಿತ್, ಕೆರೆ ಸಮಿತಿ ಅಧ್ಯಕ್ಷ ಆನಂದ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮುನಿರಾಜು, ಧರ್ಮಸ್ಥಳ ಯೋಜನೆ ಪ್ರಾದೇಶಿಕ ನಿರ್ದೇಶಕ ಶೀನಪ್ಪ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯೋಜನಾಧಿಕಾರಿಗಳು ಮೇಲ್ವಿಚಾರಕರು, ಗ್ರಾಮಸ್ಥರು ಸಂಘ-ಸಂಸ್ಥೆಯ ಸದಸ್ಯರು ಉಪಸ್ಥಿತರಿದ್ದರು.

ಪೋಷಕರನ್ನು ಕಡೆಗಣಿಸಬಾರದು



• ದಾಬಸ್‌ಪೇಟೆ: ವಯಸ್ಸಾದ ಮೇಲೆ ಮಕ್ಕಳು ಗಮನಿಸುವುದಿಲ್ಲ, ಅಂತಹವರಿಗೆ ಅನುಕೂಲವಾಗಲಿಎಂದುನಾವುಮಹಿಳಾಜ್ಞಾನವಿಕಾಸಕಾರ್ಯಕ್ರಮದಲ್ಲಿ ವಾತ್ಸಲ್ಯ ಮನೆ ಕಟ್ಟಿಕೊಡುತ್ತಿದ್ದೇವೆಂದು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗಡೆ ತಿಳಿಸಿದರು.

ಬುಧವಾರ ನೆಲಮಂಗಲ ತಾಲೂಕು ಕಸಬಾ ನಿಜಗಲ್ ಗ್ರಾಮದ ಲಕ್ಷ್ಮಮ್ಮ ಅವರ ವಾತ್ಸಲ್ಯ ಮನೆ ಉದ್ಘಾಟಿಸಿ ಅವರು ಮಾತನಾಡಿ, ವಾತ್ಸಲ್ಯಕಿಟ್‌ನಲ್ಲಿ ಪೌಷ್ಟಿಕವಾದ ಆಹಾರ ಪದಾರ್ಥ ಹಾಗೂ ಪ್ರತಿ ತಿಂಗಳು ಮಾಸಾಶನ ಕೊಡುವ ಮೂಲಕ ನಿರ್ಗತಿಕ ಮಹಿಳೆಯರು ಯಾವುದೇ ಆತಂಕ ಇಲ್ಲದೆ ಜೀವನ ನಡೆಸಲು ಸಹಾಯ ಮಾಡಲಾಗುತ್ತಿದೆ. ಗ್ರಾಮಸ್ಥರು ಇಂತಹವರನ್ನು ಪ್ರೀತಿಯಿಂದ ನೋಡಬೇಕು. ಅವರಲ್ಲಿ ಅನಾಥರು ಅನುಭವ ಭಾವನೆ ಬರದಂತೆ ಸಹಕರಿಸಬೇಕೆಂದು ತಿಳಿಸಿದರು. ಕೆರೆ ಹೂಳೆತ್ತುವುದಕ್ಕೆ ನಮ್ಮ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಒತ್ತು ಕೊಟ್ಟಿದೆ. ಈಗಾಗಲೇ ಬೆಂಗಳೂರು ವ್ಯಾಪ್ತಿಯಲ್ಲಿ 47 ಕೆರೆಯನ್ನು ಅಭಿವೃದ್ಧಿಪಡಿಸಲಾಗಿದೆ. ಒಟ್ಟು ರಾಜ್ಯದಲ್ಲಿ ಸಾವಿರ ಕೆರೆಯನ್ನು ಅಭಿವೃದ್ಧಿಪಡಿಸುವ ಗುರಿ ಇಟ್ಟುಕೊಡಲಾಗಿದೆಂದರು. ಕೆರೆ ಹೂಳೆತ್ತುವುದರಿಂದ ಅಲ್ಲಿ ಸಿಗುವ ಮಣ್ಣು ತೆಗೆದುಕೊಂಡು ರೈತರು ತಮ್ಮ ಹೊಲ ಹಾಗೂ ತೋಟಗಳಿಗೆ ಬಳಸಿಕೊಂಡು ಉತ್ತಮ ಬೆಳೆ ಬೆಳೆಯಬಹುದು. ಕೆರೆಯಲ್ಲಿ ನೀರು ನಿಂತು ಅಂತರ್ಜಲ ಹೆಚ್ಚುತ್ತದೆ. ಕೆರೆಯ ಸುತ್ತಮುತ್ತ ಮರ ಗಿಡಗಳಿಗೆ ಹಸಿರಾಗಿ ಪ್ರಾಣಿ ಪಕ್ಷಿಗಳು ಉಳಿಯುತ್ತವೆ ಎಂದು ಹೇಳಿದರು. ವಾತ್ಸಲ್ಯ ಮನೆ ಯೋಜನೆಯಲ್ಲಿ ನಿರ್ಗತಿಕರಿಗೆ ಮನೆ ಕಟ್ಟಿಕೊಡಲು 11 ಕೋಟಿ 45 ಲಕ್ಷ ರೂಪಾಯಿ ಉಪಯೋಗಿಸಿದ್ದೇವೆ. ವಾತ್ಸಲ್ಯ ಕಿಟ್ ಮಾಸಾಶನ ಕೂಡ ಬರಲಿದೆ. ಇದರಿಂದ ನೆಮ್ಮದಿ ಯಿಂದ ಜೀವನ ನಡೆಸಲಿ ಎಂದು ಶುಭ ಕೋರಿದರು. ಈ ಕಾರ್ಯ ಕ್ರಮದಲ್ಲಿ ವೀರೇಂದ್ರಗಡೆ ಅವರ ಮಗಳು ಶ್ರದ್ಧಾಮಿತ್, ಬೆಂಗಳೂರು ಪ್ರಾದೇಶಿಕ ನಿರ್ದೇಶಕ ಸೀನಪ್ಪ ಎಂ., ಬೆಂಗಳೂರು ಗ್ರಾಮಾಂತರ ಜಿಲ್ಲಾ ನಿರ್ದೇಶಕರಾದ ಉಮರಬ್ಬ, ತಾಲೂಕು ಯೋಜನಾಧಿಕಾರಿ ಸುಜಾತ ಶೆಟ್ಟಿ, ವಲಯ ಮೇಲ್ವಿಚಾರಕರಾದ ಹರೀಶ್ ಎಂ.ಟಿ, ಜ್ಞಾನ ವಿಕಾಸ ಯೋಜನಾಧಿಕಾರಿ ಸಂಗೀತ ಹಾಗು ಸಮನ್ವಯಾಧಿಕಾರಿ ಜ್ಯೋತಿಶೆಟ್ಟಿ, ತಾಲೂಕಿನ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು, ಶೌರ್ಯ ಘಟಕದ ಸದಸ್ಯರು ಒಕ್ಕೂಟದ ಅಧ್ಯಕ್ಷರು, ಗ್ರಾಮಸ್ಥರಿದ್ದರು.


ಕನಸವಾಡಿಯಲ್ಲಿ ಬ್ರಹ್ಮರಥೋತ್ಸವ

• ದೊಡ್ಡಬಳ್ಳಾಪುರ: ಇತಿಹಾಸ ಪ್ರಸಿದ್ಧ ಚಿಕ್ಕ ಮಧುರೆ ಶನಿಮಹಾತ್ಮಸ್ವಾಮಿ ಬ್ರಹ್ಮರಥೋತ್ಸವವನ್ನು ತಾಲೂಕಿನ ಕನಸವಾಡಿ ಗ್ರಾಮದಲ್ಲಿ ಗುರುವಾರ ಅದ್ದೂರಿಯಾಗಿ ಆಚರಿಸಲಾಯಿತು.

ಪ್ರತಿವರ್ಷ ಮಹಾಶಿವರಾತ್ರಿ ಬಳಿಕ ಒಂಬತ್ತು ದಿನದ ನಂತರ ನಡೆಯುವ ಈ ಬ್ರಹ್ಮರಥೋತ್ಸವಕ್ಕೆ ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ತುಮಕೂರು ಸೇರಿದಂತೆ ವಿವಿಧ ಭಾಗದಿಂದ ಭಕ್ತರು ಆಗಮಿಸಿದ್ದರು. ಬೆಳಗ್ಗಿನಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆ, ಹವನ ಹಾಗೂ ಧಾರ್ಮಿಕ ಕಾರ್ಯಕ್ರಮ ನಡೆದವು. ರಥಕ್ಕೆ ಬಾಳೆಹಣ್ಣು ದವನ ಹಾಕಿ ಇಷ್ಟಾರ್ಥ ಸಿದ್ಧಿಗಾಗಿ ಭಕ್ತರು ಪ್ರಾರ್ಥನೆ ಸಲ್ಲಿಸಿದರು. ಬ್ರಹ್ಮರಥೋತ್ಸವದ ಸಂದರ್ಭದಲ್ಲಿ ಭಕ್ತ ಸಾಗರ ಹರಿದುಬಂದಿತ್ತು. ದೇವಸ್ಥಾನ ಹಬ್ಬದ ಸಂಭ್ರಮದಿಂದ ಕಂಗೊಳಿಸಿತು.

ಬಂದಿರುವ ಭಕ್ತರಿಗೆ ಪಾನಕ ಮಜ್ಜಿಗೆ ಹೆಸರುಬೇಳೆ ನೀಡಲಾಯಿತು. ಸಾವಿರಾರು ಭಕ್ತರಿಗೆ ಕಾಳು ಹುಳಿ ಪಾಯಸ ಪ್ರಸಾದ ನೀಡುವ ದೃಶ್ಯ ಸಾಮಾನ್ಯವಾಗಿತ್ತು. ಈ ವರ್ಷ ವಿಶೇಷವಾಗಿ 71ನೇ ಬ್ರಹ್ಮರಥೋತ್ಸವದ ಅಂಗವಾಗಿ ಮಧುರೆ ಹೋಬಳಿಯ ಎಲ್ಲಾ ಗ್ರಾಮದಿಂದ 101 ಮೆರವಣಿಗೆ ದೇವರನ್ನು ಕರೆತರಲಾಗಿತ್ತು.

ಕನಸವಾಡಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ವಿಜೃಂಭಣೆಯಿಂದ ವಿಶೇಷ ಪೂಜೆ ನಡೆಸಲಾಯಿತು.ಅಲ್ಲದೆ ಏಳು ದಿನಗಳ ಕಾಲ ನಾಟಕೋತ್ಸವ ವಿನೋತನ ಕಾರ್ಯಕ್ರಮಗಳಿವೆ.



ಬೆಳ್ಳಿಪಲ್ಲಕಿಯಲ್ಲಿ ದೇವರ ಉತ್ಸವ ಮೂರ್ತಿಗಳ ಮೆರವಣಿಗೆ ನಡೆಸಲಾಯಿತು. ಬ್ರಹ್ಮರಥೋತ್ಸವದಲ್ಲಿ ಶಾಸಕ ಧೀರಜ್‌ಮುನಿರಾಜ್, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಚುಂಚೇಗೌಡ, ಶ್ರೀ ಶನಿಮಹಾತ್ಮ ದೇವಾಲಯ ಸಮಿತಿ ಅಧ್ಯಕ್ಷ ಜಿ.ರಾಜಕುಮಾರ್, ಕೆ.ವಿ.ಪ್ರಕಾಶ್ ಸೇರಿದಂತೆ ಮುಖಂಡರಿದ್ದರು.

ಶ್ರೀಗಂಗಮ್ಮ ದೇವಿ ಜಾತ್ರೋತ್ಸವ

• ತಾವರೆಕೆರೆ: ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಪಂ ವ್ಯಾಪ್ತಿಯ ಮಂಚಪ್ಪನಹಳ್ಳಿ ಗ್ರಾಮದಲ್ಲಿ ಗಂಗಮ್ಮ ದೇವಿ ಮೂರನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ ಪಲ್ಲಕ್ಕಿ ಉತ್ಸವ ನಡೆಯಿತು.

2 ದಿನಗಳ ಕಾಲ ನಡೆದ ಜಾತ್ರಾ ಮಹೋತ್ಸವದಲ್ಲಿ 7 ದೇವರ ವಿಶೇಷ ಅಲಂಕೃತ ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಲಾಯಿತು. ವೀರಗಾಸೆ ಹಾಗೂ ಗ್ರಾಮಸ್ಥರಿಂದ ದೀಪೋತ್ಸವ ನಡೆಯಿತು.

ದೇವಾಲಯದ ಪ್ರಧಾನ ಅರ್ಚಕ ಮುನಿಯಪ್ಪ ಮಾತನಾಡಿ, ದೇವಾಲಯ ಸ್ಥಾಪನೆಗೊಂಡು ಮೂರು ವರ್ಷಗಳಾಗಿವೆ. ಪ್ರತಿ ವರ್ಷವೂ ಗ್ರಾಮಸ್ಥರೆಲ್ಲ ಸೇರಿ ಪಕ್ಷಾತೀತವಾಗಿ ಜಾತಿ ಭೇದ ಮರೆತು ಒಗ್ಗಟ್ಟಿನಿಂದ ಶ್ರೀ ಗಂಗಮ್ಮ ದೇವಿ ಜಾತ್ರಾ ಮಹೋತ್ಸವ ನಡೆಸುತ್ತಾ ಬಂದಿದ್ದೇವೆಂದರು. ಅದೇ ರೀತಿ ಸೋಮವಾರ ಸಂಜೆ ಶ್ರೀ ಗಂಗಮ್ಮ ದೇವಿ, ಸಥಲಮ್ಮದೇವಿ, ವೇಣುಗೋಪಾಲಸ್ವಾಮಿ, ಆಂಜನೇಯ ಸ್ವಾಮಿ, ಮುನೇಶ್ವರ ಸ್ವಾಮಿ, ಈರಣ್ಣಪ್ಪ ಸ್ವಾಮಿ, ಶ್ರೀ ಪಟಾಲಮ್ಮ ದೇವಿಯ ಅದ್ಧೂರಿ ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡುವ ಮೂಲಕ ಜಾತ್ರೆಗೆ ಚಾಲನೆ ನೀಡಲಾಯಿತು.



ಮರುದಿನ ಮಂಗಳವಾರ ವೀರಗಾಸೆ ಕುಣಿತದೊಂದಿಗೆ ಅಗ್ನಿಕೊಂಡ ಪ್ರವೇಶಿಸಿ, ದೇವಿಗೆ ಬಲಿದಾನ ನೀಡುವುದರ ಮೂಲಕ ಮಹಾಮಂಗಳಾರತಿ ನಡೆಯಲಿದೆ. ಗ್ರಾಮದಲ್ಲಿ ಕಾಲಕಾಲಕ್ಕೆ ಮಳೆಬೆಳೆಯಾಗಿ ರೈತರ ಮುಖದಲ್ಲಿ ಸಂತಸ ಮೂಡಬೇಕು. ಉತ್ತಮ ಆರೋಗ್ಯದೊಂದಿಗೆ ಗ್ರಾಮದ ಜನತೆ ಸದೃಢವಾಗಿರಲಿ ಎಂದು ಈ ರೀತಿಯ ಜಾತ್ರಾ ಮಹೋತ್ಸವ ನಡೆಸುತ್ತಿದ್ದೇವೆ ಎಂದು ತಿಳಿಸಿದರು. ತಾವರೆಕೆರೆ ಹಾಗೂ ಮಂಚಪ್ಪನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ನೂರಾರು ಸಂಖ್ಯೆಯಲ್ಲಿ ದೀಪೋತ್ಸವ, ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ್ದರು.

ಮಾ.1ಕ್ಕೆ ದ್ರೌಪದಾಂಬಾದೇವಿ ಕರಗೋತ್ಸವಕ್ಕೆ ಸಕಲ ಸಿದ್ಧತೆ

• ತಾವರೆಕೆರೆ: ನಂದಗುಡಿ ಹೋಬಳಿ ಶಿವನಾಪುರ ಗ್ರಾಮ ಪಂಚಾಯಿತಿಯ ಭೀಮಾಪುರ ಗ್ರಾಮದಲ್ಲಿ ವಹ್ನಿಕುಲಸ್ಥರಿಂದ ಶ್ರೀ ದ್ರೌಪದಾಂಬಾ ಸಮೇತ ಶ್ರೀ ಧರ್ಮರಾಯ ಸ್ವಾಮಿ 5ನೇ ವರ್ಷದ ಕರಗ ಮಹೋತ್ಸವ ಫೆಬ್ರವರಿ 26 ಹಸೀಕರಗ ದ್ರೌಪದಾಂಬಾ ದೇವಿ ಕಲ್ಯಾಣೋತ್ಸವ ಮಾ.1ರಂದು ಭಾನುವಾರ ಕರಗ ಶಕ್ತ್ಯೋತ್ಸವ ಹಮ್ಮಿಕೊಳ್ಳಲಾಗಿದೆ. ಬಿ.ಎ.ಶ್ರೀಧರ್ ಅವರು ಎರಡನೇ ಭಾರಿಗೆ ಕರಗವನ್ನು ಹೊರಲಿದ್ದಾರೆ. ಕಾರ್ಯಕ್ರಮದಲ್ಲಿ ಆದಿಶಕ್ತಿ ಮಹಾಸಂಸ್ಥಾನ ಮಠ ವಹ್ನಿಕುಲ ಕ್ಷತ್ರಿಯ ಗುರುಪೀಠದ ಪೀಠಾಧಿಪತಿ ಶ್ರೀ ಪ್ರಣವಾನಂದಾಪುರಿ ಮಹಾ ಸ್ವಾಮೀಜಿಗಳ ಆಶೀರ್ವಾದದೊಂದಿಗೆ ಕುಲದ ಗೌಡರು ಲೇಟ್ ಪೆರಿಯಣ್ಣ ಅವರ ಮಗ ಬಿ.ಪಿ.ಕೃಷ್ಣಪ್ಪ ಯಜಮಾನರಾದ ಲೇಟ್ ಮುನಿಚನ್ನಪ್ಪ ಅವರ ಮಗ ಎಂ. ಮಂಜುನಾಥ್ ಹಾಗೂ ಪಟೇಲ್ ಸಿ.ನಾರಾಯಣಸ್ವಾಮಿ ಭಾಗವಹಿಸಲಿದ್ದಾರೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆ

• ಕೋಲಾರ: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ತಾಲೂಕಿನಲ್ಲಿ ಹೋಬಳಿವಾರು ಸಾಧ್ಯವಾದರೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಭೆಯನ್ನು ನಡೆಸುವ ಮೂಲಕ ಸಮಸ್ಯೆಗಳಿದ್ದಲ್ಲಿ ಬಗೆಹರಿಸುವ ಕೆಲಸ ಮಾಡಲು ಅಧಿಕಾರಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವೇಮಗಲ್ ವಿ.ಎಂ ಮುನಿಯಪ್ಪ ತಿಳಿಸಿದರು.

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಗ್ಯಾರಂಟಿ ಯೋಜನೆಗಳ ತಾಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ತಾಲೂಕು ವ್ಯಾಪ್ತಿಯಲ್ಲಿ ಬಡವರ ಬಿಪಿಎಲ್ ಕಾರ್ಡ್‌ಗಳೂ ರದ್ದಾಗಿವೆ. ಕೆಲವರಿಗೆ ತಾಂತ್ರಿಕ ದೋಷಗಳಿಂದ ಗೃಹಲಕ್ಷ್ಮಿ ಹಣ ಫಲಾನುಭವಿಗಳ ಖಾತೆಗೆ ಜಮಾ ಆಗುತ್ತಿಲ್ಲ, ಅಕ್ಕಿ ವಿತರಣೆಯಲ್ಲಿ ಸಹ ದೂರುಗಳಿವೆ ಎಂದರು. ಗ್ಯಾರಂಟಿ ಯೋಜನೆಗಳು ಎಲ್ಲ ವರ್ಗದವರಿಗೂ ಮೀಸಲಾಗಿದೆ. ಆದರೆ, ದುರ್ಬಲ ಹಾಗೂ ಬಡವರಿಗೆ ಸರಿಯಾದ ಮಾಹಿತಿ ಇಲ್ಲದೆ ಪಡೆಯಲು ಸಾಧ್ಯವಿಲ್ಲ. ಜನರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವ ಪ್ರಯತ್ನದಲ್ಲಿ ನಾವೆಲ್ಲರೂ ಕೆಲಸ ಮಾಡಬೇಕಿದೆ, ಆಗ ಮಾತ್ರವೇ ಸರ್ಕಾರದ ಉದ್ದೇಶ ಈಡೇರಲಿದೆ.ದರು. ಸಭೆಯಲ್ಲಿ ತಾ ಪಂ ಇಒ ಮಂಜುನಾಥ್, ಸಹಾಯಕ ನಿರ್ದೇಶಕ ಮಂಜುನಾಥ್ ಪ್ರಸಾದ್ ಸೇರಿದಂತೆ ಅಧಿಕಾರಿಗಳಿದ್ದರು.



ಮದ್ಯದ ಮತ್ತಿನಲ್ಲಿ ಗ್ರಾಪಂ ಕಟ್ಟಡದ ಕಿಟಕಿಗೆ ಕಲ್ಲು



• ವಿಜಯಪುರ: ಹೋಬಳಿಯ ಕೋರಮಂಗಲ ಗ್ರಾಮದಲ್ಲಿ ಕುಡಿದ ಮತ್ತಿನಲ್ಲಿ ಯುವಕರ ಗುಂಪೊಂದು ಗ್ರಾಮ ಪಂಚಾಯಿತಿ ಕಟ್ಟಡದ ಕಿಟಕಿಯ ಗ್ಲಾಸ್‌ವನ್ನು ಬಾಟಲಿನಿಂದ ಪುಡಿಪುಡಿ ಮಾಡಿರುವ ಘಟನೆ ನಡೆದಿದೆ.

25 ರಿಂದ 30ವರ್ಷದೊಳಗಿನ ಯುವಕರು, ಮಂಗಳವಾರ ತಡರಾತ್ರಿ, ಗ್ರಾಮ ಪಂಚಾಯಿತಿ ಕಟ್ಟಡದ ಕಿಟಕಿಯ ಗಾಜನ್ನು ಬಾಟಲಿಯಿಂದ ಒಡೆದು ಪುಡಿಪುಡಿ ಮಾಡಿದ್ದಾರೆ. ಕುಡುಕರ ಹಾವಳಿಗೆ ಗ್ರಾಮದ ಜನತೆ ಭಯಭೀತರಾಗಿದ್ದಾರೆ. ಕಿಡಿಗೇಡಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ರಾತ್ರಿ ವೇಳೆ ಗ್ರಾಮದಲ್ಲಿ ಪೊಲೀಸ್ ಬೀಟ್ ವ್ಯವಸ್ಥೆ ಕಲ್ಪಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಗ್ರಾಮ ಪಂಚಾಯಿತಿ ಅಧಿಕಾರಿಗಳು ವಿಜಯಪುರ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಹಾಪ್‌ಕಾಮ್ಸ್‌ಗೆ ನಿರ್ದೇಶಕರ ಆಯ್ಕೆ: ಅಭಿನಂದನೆ

ಬಿಜೆಪಿ ಕಾರ್ಯಕರ್ತರ ವಿಜಯೋತ್ಸವ



• ಆನೇಕಲ್: ಬೆಂಗಳೂರು ನಗರ ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ ನಿಯಮಿತ ಹಾಪ್ ಕಾಮ್ಸ್ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆನೇಕಲ್ ತಾಲೂಕಿನ ಮೂರು ಮಂದಿ ಆಯ್ಕೆಯಾಗಿದ್ದು ಮುಖಂಡರು ಅಭಿನಂದಿಸಿದರು.

ಚುನಾವಣೆಯಲ್ಲಿ ತಾಲೂಕಿನ ಎನ್. ದೇವರಾಜು, ಮೇಘಾ, ಆರ್. ತಿಲಕ್‌ಕುಮಾರ್‌ಗೌಡ, ಎಚ್.ಕೆ.ನಾಗವೇಣಿ ಅವರು ಚುನಾಯಿತರಾಗಿದ್ದಾರೆ. ದೇವರಾಜು ಅವರು 93 ಮತ, ಮೇಘಾ ಆರ್. ತಿಲಕ್‌ಕುಮಾರ್‌ಗೌಡ 98, ನಾಗವೇಣಿ ಅವರು 101 ಮತ ಪಡೆದು ಹಾಪ್‌ಕಾಮ್ಸ್ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಹಾಪ್‌ಕಾಮ್ಸ್ ನೂತನ ನಿರ್ದೇಶಕಿಮೇಘಾ ಆರ್.ತಿಲಕ್‌ಕುಮಾರ್‌ಗೌಡಮಾತನಾಡಿ, ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಮೂವರು ಆಯ್ಕೆಯಾಗಿದ್ದಾರೆ. ಹಾಪ್‌ಕಾಮ್ಸ್‌ನಲ್ಲಿ ರೈತಸ್ನೇಹಿ ಆಡಳಿತ ಮಂಡಳಿ ಸ್ಥಾಪಿಸಬೇಕು ಎಂಬುದು ನಮ್ಮ ಗುರಿ. ಹಾಪ್ ಕಾಮ್ಸ್ ಮಳಿಗೆಯನ್ನು ಹೆಚ್ಚಿಸುವುದು ಸೇರಿದಂತೆ ಹಾಪ್‌ಕಾಮ್ಸ್ ಮೂಲಕ ರೈತಸ್ನೇಹಿ ಆಡಳಿತ ನೀಡಲಾಗುವುದು ಎಂದರು.

ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಬಿಜೆಪಿ ಆನೇಕಲ್ ಅಧ್ಯಕ್ಷ ಎಸ್‌ಆರ್‌ಟಿ ಅಶೋಕ್ ರೆಡ್ಡಿ, ದೊಡ್ಡಹಾಗಡೆ ಶಂಕರ್, ಜೆ.ನಾರಾಯಣ, ಜಯಪ್ರಕಾಶ್, ಶುಭನಂದ್, ಸತೀಶ್, ರಘು, ಮಣಿಕಂಠ ಸೇರಿದಂತೆ ಹಲವರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗಾಗಿ ಆಗ್ರಹ | ತಹಶೀಲ್ದಾರ್‌ಗೆ ಕ್ರಮಕ್ಕಾಗಿ ಮನವಿ ಸಲ್ಲಿಕೆ

ಭಾರತೀಯ ಮಜ್ದೂರ್ ಸಂಘದ ಪ್ರತಿಭಟನೆ

• ಆನೇಕಲ್: ಭಾರತೀಯ ಮಜ್ದೂರ್ ಸಂಘದ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ತಾಲೂಕು ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಶಶಿಧರ್ ಮಾಡ್ಯಾಳ್ ಅವರಿಗೆ ಮನವಿ ಸಲ್ಲಿಸಿದರು.

ಭಾರತೀಯ ಮಜ್ದೂರ್ ಸಂಘದ ರಾಜ್ಯ ಉಪಾಧ್ಯಕ್ಷ ಎಚ್.ಎಂ.ವೆಂಕಟೇಶ್ ಮಾತನಾಡಿ, ರಾಜ್ಯದಲ್ಲಿ ಅಂಗನವಾಡಿ, ಕಾರ್ಯಕರ್ತೆಯರು ಜೀವನ ನಡೆಸುವುದೇ ಕಷ್ಟವಾಗಿದೆ. ಮಾಸಿಕ ವೇತನವನ್ನು ಹೆಚ್ಚಳ ಮಾಡದಿದ್ದರೆ ಅವರ ಪರಿಸ್ಥಿತಿ ಕಷ್ಟವಾಗುತ್ತದೆ. ಹಾಗಾಗಿ ಮಾಸಿಕ ವೇತನ ಹೆಚ್ಚಿಸಿ ಉದ್ಯೋಗ ಕಾಯಂಗೊಳಿಸಬೇಕು. ಸಾರಿಗೆ ನೌಕರರ 38 ತಿಂಗಳ ಹೆಚ್ಚುವರಿ ಬಾಕಿ ವೇತನವನ್ನು ತಕ್ಷಣ ಪಾವತಿ ಮಾಡಬೇಕು. ಇಲ್ಲವಾದಲ್ಲಿ ಹೋರಾಟವನ್ನು ರೂಪಿಸಲಾಗುವುದು ಎಂದರು,

AND : Sri. Mahesh NallaPothula, Aged about 44 years, S/o Chinnaswamy Naidu, R/at No. 13, 8th Cross, 4th Main, Sampangi Ramanagar, Bangalore - 560 027. Also residing at No. 31, 1st Main, 2nd Cross, Segehalli Main Road, Near DS Max Apartments, Krishnarajapuram, Bangalore 560036. ...RESPONDENT

NOTICE TO RESPONDENT

Sri. Mahesh NallaPothula, Aged about 44 years, S/o Chinnaswamy Naidu, R/at No. 13, 8th Cross, 4th Main, Sampangi Ramanagar, Bangalore 560 027. Also residing at No. 31, 1st Main, 2nd Cross, Segehalli Main Road, Near DS Max Apartments, Krishnarajapuram, Bangalore -560036.

Whereas the petitioner had instituted the above suit under Section 13(1)(i-a) of Hindu Marriage Act, 1955 for Dissolution of marriage between petitioner and respondent that was solemnized 16/02/2011 at Sri Kodandarama Kalyana Mantapa, Doddanekkundi, Outer ring road, Maratahalli, Banglore 560037 which is registered on 15/03/2014 before Registrar of Marriage, Gandhinagar, Bangalore City in Marriage No. GAN-HM307-2013-2014 stored in CD No. GANM12, by a decree of divorce.

You, Sri. Mahesh Nalla Pothula., Respondent is hereby summoned to appear in this court in person or by a pleader on the day of **09/06/2026 at 11:00 'O' Clock** to answer the same, failing which the suit will be disposed ex-parte.

Given under my hand and the seal of the Court on this 20th Day of February 2026.

By Order of the Court
Sd/- Senior Sheristeder
Family Court, Bengaluru

Advocate for Petitioner Deepu B.N. Advocate
#320, 7th Cross, BCMC Layout, Kanakapura Main Road, Raghuvanahalli, Bengaluru - 560062.

PUBLIC NOTICE

This is to inform the general public that my client **Sri.R SHANTHA KUMAR** S/o B J Ramaiah, Aged About 66 Years, Residing at No.761, 4th main, 10th cross, Near Capital School, R B Layout, J P Nagar, Bangalore South, Bangalore-560078, who is the present owner of below mentioned property and he was having Original Sale Deed dated 04.04.1984, vide Doc.No.1/84-85 of Book 1 stored and registered in the office of Sub-registrar Devanahalli the aforesaid Original Documents have been lost/misplaced while at the time of Xerox on 23-02-2026 and he has made best efforts in tracing the same, but efforts were in vain. Further he lodged a police complaint in this regarding FIR No.2079009, if anyone found the aforesaid original document, kindly contact within 7 days from the date of this publication at the office address given below.

Misba Farheen B.A., LLB, Advocate,
Mobile No. 8951324520

[illegible] ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ

ಓ.ಎಸ್. ನಂ. 72/2024

[illegible] ಸಾರ್ವಜನಿಕ ಪ್ರಕಟಣೆ [illegible]

By Order of the Court
Sd/- Chief Ministerial Officer
Court of the Civil Judge
Junior Division And JMFC., Nelamangala
Advocate for Petitioners HAREESHA. P.G. Advocate,
H.S.S law Associates,
1st Floor, Enappa Complex, Devanga Street Road, Nelamangala -562123

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

BEFORE THE MOTOR ACCIDENT CLAIMS TRIBUNAL (SCCH-10) AT BANGALORE

MVC No. 6229 OF 2025

BETWEEN: Sandeep. M ...Petitioner

AND: Cholamandalam MS GIC LTD, and another ...Respondents

TO ISSUE NOTICE TO 2nd RESPONDENT.

Mr. Manjunath. S, S/o Sampagirama Reddy, R/at. No. 566, Kithiganahalli Village, Attibele Hobli, Hennagara Post, Bommasandra Industrial Estate, Anekal TQ, Bengaluru-560099. (Owner of the Tipper Lorry bearing reg No.KA-51-B-9851).

Whereas the above named petitioner has filed this claim petition against the above named respondent before this Hon'ble court for compensation of Rs. 11,00,000/- for the injuries sustained in RTA, the accident occurred on 09/05/2025, at about 09.50 PM TO 10.00.PM, near Alliance University, Chikkahagade Village, Anekal Taluk, Bangalore, the accident between the TVS Vehicle bearing reg.no.KA-59-K-5652, and Tipper Lorry bearing reg.KA-51-B-9851. You are hereby summoned to appear in this court in person or through a pleader, duly instructed on **06/04/2026** at **11:00 AM** before (SCCH-10) to show cause against the claim petition failing which the petition will be heard and determined exparte.

Given under my hand and seal of the court on this 21/02/2026.

By order the Court, Assistant Registrar, Court of Small Causes, Bengaluru

Advocate for Petitioner: **N.S. Ashtalakshmi**
Consultant & Advocate, (C/o. ASM Enterprises)
No.9, 7th cross, Vallabhanagara,
Uttarahalli Main Road, Konanakunte Cross,
K.P. Main Road, Bangalore- 560 062.

BEFORE THE MOTOR ACCIDENT CLAIMS TRIBUNAL AT BANGALORE

MVC No. 6325/2025

BETWEEN: K.M.Prakash ... PETITIONER

AND: Varun.D.V & another ... **RESPONDENTS**

NOTICE TO RESPONDENT No. 1

Varun.D.V, S/o Venkatesh.D.V, No.33, Basavanthur Village, Kudumangalore Post, Kudige Somwarpet Taluk, Coorg Kodagu-571232 (Owner of the Car bearing Reg No.KA-12-C-2760)

WHEREAS, the petitioner in MVC.No.6325/2025, has filed the above claim petition against the respondents seeking compensation for a Sum of Rs.30,00,000/- for the injuries sustained by him in a road traffic accident involving your vehicle Car bearing Reg No. KA-12-C-2760, which occurred on 09-08-2025 at about 04.51 PM, near Providence home, 100 Feet road, Chikkabellandur, Bangalore, you are hereby directed to be present before the Hon'ble court (MAYO HALL SCCH-21) on **23-03-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on 12-02-2026

By order of the court, Sheristedar, Court of Small Causes, Mayo Hall Unit, Bangalore.

M. SUBRAMANI, Advocate
No.13, 12th Cross, Udayaravi Divine Paradise Building, 3rd floor, Cubbonpet, Bangalore-560002.

BEFORE THE MOTOR ACCIDENT CLAIMS TRIBUNAL AT BENGALURU (SCCH-10)

M.V.C. No. 8306/2025

BETWEEN: CHOWDAMMA ... PETITIONER

AND: MAHESHA .V. AND ANOTHER ... RESPONDENTS

NOTICE TO RESPONDENT No.1 (PRESENT OWNER)

MAHESHA .V, S/O VENKATASWAMY, R/AT NO.7/2, YALLAVMANADODDI, KALLUBALU, ANEKAL TALUK, BENGALURU.

NOTICE OF RESPONDENT No.3 (PREVIOUS OWNER)

PAVITHRA.A, R/AT THAMMANAYAKANAHALLI, ANEKAL, BENGALURU-562106.

The petitioners have filed the above case for compensation of Rs. 50,00,000/- for the death caused to her son in Motor Vehicle Accident caused by the Car bearing Reg. No.KA-41-A-0284, on 05.08.2025, at about 07:30 PM, on Vedik Bar & Restaurant, Mahantalingapura Village, Jigani Hobli, Anekal Taluk, Bengaluru.

You are being the Present Owner and Previous Owner of Car bearing No. KA-41-A-0284 are hereby directed to appear before the Honorable court MACT (SCCH-10) on **02/04/2026** at **11:00 A.M** either in person or through your counsel to answer the claim. If you fail to appear before the court on the said day either in person or through your counsel, you will be placed exparte and case will be disposed off in accordance with Law.

Given under my hand and a seal of the court on this 19/02/2026

By order of the Court, Assistant Registrar, Court of Small Causes, Bengaluru.

R. CHANDRA SHEKHAR, Advocate
Office at #39/2, ASVNV Bhavan, Office No.32/D, 2nd Floor, Kempegowda Road, Bengaluru-560009.

BEFORE THE MOTOR ACCIDENT CLAIMS TRIBUNAL AT BANGALORE

MVC.No.9082/2025

BETWEEN: Smt. Sarbani Mitra ... PETITIONER

AND: Vishal Singh & others ... **RESPONDENTS**

NOTICE TO RESPONDENT No. 1

Vishal Singh, S/o Akhileshwar Singh, Flat No.301, 3rd Floor, A.K. Residency Blomming Dales Layout, Kaikondarahalli, Bangalore-35 (Owner of the Motorcycle bearing Reg No.KA-51-HF-6791)

WHEREAS, the petitioner in MVC. No.9082/2025, has filed the above claim petition against the respondents seeking compensation for a Sum of Rs.5,00,00,000/- an account of death of Ankush Mitra S/o late H.N.Mitra in a road traffic accident involving your vehicle Motorcycle bearing Reg No.KA-51-HF-6791, which occurred on 30-11-2025 at about 01.30 A.M, on Channasandra Main Road, near Hosa road junction, Opp Zudio Show room, Bangalore, you are hereby directed to be present before the Hon'ble court (Mayo Hall SCCH-19) on **27-03-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on 24-02-2026

By order of the court, Sheristedar, Court of Small Causes, Mayo Hall Unit, Bangalore.

M. SUBRAMANI, Advocate
No.13, 12th Cross, Udayaravi Divine Paradise Building, 3rd floor, Cubbonpet, Bangalore-560002.

[illegible] ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ

ಓ.ಎಸ್. ನಂ. 57/2026

[illegible] ಸಾರ್ವಜನಿಕ ಪ್ರಕಟಣೆ [illegible] 18.03.2026 [illegible]

By Order of the Court
Sd/- Chief Ministerial Officer
Court of the Civil Judge
Junior Division And JMFC., Nelamangala
Advocate for Petitioners HAREESHA. P.G. Advocate,
H.S.S law Associates,
1st Floor, Enappa Complex, Devanga Street Road, Nelamangala -562123

[illegible] ನ್ಯಾಯಾಲಯ ದೊಡ್ಡಬಳ್ಳಾಪುರ

ಪಿ. ಮಿಸ್. ನಂ. 645/2024

[illegible] ಸಾರ್ವಜನಿಕ ಪ್ರಕಟಣೆ [illegible] 02/11/1982 [illegible] 26/3/26 [illegible] 11 ಗಂಟೆಗೆ [illegible] 23/2/2026 [illegible]

ನ್ಯಾಯಾಲಯದ ಆದೇಶದ ಮೇರೆಗೆ
[illegible], ದೊಡ್ಡಬಳ್ಳಾಪುರ

[illegible] ನ್ಯಾಯಾಲಯ ದೊಡ್ಡಬಳ್ಳಾಪುರ

ಪಿ. ಮಿಸ್. ನಂ. 646/2024

[illegible] ಸಾರ್ವಜನಿಕ ಪ್ರಕಟಣೆ [illegible] 08/12/1998 [illegible] 26/3/26 [illegible] 11 ಗಂಟೆಗೆ [illegible] 23/2/2026 [illegible]

ನ್ಯಾಯಾಲಯದ ಆದೇಶದ ಮೇರೆಗೆ
[illegible], ದೊಡ್ಡಬಳ್ಳಾಪುರ

IN THE COURT OF THE CIVIL JUDGE AND JMFC AT HOSAKOTE

C.Mis. No. 118/2026

PETITIONERS: 1. Sri. Narayanappa, S/o Late Venkatagiriyappa, aged about 64 years, R/at Muthukadahalli Village, Anugondanahalli Hobli, Hosakote Taluk. and others
-V/s-

RESPONDENT: The Thasildar, (Birth and Death Registrar) Hosakote Taluk.

GENERAL PUBLIC NOTICE

Whereas the petitioners have filed the above petition seeking the direction to the Thasildar, Hosakote, for issuance of death certificate of Petitioner's mother by name Chinnamma W/o Late Venkatagiriyappa who died on 31/05/2021 in home at Muthukadahalli Village, Anugondanahalli Hobli, Hosakote Taluk. The case is posted for the appearance for interested parties/publics on **24/03/2026 at 11:00 A.M.** Hence interested parties are hereby required to appear either in person or through pleader properly instructed in this behalf on **24/03/2026 at 11:00 A.M** before the Hon'ble Principal Civil Judge and JMFC at Hosakote, Bangalore Rural Dist. failing which the above case will be disposed in your absence you may be placed exparty.

Given under my hand and seal of the court on this 23/02/2026

By order of the Court, Sheristedar, Civil Judge & J.M.F.C Hoskote

R. JYSHREE, Advocate

ಮಾನ್ಯ ಗೌರಿಬಿದನೂರಿನ 1ನೇ ಅಡಿಷನಲ್ ಸಿವಿಲ್ ಜಡ್ಜ್ ಅಂಡ್ ಜೆ.ಎಂ.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, [illegible]

ಸಿಮಿಸ್ ನಂ. 58/2026

[illegible] ದಿನಾಂಕ: 01.06.2015 [illegible] 28.03.2026 [illegible] 11.00 ಗಂಟೆಗೆ [illegible] 09.02.2026 [illegible]

By Order of the Court, Chief Ministerial Officer, Court of the Civil Judge Junior Division and JMFC, Nelamanagala.

[illegible]

IN THE COURT OF THE PRL SENIOR CIVIL JUDGE AT TUMAKURU

RA. 33/2025

APPELLANTS: MANGALAMMAGOWRAMMA AND OTHERS -V/s-

RESPONDENTS: G. SHANTHALA AND OTHERS

R1- MANJUNATHA SHETTY, S/O LATE T.G. ARUNACHALA SHEETY A/A 77 YEARS, **R-2 DWARAKANTH SHYLAJA,** S/O LATE T.G. ARUNACHALA SHEETY, A/A 73 YEARS, **R-3 PARTHSARATHY,** S/O LATE. T.G. ARUNACHALA SHEETY A/A 71 YEARS, **R-5 SURESH KUMAR,** S/O LATE. T.G. ARUNACHALA SHEETY, A/A 67 YEARS, RESPONDENT NO.1 TO 3 AND 5 ARE RESIDING AT EESHWARI NILAYA, 12TH CROSS, SOMESHWARAPURAM TUMAKURU-572102

NOTICE U/O V RULE 20 OF C.P.C. TO THE DEFENDANT

Whereas the appellants have preferred this appeal against Dtd: 13-10-2024 passed in O.S.696/2016 on the file of the third additional Civil Judge, Tumakuru, you being the respondent in the said appeal inspite of court notice and speed post for taken for service in view respondents/defendants no.1,2,3 and 5 have not appear before the court therefore you all summon to apear before the court, on **04/04/2026** at **11 'o'clock** in this court.

Take notice that in default of your appearance on the said day before mentioned, the appeal will be heard and determined, in your absence.

Given under my hand and seal of the Hon'ble court on this 26/02/2026

By order of the Court, Senior Sheristedar, Senior Civil Judge & CJM Court, Tumkuru

Advocate for Appellant: **Sri. M. Mallikarjunaiah**
F-224, Red Cross Bhavan,
Ashoka Road, Tumakuru City.

IN THE COURT THE HON'BLE ASSISTANT COMMISSIONER DODDABALLAPURA SUB-DIVISION AT DODDABALAPPURA

R.A.(NEL) No. 41/2022

Between : Smt. Jayamma ...Appellants

And : Thasildhar & Others **...Respondents**

NOTICE TO LRS OF RESPONDENTS No. 3 to 6

3. Smt. Vijayalakshmi W/o Sunil
4. Smt. Manjula W/o Pradeep
5. Smt. Anasuya W/o Chethan
6. Smt. Annapoorna, W/o Srinidhi,
All are Residing at: Kodihalli Village, Thyamagondlu Hobli, Nelamangala Taluk, Bangalore Rural District.

Whereas the Appellant has filed above Appeal against Regular Appeal against the respondents in this Honble Court. The averments of the appeal memorandum may be read as part and parcel this affidavit to avoid the repetition of facts.

Whereas the above case is set down for the appearance of the LR's of Respondent No. 3 to 6 **on 04.03.2026 at 3 PM** and you are hereby directed to appear before this Court personally or through a pleader, if you fails to appear before this Court, the above case will be proceed with against you Ex-parte in accordance with law.

Given under my hand seal and signature on this 19.02.2026 at Doddaballapura.

By Order of the Court, Assistant Commissioner and Sub Divisional Magistrate, Doddaballapura Sub Division, Bangalore Rural District, Doddaballapur.

Advocate for Appellant : **Sri RAVI. P,** Advocate
1st Floor, KRP Building, Paramanna Layout,
Nelamangala Taluk. Bangalore Rural District.

BEFORE THE DEPUTY COMMISSIONER BANGALORE URBAN DISTRICT BANGALORE

RA.343/2021

BETWEEN: Shanthamma and others ...PETITIONERS

AND: The Assistant Commissioner and others **...RESPONDENTS**

NOTICE TO RESPONDENT No. 6.

To, **6. Rambabu,** S/o Narayanaswamy, aged about 36 years, R/o # 244 Thimmarayaswamy Temple Road, Anekal Town, Anekal, Bangalore Urban District,

Whereas, the petitioner has filed the above case against the order dated 29/4/2010 passed by the Assistant Commissioner in RA(A) No. 115/2009-10 Bangalore south sub Division Bangalore, Challenging the order dated 22/11/1998 passed by the respondent number 2 in MR No. 3/1997-98 in respect of land bearing Sy No. 43/3 measuring 6 guntas out of 28 guntas.

Take notice that your are legal representatives of respondent No.6 in the above suit and above case is posted for your appearance on **05-03-2026** at 3:00 pm before The Hon'ble Court The Special Deputy Commissioner No.2 Bangalore Urban District Bangalore.

Take notice that you fail to appear on that day in the above case

The case will be preceded and determined your absence.

Given under my signature and seal of the court on 20-02-2026.

By order of the court, Deputy Commissioner Bangalore Urban District Bangalore.

Sri. H.M. KISHOR KUMAR, Advocates
Sri A.G. Shivanna & Associates, No.1A, GF MF, HMS Complex, Cubbonpet Main Road, Bangalore-560002.

ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕುಣಿಗಲ್

ಅ.ದಾ ನಂ. 306/2020

ವಾದಿ: [illegible] -ವಿರುದ್ಧ-
ಪ್ರತಿವಾದಿಯರು: [illegible]

ಸಾರ್ವಜನಿಕ ಪತ್ರಿಕಾ ಪ್ರಕಟಣೆ

[illegible] ದಿನಾಂಕ: 27/03/2026 ರ ಬೆಳಗ್ಗೆ 11.00 ಗಂಟೆಗೆ [illegible]

ದಾವಾ ಶೆಡ್ಯೂಲ್ ಸ್ವತ್ತಿನ ವಿವರ

(1) ಸರ್ವೆ ನಂ.71/3 ರ ವಿಸ್ತೀರ್ಣ 0.09 ಗುಂಟೆ, (2) ಸರ್ವೆ ನಂ.72/2 ರ ವಿಸ್ತೀರ್ಣ 0.17 ಗುಂಟೆ (3) ಸರ್ವೆ ನಂ.184/4 ರ ವಿಸ್ತೀರ್ಣ 0.17.08 ಗುಂಟೆ (3) ಸರ್ವೆ ನಂ.10 ರ ವಿಸ್ತೀರ್ಣ 0.33½ ಗುಂಟೆ (4) ಸರ್ವೆ ನಂ.11 ರ ವಿಸ್ತೀರ್ಣ 0.02 ಗುಂಟೆ (5) ಸರ್ವೆ ನಂ.86/6 ರ ವಿಸ್ತೀರ್ಣ 0.09 ಗುಂಟೆ (6) ಸರ್ವೆ ನಂ.97/ಹ-1 ರ ವಿಸ್ತೀರ್ಣ 2 ಎಕರೆ.

[illegible]

ಸದರಿ ಪ್ರಕಟಣೆಯು ದಿನಾಂಕ: 27/01/2026 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿರುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ, ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕುಣಿಗಲ್
ವಾದಿಯ ಪರ ವಕೀಲರು: [illegible], ಕುಣಿಗಲ್

IN THE COURT OF HON'BLE ADDL SENIOR CIVIL JUDGE AT KGF

P & SC. No. 14/2025

Petitioners : 1. Sri. Munivenkata Gowda S/o Chikka Muniyappa @ Muniyappa, Aged about 69 Years, **2. Narayanamma** W/o Munivenkata Gowda, Aged about 57 Years **3. M. Suresh Kumar** S/o Munivenkata Gowda, Aged about 43 Years, **4. Manju. M.** D/o Munivenkata Gowda, Aged about 41 Years, **5. Vijayalakshmi** D/o Munivenkata Gowda, Aged about 38 Years **6. Lokesh. M.** S/o Munivenkata Gowda, Aged about 30 Years, **7. Sukanya. K.** W/o Suresh Kumar. M. Aged about 39 Years, All are R/at Chambarasanahalli Village, Kyasamballi Hobli, KGF Taluk. -V/s-

NIL ....Respondent

PUBLIC NOTICE

WHEREAS, the petitioners filed petition under Sec. 372 of Indian Succession Act for issuance of Succession Certificate of C Ramappa i.e. brother of petitioner No.1 and uncle of petitioner No.3 to 7 by name C. Ramappa S/o Late Chikka Muniyappa @Muniyappa and Muniyamma who was died on 21.08.2025 at Gollahalli Village, Kyasamballi Hobli, KGF Taluk, Kolar District, Karnataka State.

The hearing date of the case is posted on 26.03.2026 if any person having any claim or objection has to appear before this Hon'ble Court in person or by pleader in the above said hearing date at about 11.00 a.m. to answer the same, failing which the petition will be disposed off as ex-parte.

Given under my hand and seal of this Court on this 25.02.2026.

By the order of the Court
Senior Sheristedar, Prl Senior Civil Judge & JMFC at KGF

Advocate for Petitioners
Place: KGF, Dated:

IN THE COURT OF THE HON'BLE 75TH ADDL. CITY CIVIL AND SESSIONS JUDGE MAYO HALL AT BENGALURU

P & SC No. 25005/2026

1. Mrs. Akshaya Mary, W/o late Surya Kumar, Aged about 23 years, **2. S.Annes Anthony,** D/o late Surya Kumar, Aged about 6 years, Since minor represented by his natural guardian and mother of Mrs. Akahaya Mary both are residing at No 495, 5th Main Road, Channappa Compound, HBR Layout, Yaseen Nagar, Arabic College Post, Bengaluru 560 045 ... **PETITIONER**

AND: NIL ... RESPONDENT

PUBLIC NOTICE

Whereas the Petitioner above-named has filed the above petition under Section 372 of the Indian Succession Act seeking for an order to grant Succession Certificate in favour of the Petitioners in respect of Policy No.5190047559, TATA AIG LIFE INSURANCE CO.LTD., Stands in the name of the petitioner's husband SURYA KUMAR who Was passed away on 18/09/2025, at the aforesaid address.

The Hon'ble Court has fixed on **11-03-2026** at 11:00 A.M. for hearing of the said petition. Any person Interested in the matter may enter appearance on the said date and file their objections if any, failing which, the court shall proceed further in the matter and-grant the Succession Certificate in respect of the schedule properties.

SCHEDULE

Policy No.5190047559, TATA AIG LIFE INSURANCE CO.LTD.

Given under my hand and seal of the court on 24-02-2026.

By order of the court, Deputy Registrar, City Civil Court, Mayo Hall Unit, Bangalore.

SARASWATHI, Advocate
No.673, 3rd B Cross, HBR Layout,
Kalyannagar, Bengaluru-560043.
Mob: 9632908691

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮದ್ದೂರು

ಸಿ.ಮಿಸ್. ಸಂಖ್ಯೆ: 218/2025.

ಅರ್ಜಿದಾರರು: [illegible] 69 ವರ್ಷ, [illegible], ಮದ್ದೂರು ತಾಲ್ಲೂಕು.

-ವಿರುದ್ಧ-

ಎದುರುದಾರರು: [illegible], ಮದ್ದೂರು, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

[illegible] ದಿನಾಂಕ: 18-05-1975 [illegible] ದಿನಾಂಕ:- 02.04.2026ರಂದು ಬೆಳಗ್ಗೆ 11.00 ಗಂಟೆಗೆ [illegible]

ಈ ಪ್ರಕಟಣೆಯನ್ನು ನ್ಯಾಯಾಲಯದ ಅಪ್ಪಣೆ ಮತ್ತು ಮೊಹರಿನೊಂದಿಗೆ ದಿನಾಂಕ: 12.02.2026ರಂದು ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು, ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಮದ್ದೂರು
ಅರ್ಜಿದಾರರ ಪರ ವಕೀಲರು:
[illegible], ಮದ್ದೂರು

ಪಟ್ಟಣ ಪಂಚಾಯತ್ ಕಾರ್ಯಾಲಯ

ಬೈಂದೂರು-576214, ಉಡುಪಿ ಜಿಲ್ಲೆ

ಸಂ: ಬೈ.ಪ.ಪ/ಕಿ.ಅ/SBM 2.0/ಸಿಆರ್/104/2025-26 ದಿ: 21/02/2026

ಈ-ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಅಧ್ಯಾದೇಶ 1999 ನಿಯಮಾವಳಿಗಳು 2000ರಂತೆ ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಸ್ವಚ್ಛ ಭಾರತ್ ಮಿಷನ್ (ನಗರ) 2.0 ನಿಧಿಯಡಿಯಲ್ಲಿ ನಿರ್ವಹಿಸಬೇಕಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ CLASS III ಮತ್ತು ಮೇಲ್ಪಟ್ಟ ದರ್ಜೆಯ ಅರ್ಹ ಸಿವಿಲ್ ಗುತ್ತಿಗೆದಾರರಿಂದ KPPP ಪೋರ್ಟಲ್‌ನಲ್ಲಿ Standard Tender Document KW-4ರಂತೆ ಮರು ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿ:03.03.2026 ರಂದು ಅಪರಾಹ್ನ ಸಮಯ:4.30 ಗಂಟೆ ಆಗಿರುತ್ತದೆ.

ಕ್ರ ಸಂ.	ಕಾಮಗಾರಿ ಹೆಸರು ಮತ್ತು ಟೆಂಡರ್ ಸಂಖ್ಯೆ	ಟೆಂಡರುಗಿಟ್ಟ ಮೊತ್ತ (ರೂ.ಗಳಲ್ಲಿ)	ಇಎಮ್‌ಡಿ (ರೂ.ಗಳಲ್ಲಿ)
1	(I) Construction of office Building (II) Construction of Security Building (III) Construction of Toilet Building (IV) Development of Rain Water Harvesting (RWH) (V) Construction of Compound Wall & Gate (VI) Sinking of Borewell and Installation of Submersible Pump (VII) Construction of Weigh Bridge Flatform (VIII) External electrification works (IX) Constrction of Internal CC Road (X) Constrction of Internal CC Drain at Propsed SWM Site in the limits of Byndoor TP. **(DMA/2025-26/OW/WORK_INDENT38758/CALL-5)**	1,52,00,000	2,00,000

ಕಾಮಗಾರಿ ಆಸಕ್ತ ಗುತ್ತಿಗೆದಾರರು **https://kppp.karnataka.gov.in/** ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚುವರಿ ಮಾಹಿತಿಗಾಗಿ ಈ ಕಚೇರಿಯ ಕೆಲಸದ ವೇಳೆಯಲ್ಲಿ ಕಿರಿಯ ಅಭಿಯಂತರರ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ಬೈಂದೂರು
ಸಹಿ/- ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯತ್, ಬೈಂದೂರು

ವಾಸಾಇ/ಉಡುಪಿ/ಸಿಎಸ್‌ಎಂಸಿಎ/742/25-26 ದಿ: 26.02.2026

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ

ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ - 587104.

ಸಂ:ಆ.ಅ./ತೋವಿವಿಬಾ/ಸವಿಕ/ಟೆ.ಸಂ-216/2025-26 ದಿನಾಂಕ:26-02-2026

ಅಲ್ಪಾವಧಿ ಟೆಂಡರ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಡಿಯಲ್ಲಿ ಬರುವ ವಿವಿಧ ಮಹಾವಿದ್ಯಾಲಯಗಳಿಗೆ ಬೇಕಾಗಿರುವ Smart Class Room Display ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಅಲ್ಪಾವಧಿ ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು.

ಟೆಂಡರನ ಘಟನಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ	02-03-2026	@	14.00 ಘಂ
2	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	06-03-2026	@	16.00 ಘಂ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	09-03-2026	@	11.00 ಘಂ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	11-03-2026	@	12.00 ಘಂ

ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/ addendum ಬಗ್ಗೆ ಮಾಹಿತಿ ಪಡೆಯಬೇಕು.. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಫೋ : 08354-230258.

ಸಹಿ/-ಆಸ್ತಿ ಅಧಿಕಾರಿಗಳು
ತೋ.ವಿ.ವಿ, ಬಾಗಲಕೋಟ

DIPR/BGK/RO-NO-615/KSMCA/2025-26

ನಗರಸಭಾ ಕಾರ್ಯಾಲಯ, ಮದ್ದೂರು,

ಮಂಡ್ಯ ಜಿಲ್ಲೆ-571428 ವೆಬ್‌ಸೈಟ್:www.maddurtown.gov.in
ಸಹಾಯವಾಣಿ ಸಂಖ್ಯೆ :08232-232105
ಸಂಖ್ಯೆ:ನಸಮ/ಸಿವಿಲ್/ಟೆಂಡರ್-06/2025-26 ದಿ:25.02.2026

ಟೆಂಡರ್ ಪ್ರಕಟಣೆ

ಮದ್ದೂರು ನಗರಸಭೆ ವ್ಯಾಪ್ತಿಯ ಅಮೃತ್ 2.0 ಅನುದಾನದಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ.

ಕ್ರ ಸಂ : 01. ಕಾಮಗಾರಿ ಹೆಸರು : Development of 3 nos of green space and park under AMRUTH 2.0 in Maddur municipal (kempamma layout park, madduramma layout park, Dr Ambedkar park Siddhartha Nagar) (DMA/2025-26/OW/WORK_INDENT48473/CALL-3). **ಅಂದಾಜು ಮೊತ್ತ (ಲಕ್ಷಗಳಲ್ಲಿ)** : 105.80. **ಇ.ಎಂ.ಡಿ ಮೊತ್ತ** : ರೂ.1,80,000/-. **ಅನುದಾನದ ವಿವರ :** ಅಮೃತ್ 2.0 ಅನುದಾನ.

ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27-03-2026 ರ ಸಂಜೆ 5.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ತೆರೆಯುವ ದಿನಾಂಕ: 30-03-2026 ಬೆಳಿಗ್ಗೆ 11.00 ಗಂಟೆಗೆ ರಂದು ಹೆಚ್ಚಿನ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಹಾಗೂ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿದೆ.

ಸಹಿ/-ಪೌರಾಯುಕ್ತರು, ನಗರಸಭೆ, ಮದ್ದೂರು

ವಾಸಾಸಂಇ/ಓಸಿಐ-ಮಂ/ಸಿಎಸ್‌ಎಂಸಿಎ/833/2025-26

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ

ಬಿ.ಎಂ.ರಸ್ತೆ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ-562159
e-mail: gcmramanagara@gmail.com

ಸಂಖ್ಯೆ: ರೇಗೂಮಾ/ರಾ/ದಾ/Furniture-ಖ/177/2025-26 ದಿನಾಂಕ: 26.02.2026

ಟೆಂಡರ್ ಪ್ರಕಟಣೆ

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ರಾಮನಗರ ಇಲ್ಲಿಗೆ ಅವಶ್ಯಕವಿರುವ Beeru ಮತ್ತು Executive Revolving Chair ಗಳನ್ನು ಸರಬರಾಜು ಮಾಡಲು ಅರ್ಹರಾದ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಳನ್ನು **ದಿನಾಂಕ:07.03.2026** ರ ಸಂಜೆ **4:00 ಗಂಟೆಯೊಳಗೆ** ಪಡೆದು **ದಿನಾಂಕ: 09.03.2026**ರ **ಮಧ್ಯಾಹ್ನ 1:30 ಗಂಟೆಯೊಳಗೆ** ಸಲ್ಲಿಸಬಹುದಾಗಿದೆ ಹಾಗೂ **2.5% (12,500/-)** ಇ.ಎಂ.ಡಿ ಮೊತ್ತವನ್ನು ಡಿ.ಡಿ. ಮುಖಾಂತರ ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಕಚೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

ಸಹಿ/- ರೇಷ್ಮೆ ಉಪನಿರ್ದೇಶಕರು
ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ರಾಮನಗರ.

DIPR/BSD/661/SA/2025-26

ಕರ್ನಾಟಕ ಸರ್ಕಾರ

ಜಿಲ್ಲಾ ತರಬೇತಿ ಸಂಸ್ಥೆ, ಮಂಡ್ಯ

ಜಿಲ್ಲಾ ಪಂಚಾಯತ್ ರಸ್ತೆ,ಮಂಡ್ಯ-571401
ಸಂಖ್ಯೆ:DTI/24/ADMN/2024-MANDYA-DTI(1994082)
ದಿನಾಂಕ.24.02.2026

ಟೆಂಡರ್ ಪ್ರಕಟಣೆ – (ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್ಮೆಂಟ್ ಮಾತ್ರ)

ಜಿಲ್ಲಾ ತರಬೇತಿ ಸಂಸ್ಥೆ, ಮಂಡ್ಯ ಈ ಕಚೇರಿಗೆ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ 01 ಸಂಖ್ಯೆ ಟ್ಯಾಲಿ ಸಹಾಯಕರು ಕಂ ಡಾಟ ಎಂಟ್ರಿ ಆಪರೇಟರ್ ಹುದ್ದೆ ಮತ್ತು 02 ಸಂಖ್ಯೆ ಗ್ರೂಪ್ ಡಿ ಸೇವೆಯನ್ನು ಒದಗಿಸುವ ಕುರಿತು ಟೆಂಡರ್ ಆಹ್ವಾನಿಸಿದ್ದು ಕೆಟಿಪಿಪಿ ಅಧಿನಿಯಮ-1999 ಮತ್ತು ನಿಯಮಗಳು-2000 ಪ್ರಕಾರ ದ್ವಿ ಟೆಂಡರ್ ದಾಖಲೆಗಳ ಪದ್ಧತಿಯಲ್ಲಿ ಅರ್ಹ ಸಂಸ್ಥೆಗಳಿಂದ ಟೆಂಡರ್ ಮೂಲಕ ಈ ಕೆಳಕಂಡ ವಿವರಗಳಂತೆ ದರಪಟ್ಟಿಗಳನ್ನು ಕರೆಯಲಾಗಿದೆ. ವಿವರ : ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆ. ಪೂರೈಸಬೇಕಾದ ಹೊರಗುತ್ತಿಗೆ ಸೇವೆಗಳು : ಒಂದು ಸಂಖ್ಯೆ ಟ್ಯಾಲಿ ಸಹಾಯಕರು ಕಂ ಡೇಟಾ ಎಂಟ್ರಿ ಅಪರೇಟರ್ ಹಾಗೂ ಎರಡು ಸಂಖ್ಯೆ ಗ್ರೂಪ್ ಡಿ ನೌಕರರು. ಇ.ಎಂ.ಡಿ ಮೊತ್ತ : ರೂ.21,459/-. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 10.03.2026(05.00PM). Tender notification/Refrence number : ATI/2025-26/SE0096. ಹೆಚ್ಚಿನ ಮಾಹಿತಿಗಾಗಿ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೆಬ್ ವಿಳಾಸ:- https://kppp.karnataka.gov.in ನಲ್ಲಿ ಪಡೆಯಬಹುದು

ಸಹಿ/-ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಮಂಡ್ಯ

ವಾಸಾಸಂಇ/ಸನಿ-ಮಂ/ಸಿಎಸ್‌ಎಂಸಿಎ/829/2025-26

ನಗರಸಭೆ ಕಾರ್ಯಾಲಯ ನೆಲಮಂಗಲ

ಬೆಂಗಳೂರು ಗ್ರಾಮಾಂತರ ಜಿಲ್ಲೆ-562123, ದೂರವಾಣಿ : 080-27722135,
Email : ka.nelmangala.cmc@gmail.com

ಸಂಖ್ಯೆ: ನಸನೆ/ತಾಂತ್ರಿಕ(ವಿ)/ಟೆಂಡರ್/173/2025-26 ದಿನಾಂಕ : 26.02.2026

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯೂಮೆಂಟ್ KW 1&2 ರ&KG ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಪೌರಾಯುಕ್ತರು ನಗರಸಭೆ ನೆಲಮಂಗಲ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2025-26ನೇ ಸಾಲಿನ ನಗರಸಭೆ ನಿಧಿಯಡಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ಮೊತ್ತ ರೂ: 144.80 ಲಕ್ಷಗಳ ಕಾಮಗಾರಿಗಳ ಐಟಂವಾರು ಇ-ಪ್ರೊಕ್ಯೂರ್‌ಮೆಂಟ್ ನ ಕೆಪಿಪಿ ಪೋರ್ಟಲ್ ಏಕ ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ತೆರೆಯುವ ದಿನಾಂಕ ಮುಂತಾದ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್:**https://kppp.karnataka.gov.in/** ಹಾಗೂ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ವಿವರಗಳು ಈ ಕೆಳಕಂಡಂತಿದೆ:-

ಕ್ರ ಸಂ	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2025-26/OW/WORK_INDENT54175	49.90
2	DMA/2025-26/OW/WORK_INDENT54215	49.90
3	DMA/2025-26/OW/WORK_INDENT55537	45.00

ಸಹಿ/- ಮಾನ್ಯ ಅಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/- ಮಾನ್ಯ ಉಪಾಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/- ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/- ಪೌರಾಯುಕ್ತರು, ನಗರಸಭೆ, ನೆಲಮಂಗಲ

ವಾ.ಸಾ.ಸಂ.ಇ/ಮಾಧ್ಯ/5894/ಎಸ್‌ಎಸ್‌ಸಿ/2025-26

ಕರ್ನಾಟಕ ಸರಕಾರ

(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)

ಕರ್ನಾಟಕ ಜಲಸಾರಿಗೆ ಮಂಡಳಿ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,
ಬಂದರು ಮತ್ತು ಮೀನುಗಾರಿಕಾ ವಿಭಾಗ
ಕ್ಯಾಮಿಲಿ ಹಾಲ್, 2ನೇ ಮಹಡಿ, ಅಂಬಲಪಾಡಿ, ಉಡುಪಿ-576103
ದೂ.: 0820-2532961, Email: pfdudupi@gmail.com

ಸಂ: ಕಾನಿಇಂ ಬಂಮೀವಿ ಉಡುಪಿ/ಪ್ರಕಟಣೆ:26/2025-26 ದಿ:25-02-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎರಡನೇ ಕರೆ)

ಕರ್ನಾಟಕಸರ್ಕಾರದರಾಜ್ಯಪಾಲರಪರವಾಗಿ **"Supply Installation and Surveillance system with 3 months recording at Malpe Fishing Harbour in Udupi Taluk and District. (ಟೆಂಡರ್ ಮೊತ್ತ ರೂ 61.98 ಲಕ್ಷ)"** ಕಾಮಗಾರಿಯನ್ನು ಕೈಗೊಳ್ಳಲು ಎರಡನೇ ಕರೆ ಟೆಂಡರ್ ಕರೆಯಲಾಗಿದ್ದು www.kppp.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ವೆಬ್‌ಸೈಟ್ ನಿಂದ ಪಡೆಯತಕ್ಕದ್ದು, **ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿ: 04-03-2026 ರಂದು 17.00 ಗಂಟೆಯವರೆಗೆ** ಮತ್ತು **ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ ದಿ:05-03-2026 ರಂದು 17.00 ಗಂಟೆಯವರೆಗೆ** ಹಾಗೂ ಟೆಂಡರ್ ಮುಂದೂಡಿಕೆಯ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರ ಕಛೇರಿ,

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಭಾಗ ಬಡಿಕಮಾನ ರಸ್ತೆ ವಿಜಯಪುರ - 586101
ದೂರವಾಣಿ ಸಂ: 08352-253641, 251641,
ಇ-ಮೇಲ್: **kuwsdbeebjp@yahoo.com**

ಟೆಂಡರ್ ಪ್ರಕಟಣೆ
(ಎಲೆಕ್ಟ್ರಾನಿಕ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ / ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 3342 ದಿನಾಂಕ: 23-02-2026. **ಕಾಮಗಾರಿಗಳ ಹೆಸರು:-** 2025-26 ನೇ ಸಾಲಿನ SCP ಅನುದಾನದಡಿ, ಇಂಡಿ ಪಟ್ಟಣದ ವಾರ್ಡ ನಂ. 23 ರ ಮೊನಪ್ಪಾ ನಗರ (Part A South Side) ಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿ (ಇಡುಗಂಟು ಟೆಂಡರ್- ವೇರಿಯೇಷನ್ ಇರುವುದಿಲ್ಲಾ). INDENT NO. KUWSDB/2025-26/WS/WORK_INDENT494. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ವಿಜಯಪುರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/755/ಸಿಎಸ್‌ಎಂಸಿಎ/2025-26

ಆತ್ಮ ಸಾಕ್ಷಾತ್ಕಾರಕ್ಕೆ ಗೀತೆ ಪೂರಕ: ರಾಷ್ಟ್ರಪತಿ ಮುರ್ಮು

ಆಧ್ಯಾತ್ಮಿಕ ಜೀವನಕ್ಕೆ ಭಗವದ್ಗೀತೆ ಪ್ರೇರಣೆ



• **ಜಮ್ಶೆಡ್‌ಪುರ :** ಇಂದಿನ ಯುವಶಕ್ತಿಗೆ ಹೊಸ ದಿಕ್ಕು ತೋರಿ ,ಬದುಕಿಗೊಂದು ನವ ಆಯಾಮ ನೀಡುವಲ್ಲಿ ಪವಿತ್ರ ಭಗವದ್ಗೀತೆಯಲ್ಲಿನ ಆಧ್ಯಾತ್ಮಿಕ ಸಂದೇಶಗಳು ಪ್ರೇರಣಾದಾಯಿ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಪ್ರಾಯಪಟ್ಟಿದ್ದಾರೆ.

ಕಡ್ಮಾದಲ್ಲಿ ಶ್ರೀ ಜಗನ್ನಾಥ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ದಾನದತ್ತಿ ಕೇಂದ್ರ ಟ್ರಸ್ಟ್ ಸಂಕೀರ್ಣಕ್ಕೆ ಭೂಮಿಪೂಜೆ ನೆರವೇರಿಸಿದ ಬಳಿಕ ,ಜಾರ್ಖಂಡ್‌ನ ಜಮ್ಶೆಡ್‌ಪುರದಲ್ಲಿ ಜನಸ್ತೋಮವನ್ನುದ್ದೇಶಿಸಿ ಮಾತನಾಡಿದ ಮುರ್ಮು

ಪೊಡವಿಗೊಡೆಯನು ಭಗವದ್ಗೀತೆಯಲ್ಲಿ ನೀಡಿರುವ ಸಂದೇಶಗಳು ಆತ್ಮ ಸಾಕ್ಷಾತ್ಕಾರಕ್ಕೆ ಪೂರಕವೆಂದು ವಿಶ್ಲೇಷಿಸಿದರು. ಪ್ರಸ್ತಾವಿತ ಟ್ರಸ್ಟ್ ಆಧ್ಯಾತ್ಮಿಕ ಅಧ್ಯಯನ ಮತ್ತು ಕೋಮು ಸೌಹಾರ್ದ ಕೇಂದ್ರವಾಗಿ ಮೂಡಿಬರಲಿದೆ. ಹೆಣ್ಣು ಮಕ್ಕಳ ಸಹಿತ ಬಡ ಮಕ್ಕಳಿಗೆ ತನ್ನ ಹಾಸ್ಟೆಲ್‌ನಲ್ಲಿ ಶಿಕ್ಷಣಾವಕಾಶ ಕಲ್ಪಿಸಲಿದೆ.

ಪ್ರಸ್ತಾವಿತ ಆಧ್ಯಾತ್ಮಿಕ ಕೇಂದ್ರದ ಆಯೋಜಕರ ಪ್ರಯತ್ನಗಳಿಗೆ ಪ್ರಶಂಸೆ ವ್ಯಕ್ತಪಡಿಸಿದ ರಾಷ್ಟ್ರಪತಿ ಮುರ್ಮು, ಭಗವದ್ಗೀತೆಯ ಸಂದೇಶಗಳನ್ನು ಯುವಶಕ್ತಿ ತಮ್ಮ ಬದುಕಲ್ಲಿ ಅಳವಡಿಸಲು ಕೇಂದ್ರವು ನೆರವಾಗಲಿದೆ, ಮತ್ತವರ ಚಾರಿತ್ರ್ಯವನ್ನು ಪರಿಶುದ್ಧಗೊಳಿಸಲು ಪ್ರೇರಣೆಯಾಗಲಿದೆ. ನಮ್ಮ ಆಧ್ಯಾತ್ಮಿಕ ಪರಂಪರೆಯಲ್ಲಿ ಪ್ರೀತಿ ಹಾಗೂ ಎಲ್ಲಾ ಜೀವಿಗಳು ಹಾಗೂ ಸಸ್ಯಗಳ ಬಗ್ಗೆ ದಯೆ ತೋರುವುದಕ್ಕೆ ಮಹತ್ತ್ವದ ಪ್ರಾಧಾನ್ಯತೆ ನೀಡಲಾಗಿದೆ ಎಂದು ಹೇಳಿದರು.

ಮಹಾಪ್ರಭು ಜಗನ್ನಾಥ ಇಡೀ ಜಗದೊಡೆಯ: ಮಹಾಪ್ರಭು ಜಗನ್ನಾಥನು ಇಡೀ ವಿಶ್ವದೊಡೆಯ. ಅವನು ಯಾವುದೇ ತಾರತಮ್ಯರಹಿತವಾಗಿ ಇಡೀ ಮಾನವ ಜನಾಂಗವನ್ನು ಪೊರೆವ ಕರುಣಾಮಯಿ. ಭಗವಾನ್ ಜಗನ್ನಾಥನು ಜಾತಿ ಮತಪಂಥಗಳ ಭೇದರಹಿತನು ಅಥವಾ ಅಸ್ಪೃಶ್ಯತೆರಹಿತನು. ಜಗನ್ನಾಥನು ಜಗತ್ ಕೇ ನಾಥ್ ಎಂದು ಆರಾಧಿಸಲ್ಪಡೋದು ಇದೇ ಹಿನ್ನೆಲೆಯಿಂದ ಎಂದು ರಾಷ್ಟ್ರಪತಿಗಳು ಕೊಂಡಾಡಿದರು. ಜಾರ್ಖಂಡ್ ರಾಜ್ಯಪಾಲಳಾಗಿದ್ದಾಗ ರಾಜ್ಯವು ಸಾಮಾಜಿಕ ಸೌಹಾರ್ದತೆಗೆ ಹೆಸರಾಗಿತ್ತು ಮತ್ತು ಆದಿವಾಸಿ ಪರಂಪರೆಗಳ ಸಂರಕ್ಷಿಸಿತ್ತು ಎಂದು ನೆನಪುಗಳ ಮೆಲುಕು ಹಾಕಿದ ರಾಷ್ಟ್ರಪತಿ ಮುರ್ಮು, ಭಗವಾನ್ ಜಗನ್ನಾಥನ ಕುರಿತು ವಿಶ್ವಾದ್ಯಂತ ದಿನೇ ದಿನೇ ಬೆಳೆಯುತ್ತಿರುವ ಪ್ರೀತಿ, ನಂಬುಗೆ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು.

500 ಜಗನ್ನಾಥ ದೇಗುಲಗಳು: ದೇಶಾದ್ಯಂತ ಇದುವರೆಗೆ 500ಕ್ಕೂ ಅಧಿಕ ಜಗನ್ನಾಥ ದೇಗುಲಗಳ ನಿರ್ಮಿಸಲಾಗಿದೆ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಮಾಹಿತಿ ನೀಡಿದರು.

100ಕೋಟಿ ವೆಚ್ಚದಲ್ಲಿ ಆಧ್ಯಾತ್ಮಿಕ ಕೇಂದ್ರ ರಚನೆ: ಹೊಸ ಆಧ್ಯಾತ್ಮಿಕ ಕೇಂದ್ರವು 12ನೇ ಶತಮಾನದ ಪುರಿ ದೇವಾಲಯವನ್ನು ಪ್ರತಿಬಿಂಬಿಸಲಿದೆ. ಖರ್ಕಾಯಿ ನದಿಗೆ ಸಮೀಪ ಸುಮಾರು 2.5ಎಕರೆಗೂ ಅಧಿಕ ಜಾಗದಲ್ಲಿ ಸುಮಾರು 100ಕೋಟಿ ವೆಚ್ಚದಲ್ಲಿ ಕೇಂದ್ರವು ತಲೆ ಎತ್ತಲಿದೆ ಎಂದು ಮಾಹಿತಿ ನೀಡಿದ ಟ್ರಸ್ಟ್‌ನ ಆಡಳಿತ ಟ್ರಸ್ಟಿ ಎಸ್.ಕೆ.ಬೆಹೆರಾ, ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರಸ್ತುತ ಕೇಂದ್ರವು ಉತ್ತೇಜಕವಾಗಲಿದೆ ಮತ್ತು ಯುವ ಪೀಳಿಗೆಯ ಸನ್ನಡತೆ ಸಹಿತ ವ್ಯಕ್ತಿತ್ವ ನಿರ್ಮಾಣ ಮತ್ತು ನೈತಿಕತೆ ಅಭಿವೃದ್ಧಿ ಕೇಂದ್ರವಾಗಿ ರೂಪುಗೊಳ್ಳಲಿದೆ ಎಂದು ಹೇಳಿದರು.

ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಸೂಚನೆ

ಕಂಟೆಂಟ್ ಕ್ರಿಯೇಟರ್ಸ್‌ಗೆ ಹಣ ಸಿಗಲಿ

• **ಹೊಸದಿಲ್ಲಿ:** ಡಿಜಿಟಲ್ ವೇದಿಕೆಗಳು ಆನ್‌ಲೈನ್ ಕಂಟೆಂಟ್‌ಗಳ ಜವಾಬ್ದಾರಿ ಹೊರಬೇಕು. ಕಂಟೆಂಟ್ ಸೃಜಿಸುವವರು ಹಾಗೂ ಹೊಸ ಸಂಸ್ಥೆಗಳಿಗೆ ನ್ಯಾಯೋಚಿತವಾಗಿ ಆದಾಯ ಹಂಚಿಕೆ ಮಾಡಬೇಕು. ಕಂಟೆಂಟ್ ಸೃಷ್ಟಿಸಿದವರಿಗೆ ನ್ಯಾಯವಾದ ಮೊತ್ತ ನಿರಾಕರಿಸಿದಲ್ಲಿ ಆವಿಷ್ಕಾರಗಳಿಗೆ ಹೊಡೆತ ಬೀಳಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಎಚ್ಚರಿಸಿದ್ದಾರೆ.

ಎಐ ಸೃಷ್ಟಿಸುವ ಕಂಟೆಂಟ್ ಅಥವಾ ಹುರುಳಿನ ಬಳಕೆಯನ್ನು ನಿಯಂತ್ರಿಸಬೇಕು. ಯಾವ ವ್ಯಕ್ತಿಯ ಮುಖ, ಧ್ವನಿ ಅಥವಾ ವ್ಯಕ್ತಿತ್ವ ಬಳಸಿಕೊಂಡು ಕಂಟೆಂಟ್ ರಚಿಸಲಾಗುವುದೋ, ಆ ವ್ಯಕ್ತಿಯ ಸಮ್ಮತಿ ವಿನಾ ಕಂಟೆಂಟ್ ಸೃಜಿಸಕೂಡದು ಎಂದು ಸಚಿವರು ಎಚ್ಚರಿಸಿದ್ದಾರೆ. ದಿಲ್ಲಿಯಲ್ಲಿ ಡಿಜಿಟಲ್ ಸುದ್ದಿ ಪ್ರಕಾಶಕರ ಸಮಾವೇಶ ಉದ್ದೇಶಿಸಿ ಸಚಿವರು ಈ ರೀತಿ ಎಚ್ಚರಿಕೆ ನೀಡಿದರು.

ತಾವು ಆತಿಥೇಯ ವಹಿಸಿದ ಕಂಟೆಂಟ್‌ಗಳ ಹೊಣೆಯನ್ನು ಸಂಬಂಧಿತ ಡಿಜಿಟಲ್ ವೇದಿಕೆಗಳೇ ವಹಿಸಬೇಕು. ಮಕ್ಕಳ ಸಹಿತ ಎಲ್ಲಾ ನಾಗರಿಕರ ಡಿಜಿಟಲ್ ಸುರಕ್ಷೆ ಕೂಡ ಡಿಜಿಟಲ್ ಪ್ಲಾಟ್‌ಫಾರಂಗಳ ಜವಾಬ್ದಾರಿಯಾಗಿದೆ. ಡಿಜಿಟಲ್ ವೇದಿಕೆಗಳಿಂದು (intermediaries)ಶಕ್ತಿಶಾಲಿ ಮಾಧ್ಯಮ ಕೇಂದ್ರಗಳಾಗಿ ಪರಿವರ್ತಿತವಾಗಿವೆ ಎಂದು ಗಮನ ಸೆಳೆದ ಸಚಿವ ವೈಷ್ಣವ್, ಬೌದ್ಧಿಕ ಆಸ್ತಿಗಳನ್ನು ಗೌರವಿಸಬೇಕು ಮತ್ತು ಅವುಗಳಿಗೆ ನ್ಯಾಯೋಚಿತ ಪರಿಹಾರವೀಯಬೇಕು. ಯಾಕೆಂದರೆ ವಿಜ್ಞಾನ, ತಂತ್ರಜ್ಞಾನ, ಕಲೆ ಮತ್ತು ಸಾಹಿತ್ಯ ರಂಗಗಳಲ್ಲಿ ಸಮಾಜದ ಪ್ರಗತಿಯು ಬೌದ್ಧಿಕ ಆಸ್ತಿಗಳನ್ನು ಅವಲಂಬಿಸಿದೆ. ಡಿಜಿಟಲ್ ವೇದಿಕೆಗಳು ಬರೇ ಸುದ್ದಿಸಂಸ್ಥೆಗಳಿಗೆ ಮಾತ್ರವಲ್ಲ, ಕುಗ್ರಾಮಗಳಲ್ಲಿನ ಸ್ವತಂತ್ರ ಕ್ರಿಯೇಟರ್‌ಗಳು, ಪ್ರಭಾವ ಸೃಜಿಸಬಲ್ಲವರು, ಪ್ರೊಫೆಸರ್‌ಗಳು ಮತ್ತು ಸಂಶೋಧಕರಿಗೂ ಸೂಕ್ತ ಪರಿಹಾರ ನೀಡಬೇಕು. ಹಾಗಾಗಿ ಈ ನಿಟ್ಟಿನಲ್ಲಿ ಎಲ್ಲಾ ಡಿಜಿಟಲ್ ವೇದಿಕೆಗಳು ತಮ್ಮ ನೀತಿಗಳ ಮರುವಿಮರ್ಶೆ ನಡೆಸಬೇಕು. ಸ್ವಯಂಪ್ರೇರಿತವಾಗಿ ಕ್ರಮ ಕೈಗೊಳ್ಳದಿದ್ದಲ್ಲಿ ಕಾನೂನು ರೀತ್ಯಾ ಹಾದಿಗಳಿವೆ ಎಂಬುದನ್ನು ಹಲವು ರಾಷ್ಟ್ರಗಳು ಈಗಾಗಲೆ ತೋರಿಸಿಕೊಟ್ಟಿವೆ ಎಂದು ಎಚ್ಚರಿಸಿದ್ದಾರೆ.



ಭಾರತ ಕೆನಡಾ ಸಂಬಂಧಕ್ಕೆ ಗ್ರೀನ್ ಸಿಗ್ನಲ್?

ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಶುಕ್ರವಾರದಿಂದ ನಾಲ್ಕು ದಿನಗಳವರೆಗೆ ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ. ಈ ಮೂಲಕ ಹದಗೆಟ್ಟಿರುವ ಉಭಯ ದೇಶಗಳ ನಡುವಿನ ಸಂಬಂಧ ಸರಿಯಾಗಿ ಹೊಸ ಚೈತನ್ಯ ತುಂಬುವ ಸಾಧ್ಯತೆ ಇದೆ. ಇದರ ಜತೆಗೆ ಕಾರ್ನಿ ಭಾರತ ಭೇಟಿಗೆ ಮುಂಚಿತವಾಗಿ ನಿಜ್ಜರ್ ಹತ್ಯೆಯಲ್ಲಿ ''ಭಾರತೀಯ ಹಸ್ತಕ್ಷೇಪ''ದ ಆರೋಪದ ಬಗ್ಗೆ ಕೆನಡಾ ತನ್ನ ನಿಲುವುಗಳಲ್ಲಿ ಗಮನಾರ್ಹ ಬದಲಾವಣೆ ಮಾಡಿಕೊಂಡಿದೆ. ಇದು ಕಳೆದ ಒಂದು ವರ್ಷದಿಂದ ಹದಗೆಟ್ಟಿರುವ ದ್ವಿಪಕ್ಷೀಯ ಸಂಬಂಧವನ್ನು ಮತ್ತೆ ಸರಿಪಡಿಸಿಕೊಳ್ಳುವ ಒಂದು ಧನಾತ್ಮಕ ಪ್ರಯತ್ನ ಎಂದು ವಿಶ್ಲೇಷಿಸಲಾಗುತ್ತಿದೆ.

ಇಂದಿನಿಂದ ಕೆನಡಾ ಪ್ರಧಾನಿ ಕಾರ್ನಿ ಭಾರತ ಭೇಟಿ

ಸುದ್ದಿ ಸಮಗ್ರ

ಭಾರತ- ಕೆನಡಾ ಸಂಬಂಧದಲ್ಲಿ ಏರುಪೇರು

- ನಿಜ್ಜರ್ ಹತ್ಯೆಯಲ್ಲಿ ಭಾರತದ ಹಸ್ತಕ್ಷೇಪ ಆರೋಪದ ಬಗ್ಗೆ ಕೆನಡಾ ತನ್ನ ನಿಲುವನ್ನು ಮೃದುಗೊಳಿಸಿದೆ.
- ನಿಜ್ಜರ್ ಹತ್ಯೆಗೆ ಭಾರತವನ್ನು ನೇರವಾಗಿ ದೂಷಿಸಲಾಗಿತ್ತು, ಭಾರತವು ಆರೋಪಗಳನ್ನು ನಿರಾಕರಿಸಿತು.
- 2024ರಿಂದ ಹದಗೆಟ್ಟಿದ್ದ ರಾಜತಾಂತ್ರಿಕ ಸಂಬಂಧ. ಕಾರ್ನಿ ಅವಧಿಯಲ್ಲಿ ಬದಲಾವಣೆಯ ಗಾಳಿ
- ಉಭಯ ದೇಶಗಳ ನಡುವಿನ ವ್ಯಾಪಾರ ವಾರ್ಷಿಕವಾಗಿ 21 ಶತಕೋಟಿ ಡಾಲರ್ ಮೀರಿದೆ.
- ದೀರ್ಘಕಾಲದಿಂದ ಬಾಕಿ ಇರುವ ವ್ಯಾಪಾರ ಒಪ್ಪಂದದ ಮಾತುಕತೆಗಳ ಪುನರಾರಂಭ ಸಾಧ್ಯತೆ

ಕಾರ್ನಿ ಕಾಲದ ಬದಲಾವಣೆ

ಕೆನಡಾದಲ್ಲಿ ಬಳಿಕ ಆಯೋಗದ ವರದಿ ಈ ಹತ್ಯೆಯಲ್ಲಿ ವಿದೇಶಿ ರಾಜ್ಯದೊಂದಿಗೆ ಯಾವುದೇ ನಿರ್ಣಾಯಕ ಸಂಪರ್ಕವನ್ನು ಸಾಬೀತುಪಡಿಸಲಾಗಿಲ್ಲ ಎಂದು ಹೇಳಿದೆ. ಪ್ರಸ್ತುತ ಕಾರ್ನಿ ಭೇಟಿಗೆ ಮುಂಚಿತವಾಗಿ, ಕೆನಡಾದ ಅಧಿಕಾರಿಗಳು ಭಾರತದೊಂದಿಗೆ ದೃಢವಾದ ರಾಜತಾಂತ್ರಿಕ ಸಂಬಂಧಕ್ಕೆ ಒತ್ತು ನೀಡಿದ್ದಾರೆ. ಯಾವುದೇ ಆಪಾದನೆಗಳಂತಹ ಸನ್ನಿವೇಶಗಳು ಮುಂದುವರಿಯುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮಾರ್ಚ್ 2025 ರಲ್ಲಿ ಕಾರ್ನಿ ಅಧಿಕಾರ ವಹಿಸಿಕೊಂಡಾಗಿನಿಂದ ಸಂಬಂಧಗಳಲ್ಲಿನ ಸುಧಾರಣೆ ಗೋಚರಿಸುತ್ತಿದೆ. ರಾಯಭಾರಿಗಳನ್ನು ಮತ್ತೆ ಕರೆಸಿಕೊಳ್ಳಲಾಗಿದ್ದು, ಉನ್ನತ ಮಟ್ಟದ ಭೇಟಿಗಳು ಪುನರಾರಂಭಗೊಂಡಿವೆ.

ಹಿಂದಿನ ಆರೋಪಗಳಿಂದ ಬದಲಾವಣೆ?

2024ರಲ್ಲಿ, ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊ ನೇತೃತ್ವದ ಕೆನಡಾ ಸರ್ಕಾರ, ಬ್ರಿಟಿಷ್ ಕೊಲಂಬಿಯಾದಲ್ಲಿ 2023ರಲ್ಲಿ ನಡೆದ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಗೂ ಭಾರತಕ್ಕೂ ಸಂಬಂಧ ಕಲ್ಪಿಸುವ ವಿಶ್ವಾಸಾರ್ಹ ಆರೋಪಗಳು ಇವೆ ಎಂದು ಹೇಳಿಕೊಂಡಿತ್ತು. ಭಾರತ ಈ ಆರೋಪಗಳನ್ನು ಆಧಾರರಹಿತವೆಂದು ಬಲವಾಗಿ ನಿರಾಕರಿಸಿತ್ತು. ಈ ಹೇಳಿಕೆಗಳಿಂದ ಎರಡೂ ದೇಶಗಳು ರಾಯಭಾರ ಕಚೇರಿಯ ಅಧಿಕಾರಿಗಳನ್ನು ಹೊರಹಾಕಿದ್ದವು, ಇದು ರಾಜತಾಂತ್ರಿಕ ಬಿಕ್ಕಟ್ಟಿಗೆ ಕಾರಣವಾಗಿತ್ತು. ಕೆನಡಾದ ಗುಪ್ತಚರ ಸಂಸ್ಥೆ, ಈ ಪ್ರಕರಣವನ್ನು ಗಂಭೀರ ಉದ್ವಿಗ್ನತೆ ಎಂದು ಕರೆದು, ''ವಿದೇಶಿ ಹಸ್ತಕ್ಷೇಪ''ದ ಬಗ್ಗೆ ಎಚ್ಚರಿಕೆ ನೀಡಿತ್ತು.

ವ್ಯಾಪಾರ ಮತ್ತು ತಂತ್ರಜ್ಞಾನದ ಮೇಲೆ ಗಮನ

ಫೆಬ್ರವರಿ 27 ರಿಂದ ಮಾರ್ಚ್ 2 ರವರೆಗೆ ನಿಗದಿಯಾಗಿರುವ ಕಾರ್ನಿ ಅವರ ಭಾರತ ಪ್ರವಾಸ, ಅವರ ಇಂಡೋ-ಪೆಸಿಫಿಕ್ ಪ್ರವಾಸದ ಕೇಂದ್ರಬಿಂದು ಎನಿಸಿದೆ. ಇದರಲ್ಲಿ ಆಸ್ಟ್ರೇಲಿಯಾ ಮತ್ತು ಜಪಾನ್ ಸಹ ಸೇರಿವೆ. ಭಾರತ ಭೇಟಿ ಮುಂಬೈನಲ್ಲಿ ಪ್ರಾರಂಭವಾಗಿ ನಂತರ ದಿಲ್ಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಮಾತುಕತೆ ನಡೆಸಲಾಗುತ್ತದೆ.

ಹಲವು ಒಪ್ಪಂದಗಳ ಬಗ್ಗೆ ಚರ್ಚೆ

ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯೊಂದಿಗೆ ವಾಣಿಜ್ಯ ಸಂಬಂಧಗಳನ್ನು ಬಲಪಡಿಸುವ ಗುರಿ ಹೊಂದಿರುವ ಪ್ರಾಯೋಗಿಕ ವಿದೇಶಾಂಗ ನೀತಿಯ ಬದಲಾವಣೆಯ ಭಾಗವಾಗಿ ಈ ಭೇಟಿ ನಡೆಯುತ್ತಿದೆ. ವ್ಯಾಪಾರ, ಇಂಧನ, ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಕಂಪ್ಯೂಟಿಂಗ್, ಸಂಶೋಧನಾ ಸಹಯೋಗ, ಪ್ರತಿಭೆಗಳಿಗೆ ಅವಕಾಶ ಮತ್ತು ರಕ್ಷಣಾ ಕ್ಷೇತ್ರಗಳ ಬಗ್ಗೆ ಚರ್ಚೆ ನಡೆಯುವ ನಿರೀಕ್ಷೆಯಿದೆ.

ಸ್ಥಗಿತಗೊಂಡ ಸಮಗ್ರ ಆರ್ಥಿಕ ಪಾಲುದಾರಿಕೆ?

ಕೆನಡಾ-ಭಾರತ ಸಿಇಒ ವೇದಿಕೆಯ ಪುನರುಜ್ಜೀವನ, ಮತ್ತು ವ್ಯಾಪಾರ ಮತ್ತು ಶಿಕ್ಷಣ ಕ್ಷೇತ್ರದ ನಾಯಕರೊಂದಿಗಿನ ಸಭೆಗಳು ಬದಲಾವಣೆಗಳನ್ನು ಸೂಚಿಸಿವೆ. 2010ರಲ್ಲಿ ಪ್ರಾರಂಭವಾದರೂ, ಪದೇಪದೆ ಸ್ಥಗಿತಗೊಂಡ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ ಮಾತುಕತೆಗಳು ಈಗ ಪುನರಾರಂಭಗೊಂಡಿವೆ. ಮುಂಬರುವ ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು ಗಮನಾರ್ಹವಾಗಿ ಹೆಚ್ಚಿಸುವ ಗುರಿಯನ್ನು ಎರಡೂ ದೇಶಗಳು ಹೊಂದಿವೆ.

ಆರೋಪಗಳು ಹಿನ್ನೆಲೆಗೆ?

ಹಿಂದಿನ ಆರೋಪಗಳಿಗೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಗಳು ಮುಂದುವರಿಯುತ್ತಿದ್ದರೂ, ಎರಡೂ ಸರ್ಕಾರಗಳು ವಿಶಾಲ ಕಾರ್ಯತಂತ್ರ ಮತ್ತು ಆರ್ಥಿಕ ಹಿತಾಸಕ್ತಿಗಳು ಹಿಂದೆ ಸರಿಯುವುದನ್ನು ತಡೆಯಲು ನಿರ್ಧರಿಸಿದಂತೆ ತೋರುತ್ತಿದೆ. ಕಾರ್ನಿ ಭೇಟಿ, ಬಿಗಡಾಯಿಸಿರುವ ರಾಜತಾಂತ್ರಿಕ ಸಂಬಂಧ ಸುಸ್ಥಿರ ಪಾಲುದಾರಿಕೆಗೆ ಮರಳುವ ಸಾಧ್ಯತೆಯಿದೆ. ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇದರ ಅಗತ್ಯವೂ ಇದೆ.

ಭದ್ರತಾ ಸಹಕಾರ ಮತ್ತು ವಲಸಿಗರೆಡೆ ಗಮನ

ಕೆನಡಾದಲ್ಲಿ ಸುಮಾರು 2.8 ಮಿಲಿಯನ್ ಭಾರತೀಯ ಮೂಲದವರಿದ್ದಾರೆ ಮತ್ತು ಭಾರತದ ಹೊರಗಿನ ಅತಿದೊಡ್ಡ ಸಿಖ್ ಸಮುದಾಯ ಅದಾಗಿದೆ. ನಿಜ್ಜರ್ ಪ್ರಕರಣದಿಂದ ವಲಸಿಗರ ಸೂಕ್ಷ್ಮ ಭಾವನೆಗಳಿಗೆ ಧಕ್ಕೆಯಾಗಿತ್ತು. ಇದನ್ನು ಸರಿಪಡಿಸುವ ಜತೆಗೆ, ಅಂತಾರಾಷ್ಟ್ರೀಯ ಅಪರಾಧ, ಉಗ್ರವಾದ, ಸೈಬರ್ ಅಪರಾಧ ಮತ್ತು ಅಕ್ರಮ ವಲಸೆ-ವಂಚನೆಯಂತಹ ಸಮಸ್ಯೆಗಳನ್ನು ಪರಿಹರಿಸಲು ಭದ್ರತಾ ಸಹಕಾರವನ್ನು ಬಲಪಡಿಸಲಾಗುತ್ತಿದೆ ಎಂದು ಎರಡೂ ದೇಶಗಳ ಅಧಿಕಾರಿಗಳು ಸೂಚಿಸಿದ್ದಾರೆ. ಉಭಯ ದೇಶಗಳ ಹಿರಿಯ ರಾಷ್ಟ್ರೀಯ ಭದ್ರತಾ ಸಲಹೆಗಾರರು ಇತ್ತೀಚೆಗೆ ವ್ಯಾಪಕ ಚರ್ಚೆ ನಡೆಸಿದ್ದಾರೆ.

ಕಿರುಸುದ್ದಿ

ಎನ್‌ಕೌಂಟರ್: ಇಬ್ಬರು ನಕ್ಸಲರ ವಧೆ, ಶಸ್ತ್ರಾಸ್ತ್ರ ವಶ



• **ಬಿಜಾಪುರ್:** ಛತ್ತೀಸಗಢದ ಬಿಜಾಪುರ್ ಜಿಲ್ಲೆಯಲ್ಲಿ ಗುರುವಾರ ಭದ್ರತಾ ಪಡೆಗಳ ಮತ್ತು ಮಾವೋವಾದಿಗಳ ನಡುವಿನ ಗುಂಡಿನ ಚಕಮಕಿಯಲ್ಲಿ ಇಬ್ಬರು ನಕ್ಸಲರು ಬಲಿಯಾಗಿದ್ದಾರೆ. ಜಂಗ್ಲಾ ಪೊಲೀಸ್ ಠಾಣೆ ವ್ಯಾಪ್ತಿಯ ಇಂದ್ರಾವತಿ ನದಿ ಕಾಡುಗಳಲ್ಲಿ ಮಾವೋವಾದಿಗಳು ಇದ್ದಾರೆಂಬ ಗುಪ್ತಚರ ಮಾಹಿತಿ ಆಧಾರದಲ್ಲಿ ಭದ್ರತಾ ಸಿಬ್ಬಂದಿ ಶೋಧ ಕಾರ್ಯಾಚರಣೆಯನ್ನು ನಡೆಸಿದ್ದಾರೆ. ಎನ್‌ಕೌಂಟರ್‌ಗೆ ಬಲಿಯಾದ ನಕ್ಸಲರಲ್ಲಿ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆಯೆಂದು ಅಧಿಕಾರಿಗಳು ತಿಳಿಸಿದ್ದಾರೆ. ಎಸ್‌ಎಲ್‌ಆರ್ ರೈಫಲ್, ಇನ್ಸಾಸ್ ಅಸಾಲ್ಟ್ ರೈಫಲ್, 12-ಬೋರ್ ಗನ್, ಸ್ಫೋಟಕಗಳನ್ನು ಪೊಲೀಸರು ವಶಪಡಿಸಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಪಾಕ್‌ಗೆ ಭಾರತ ಛೀಮಾರಿ

• **ವಿಶ್ವಸಂಸ್ಥೆ/ಜಿನೀವಾ:** ಜಮ್ಮು-ಕಾಶ್ಮೀರದ ಅಭಿವೃದ್ಧಿ ಬಜೆಟ್ ಅಂತಾರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ಪಾಕಿಸ್ತಾನ ಇತ್ತೀಚೆಗೆ ಕೋರಿದ್ದ ಬೇಲ್ ಔಟ್ ಪ್ಯಾಕೇಜ್‌ಗಿಂತ ಎರಡು ಪಟ್ಟು ಹೆಚ್ಚು ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಲ್ಲಿ ಭಾರತ ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡಿದೆ. ಕೌನ್ಸಿಲ್‌ನ 61ನೇ ಅಧಿವೇಶನದಲ್ಲಿ, ಪಾಕಿಸ್ತಾನ, ಕಾಶ್ಮೀರ ಸಮಸ್ಯೆಯನ್ನು ಎತ್ತಿದ ನಂತರ ಉತ್ತರಿಸುವ ಹಕ್ಕಿನಲ್ಲಿ ಜಿನೀವಾದಲ್ಲಿರುವ ಭಾರತದ ಶಾಶ್ವತ ರಾಯಭಾರ ಕಚೇರಿಯ ಮೊದಲ ಕಾರ್ಯದರ್ಶಿ ಅನುಪಮಾ ಸಿಂಗ್ ಈ ಹೇಳಿಕೆ ನೀಡಿದ್ದಾರೆ. ಜಮ್ಮು-ಕಾಶ್ಮೀರದ ಅಭಿವೃದ್ಧಿ ವೆಚ್ಚ ಪಾಕಿಸ್ತಾನ ಕೋರಿದ ಐಎಂಎಫ್ ಸಹಾಯವನ್ನು ಮೀರಿದೆ ಎಂದು ನಂಬಲಾಗದಂತಿದ್ದರೆ, ಪಾಕಿಸ್ತಾನ ಇನ್ನೂ ಕನಸಿನ ಲೋಕದಲ್ಲಿ ವಿಹರಿಸುತ್ತಿದೆ ಎಂದೇ ತಿಳಿಯಬೇಕಾಗುತ್ತದೆ. ಕಳೆದ ವರ್ಷ, ವಿಸ್ತೃತ ನಿಧಿ ಸೌಲಭ್ಯದಲ್ಲಿ ಸುಮಾರು 1 ಬಿಲಿಯನ್ ಯುಎಸ್ ಡಾಲರ್ ಅನ್ನು ಐಎಂಎಫ್ ಅನುಮೋದಿಸಿದ್ದು, ಒಟ್ಟು ವಿತರಣೆ ಸುಮಾರು 2.1 ಬಿಲಿಯನ್ ಯುಎಸ್ ಡಾಲರ್‌ಗೆ ಏರಿದೆ. ಕಣಿವೆ ರಾಜ್ಯದಲ್ಲಿ ಇತ್ತೀಚಿನ ಚುನಾವಣೆಗಳಲ್ಲಿ ದಾಖಲಾದ ಅತ್ಯುತ್ತಮ ಮತದಾನ ಪ್ರಮಾಣ ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ನಂಬಿಕೆ ತೋರಿಸಿದೆ ಮತ್ತು ಅದು ಭಯೋತ್ಪಾದನೆಗೆ ಸ್ಪಷ್ಟ ನಿರಾಕರಣೆಯೂ ಆಗಿದೆ ಎಂದು ಭಾರತ ಸಮರ್ಥಿಸಿಕೊಂಡಿದೆ. ಪಾಕಿಸ್ತಾನ ಮತ್ತು ಒಐಸಿ ಎತ್ತಿದ ಎಲ್ಲಾ ಆರೋಪಗಳನ್ನು ಭಾರತ ಸ್ಪಷ್ಟವಾಗಿ ನಿರಾಕರಿಸಿದೆ.

ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಆರ್‌ಎಸ್‌ಎಸ್ ಬದ್ಧ

• **ಲುಧಿಯಾನಾ:** ಬಲಿಷ್ಠ ರಾಷ್ಟ್ರ ನಿರ್ಮಾಣವೇ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮೂಲ ಸಂಕಲ್ಪವಾಗಿದ್ದು, ದೇಶದ ಪ್ರತಿಯೊಬ್ಬ ನಾಗರಿಕನನ್ನೂ ಅದರಲ್ಲಿ ಭಾಗಿಯಾಗಿಸುವುದು ಸಂಘದ ಧ್ಯೇಯ ಎಂದು ಸರಸಂಘಚಾಲಕ್ ಮೋಹನ್ ಭಾಗವತ್ ತಿಳಿಸಿದ್ದಾರೆ. ಸಂಘದ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳ ಅಂಗವಾಗಿ ಪಂಜಾಬ್‌ಗೆ ಎರಡು ದಿನಗಳ ಭೇಟಿಗೆ ಆಗಮಿಸಿದ್ದ ಭಾಗವತ್ ಅವರು, ಜಾತಿ, ಮತ, ಭಾಷೆ ಅಥವಾ ಪಂಥ ಯಾವುದನ್ನೂ ಪರಿಗಣಿಸದೆ ಎಲ್ಲರನ್ನೂ ಒಳಗೊಂಡ ಸಮಗ್ರ ರಾಷ್ಟ್ರ ನಿರ್ಮಾಣಕ್ಕೆ ಸಂಘ ಬದ್ಧವಾಗಿದೆ ಎಂದು ಅವರು ಹೇಳಿದರು. ಎಲ್ಲರನ್ನು ಸಮಾನ ದೃಷ್ಟಿಯಿಂದಲೇ ಸಂಘ ಪರಿಗಣಿಸುತ್ತದೆ ಮತ್ತು ಸಮಾನವಾಗಿ ವರ್ತಿಸುತ್ತದೆ ಎಂದು ಭಾಗವತ್ ಒತ್ತಿ ಹೇಳಿದರು. ಸಂಘದ ಕುರಿತು ಟೀಕೆ ಮಾಡುವವರು ಮೊದಲು ಸಂಘವನ್ನು ಒಳಗಿನಿಂದ ಅರಿತುಕೊಳ್ಳಬೇಕು ಎಂದು ಅವರು ಪರೋಕ್ಷವಾಗಿ ಟೀಕಾಕಾರರಿಗೆ ಸಂದೇಶ ನೀಡಿದರು. ಸಂಘದ ಕಾರ್ಯಪದ್ಧತಿ ಹಾಗೂ ತತ್ವಗಳನ್ನು ತಿಳಿದುಕೊಂಡು, ಅಧ್ಯಯನ ಮಾಡಿದ ಬಳಿಕದ ಟೀಕೆಯನ್ನು ಸಂಘ ಸ್ವಾಗತಿಸುತ್ತದೆ. ಆದರೆ ಅಜ್ಞಾನಾಧಾರಿತ ಟೀಕೆ ಯಾರಿಗೂ ಉಪಯೋಗಕಾರಿಯಲ್ಲ ಎಂದು ಭಾಗವತ್ ಹೇಳಿದರು. ಇದೇ ವೇಳೆ, ಭಾಗವತ್ ಅವರು ಫೆ.27 ಹಾಗೂ 28ರಂದು ಹರ್ಯಾಣಕ್ಕೆ ಭೇಟಿ ನೀಡಲಿದ್ದಾರೆ. ಶುಕ್ರವಾರ ಅಂಬಾಲಾ ಸಿಟಿ ಹಾಗೂ ಅಂಬಾಲಾ ಕ್ಯಾಂಟೋನ್ಮೆಂಟ್‌ನ ಪೊಲೀಸ್ ಲೈನ್ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 15ರಿಂದ 40 ವರ್ಷದೊಳಗಿನ ಸುಮಾರು 1,000 ಸ್ವಯಂಸೇವಕರು ಭಾಗವಹಿಸಲಿದ್ದಾರೆ. ಫೆ.28ರಂದು ಕುರುಕ್ಷೇತ್ರದ ಶ್ರೀಮದ್ ಭಗವದ್ಗೀತಾ ಸಭಾಂಗಣದಲ್ಲಿ ವಿಚಾರ ಸಂಕಿರಣ ನಡೆಯಲಿದೆ.

ಟಿಕೆಟ್ ಮರುಪಾವತಿ ನಿಯಮ ಪರಿಷ್ಕರಣೆ

• **ಹೊಸದಿಲ್ಲಿ:** ಪ್ರಯಾಣಿಕರಿಗೆ ಹೆಚ್ಚಿನ ಆಯ್ಕೆಗಳು ಮತ್ತು ರಕ್ಷಣೆ ನೀಡಲು ವಿಮಾನಯಾನ ಟಿಕೆಟ್ ಮರುಪಾವತಿ ನಿಯಮಗಳನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ನವೀಕರಿಸಿದೆ. 48 ಗಂಟೆಗಳ ಲುಕ್-ಇನ್ ಅವಧಿಯನ್ನು ಪರಿಚಯಿಸಲಾಗಿದೆ. ಈ ಅವಧಿಯಲ್ಲಿ, ಪರಿಷ್ಕೃತ ವಿಮಾನಗಳಲ್ಲಿನ ಯಾವುದೇ ಶುಲ್ಕ ವ್ಯತ್ಯಾಸವನ್ನು ಹೊರತುಪಡಿಸಿ, ಹೆಚ್ಚುವರಿ ಶುಲ್ಕಗಳಿಲ್ಲದೆ ಟಿಕೆಟ್‌ಗಳನ್ನು ರದ್ದುಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು. 7 ದಿನಗಳಲ್ಲಿ ನಿರ್ಗಮಿಸುವ ದೇಶೀಯ ವಿಮಾನಗಳಿಗೆ ಅಥವಾ ಬುಕಿಂಗ್ ಮಾಡಿದ 15 ದಿನಗಳಲ್ಲಿ ನಿರ್ಗಮಿಸುವ ಅಂತಾರಾಷ್ಟ್ರೀಯ ವಿಮಾನಗಳಿಗೆ ಈ ಸೌಲಭ್ಯ ಲಭ್ಯವಿರುವುದಿಲ್ಲ. ವಿಮಾನಯಾನ ಸಂಸ್ಥೆಯ ಆ್ಯಪ್ ಮೂಲಕ ಬುಕಿಂಗ್ ಮಾಡಿದ 24 ಗಂಟೆಗಳ ಒಳಗೆ ದೋಷ ವರದಿಯಾದರೆ ಅದೇ ಪ್ರಯಾಣಿಕರ ಹೆಸರನ್ನು ಸರಿಪಡಿಸಲು ಯಾವುದೇ ಹೆಚ್ಚುವರಿ ಶುಲ್ಕ ವಿಧಿಸಲಾಗುವುದಿಲ್ಲ. ಟ್ರಾವೆಲ್ ಏಜೆಂಟ್‌ಗಳು ಅಥವಾ ಪೋರ್ಟಲ್‌ಗಳ ಮೂಲಕ ಖರೀದಿಸಿದ ಟಿಕೆಟ್‌ಗಳಿಗೆ, ವಿಮಾನಯಾನ ಸಂಸ್ಥೆಗಳು 14 ಕೆಲಸದ ದಿನಗಳಲ್ಲಿ ಮರುಪಾವತಿಯನ್ನು ಪ್ರಕ್ರಿಯೆಗೊಳಿಸಬೇಕು. ಅದೇ ಪಿಎನ್‌ಆರ್‌ನಲ್ಲಿ ಪ್ರಯಾಣಿಕರನ್ನು ಅಥವಾ ಕುಟುಂಬದ ಸದಸ್ಯರನ್ನು ಆಸ್ಪತ್ರೆಗೆ ದಾಖಲಿಸುವುದರಿಂದ, ರದ್ದಾದರೆ ಪೂರ್ಣ ಮರುಪಾವತಿ ಅಥವಾ ಕ್ರೆಡಿಟ್ ಶೆಲ್‌ಗೆ ಕಾರಣವಾಗಬಹುದು. ಇತರ ಸಂದರ್ಭಗಳಲ್ಲಿ, ಮರುಪಾವತಿಯನ್ನು ನೀಡುವ ಮೊದಲು ಅಧಿಕೃತ ಏರೋಸ್ಪೇಸ್ ಮೆಡಿಸಿನ್ ತಜ್ಞರಿಂದ ಫಿಟ್ನೆಸ್-ಟು-ಟ್ರಾವೆಲ್ ಪ್ರಮಾಣಪತ್ರದ ಅಗತ್ಯವಿದೆ. ನಾಗರಿಕ ವಿಮಾನಯಾನ ಅಗತ್ಯಗಳಿಗೆ ತಿದ್ದುಪಡಿಗಳು, ವಿಳಂಬ ಮರುಪಾವತಿಗಳ ಬಗ್ಗೆ ಹೆಚ್ಚುತ್ತಿರುವ ದೂರುಗಳಿಗೆ ಇದೊಂದು ಪರಿಹಾರ ಒದಗಿಸಬಹುದು.

ಅಮೆರಿಕದ ವಾಣಿಜ್ಯ ಕಾರ್ಯದರ್ಶಿ, ಗೋಯಲ್ ಭೇಟಿ

• **ಹೊಸದಿಲ್ಲಿ:** ಭಾರತ-ಅಮೆರಿಕ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಧನಾತ್ಮಕ ಬೆಳವಣಿಗೆಯಂತೆ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ದಿಲ್ಲಿಯಲ್ಲಿ ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಡಬ್ಲ್ಯು ಲುಟ್ನಿಕ್ ಅವರನ್ನು ಭೇಟಿಯಾದರು. ಇದು ಭಾರತ-ಅಮೆರಿಕ ವ್ಯಾಪಾರ ಒಪ್ಪಂದವನ್ನು ಒಪ್ಪಿಕೊಂಡ ನಂತರ ಅವರ ಮೊದಲ ಭೇಟಿಯಾಗಿದೆ. ಈ ವೇಳೆ ಅಮೆರಿಕ ರಾಯಭಾರಿ ಸರ್ಗೆ ಗೋರ್ ಕೂಡ ಉಪಸ್ಥಿತರಿದ್ದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾರೀ ಸುಂಕ ನೀತಿ ಬಗ್ಗೆ ಸುಪ್ರೀಂಕೋರ್ಟ್ ಕಾನೂನು ಬಾಹಿರ, ತುರ್ತು ಪರಿಸ್ಥಿತಿಯ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದೆ ಎಂದು ಹೇಳಿದ ಬಳಿಕ ವ್ಯಾಪಾರ ಒಪ್ಪಂದದ ಮಾತುಕತೆ ದಿನಾಂಕವನ್ನು ಮುಂದೂಡಲಾಗಿತ್ತು. ಭಾರತ ಮತ್ತು ಅಮೆರಿಕದ ಸಕಾರಾತ್ಮಕ ಹೇಳಿಕೆಗಳು ಈ ಭೇಟಿಯ ನಂತರ ಎರಡೂ ದೇಶಗಳು ದ್ವಿಪಕ್ಷೀಯ ವ್ಯಾಪಾರವನ್ನು ಮುಂದುವರಿಸಲು ಬದ್ಧವಾಗಿವೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

ಪಾಕ್ ಗಡಿ ಸಮೀಪ ಪೋಖ್ರಾನ್‌ನಲ್ಲಿ ವಾಯುಪಡೆ ತಾಲೀಮು

ಇಂದು ವಾಯು ಶಕ್ತಿಯ ದರ್ಶನ

• **ಜೈಸಲ್ಮೇರ್:** ವಾಯು ರಕ್ಷಣಾ ಶಕ್ತಿಯನ್ನು ಪ್ರದರ್ಶಿಸುವ ವಾಯುಪಡೆಯ ತಾಲೀಮು ವಾಯು ಶಕ್ತಿ-2026, ರಾಜಸ್ಥಾನದ ಪೋಖ್ರಾನ್ ಉಡಾವಣಾ ಕೇಂದ್ರದಲ್ಲಿ ಶುಕ್ರವಾರ ಆರಂಭವಾಗಲಿದೆ. ಪಾಕಿಸ್ತಾನದ ಗಡಿಯಿಂದ 270 ಕಿ.ಮೀ. ದೂರದಲ್ಲಿರುವ ಪೋಖ್ರಾನ್‌ನಲ್ಲಿ ವಾಯು ಶಕ್ತಿ ನಡೆಯಲಿದೆ. ಶುಕ್ರವಾರದಿಂದ ಆರಂಭವಾಗುವ ಪ್ರದರ್ಶನ ಕಾರ್ಯಕ್ರಮಕ್ಕಾಗಿ ವಾಯುಪಡೆ ಅಭ್ಯಾಸ ನಡೆಸಿದೆ. ಪಾಕ್ ಗಡಿ ಸಮೀಪ ವಾಯುಪಡೆಯ ಹೈ-ಪ್ರೊಫೈಲ್ ಶಕ್ತಿ ಪ್ರದರ್ಶನ ನಡೆಸಲಿದೆ. ಪ್ರಮುಖ ಯುದ್ಧ ವಿಮಾನಗಳು, ಸೇನಾ ಸರಕು ವಿಮಾನಗಳು ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆಯ ಸಂಪೂರ್ಣ ಶಕ್ತಿ ಪ್ರದರ್ಶನ ನಡೆಯಲಿದೆ. ಶುಕ್ರವಾರ ನಡೆಯುವ ಕಾರ್ಯಕ್ರಮಕ್ಕಾಗಿ ವಾಯುಪಡೆ ಕಳೆದೊಂದು ವಾರದಿಂದ ಅಭ್ಯಾಸ ನಡೆಸುತ್ತಿದೆ. ಶನಿವಾರ ಮೀಸಲು ದಿನವನ್ನಾಗಿ ಇಡಲಾಗಿದೆ.

ಯಾಕಾಗಿ ಶಕ್ತಿ ಪ್ರದರ್ಶನ?: ಆಪರೇಷನ್ ಸಿಂಧೂರ ಬಳಿಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಯುದ್ಧ ಸನ್ನದ್ಧತೆ ನಡೆಸುತ್ತಿದೆ. ಪಾಕಿಸ್ತಾನ, ಚೀನಾ ಗಡಿ ಪ್ರದೇಶಗಳಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ನಿಯೋಜನೆ ಮಾಡುತ್ತಿದ್ದು, ಭವಿಷ್ಯದ ಸವಾಲುಗಳನ್ನು ಎದುರಿಸಲು ಸನ್ನದ್ಧಗೊಳ್ಳುತ್ತಿದೆ. ಭಾರತವನ್ನು ಕೆಣಕಲು ಬಂದರೆ ಶತ್ರು ಸಂಹಾರ ಶತಸಿದ್ಧವೆಂಬ ಸಂದೇಶ ನೀಡುವುದಲ್ಲದೆ, ಎಲ್ಲಾ ರೀತಿಯಲ್ಲೂ ಸೇನಾ ಸಾಮರ್ಥ್ಯ ಬಲವರ್ಧನೆ ಮಾಡುವುದರಲ್ಲಿ ಸರ್ಕಾರ ತೊಡಗಿದೆ.



- ವಾಯುಪಡೆ (ಐಎಎಫ್) ತ್ವರಿತ ಪ್ರತಿದಾಳಿ ಪ್ರದರ್ಶನ
- ಯುದ್ಧ ಭೂಮಿಯ ನೈಜ ಕಾರ್ಯಾಚರಣೆ ಪ್ರದರ್ಶನ
- ಹಲವು ವಿಭಾಗಗಳ ಯುದ್ಧ ಸನ್ನದ್ಧತೆ ಖಚಿತಪಡಿಸುವಿಕೆ
- ವಾಯುಪಡೆಯ ಶಸ್ತ್ರಾಸ್ತ್ರಗಳ ಉಡಾವಣೆ ಪ್ರದರ್ಶನ
- ಶಸ್ತ್ರಾಸ್ತ್ರಗಳ ನಿಖರತೆಯ ಪರೀಕ್ಷೆ
- ಯುದ್ಧ ವಿಮಾನಗಳು, ಶಸ್ತ್ರಾಸ್ತ್ರಗಳು ಮತ್ತು ಉಡಾವಣಾ ವ್ಯವಸ್ಥೆಗಳ ನಡುವಿನ ಏಕೀಕರಣದ ಪ್ರಯೋಗ

ಯುದ್ಧ ವಿಮಾನಗಳು?

- ರಾಫೆಲ್
- ಸುಖೋಯ್ ಎಸ್‌ಯು-30ಎಂಕೆಐ
- ಮಿರೇಜ್-2000
- ಮಿಗ್-29
- ಜಾಗ್ವಾರ್
- ತೇಜಸ್ (ಭಾಗವಹಿಸುವುದು ಖಚಿತವಾಗಿಲ್ಲ)

ಹೆಲಿಕಾಪ್ಟರ್, ಸರಕು ವಿಮಾನಗಳು?

- ಎಎಚ್-64 ಅಪಾಚೆ
- ಚಿನೂಕ್
- ಸಿ-130ಜೆ, ಸಿ-295, ಸಿ-17
- ಎಲ್‌ಸಿಎಚ್ ಪ್ರಚಂಡ್


ವಾಯು ರಕ್ಷಣಾ ವ್ಯವಸ್ಥೆಗಳು?

- ಎಸ್-400 (ಸುದರ್ಶನ ಚಕ್ರ) ಕ್ಷಿಪಣಿ ವ್ಯವಸ್ಥೆ
- ಇತರ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ನಿಯೋಜನೆ

ಅತ್ಯಧಿಕ ಇನ್‌ಸ್ಟಾ ಹಿಂಬಾಲಕರಿರುವ ವಿಶ್ವ ನಾಯಕ

ಮೋದಿಗೆ 10 ಕೋಟಿ ಫಾಲೋವರ್ಸ್

• **ಹೊಸದಿಲ್ಲಿ:** ದೇಶದೊಳಗೆ ಯಾರೇನೇ ಗುಲ್ಲು ಎಬ್ಬಿಸಿದರೂ ಜಾಗತಿಕ ಮಟ್ಟದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆ ಕಡಿಮೆಯಾಗಿಲ್ಲ, ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ ಮೋದಿ ಹಿಂಬಾಲಕರ ಸಂಖ್ಯೆ 10 ಕೋಟಿ (100 ದಶಲಕ್ಷ) ದಾಟಿದ್ದು, ಇನ್‌ಸ್ಟಾದಲ್ಲಿ ಅತ್ಯಧಿಕ ಹಿಂಬಾಲಕರನ್ನು ಹೊಂದಿರುವ ವಿಶ್ವ ನಾಯಕ ಮತ್ತು ರಾಜಕಾರಣಿ ಎಂಬ ಮೈಲಿಗಲ್ಲು ಬರೆದಿದ್ದಾರೆ.



ವಿಶ್ವದ ಅತ್ಯಧಿಕ ಇನ್‌ಸ್ಟಾ ಹಿಂಬಾಲಕರನ್ನು ಹೊಂದಿರುವ ಜನಪ್ರಿಯ ವ್ಯಕ್ತಿಗಳ ಯಾದಿಯಲ್ಲಿ ಮೋದಿ 37ನೇ ಸ್ಥಾನ ಸಂಪಾದಿಸಿದ್ದಾರೆ. ಭಾರತದ ಕ್ರಿಕೆಟ್ ತಾರೆ ವಿರಾಟ್ ಕೊಹ್ಲಿ, 16ನೇ ಸ್ಥಾನದಲ್ಲಿದ್ದಾರೆ. ಕೊಹ್ಲಿ, ಅಗ್ರ-20ರೊಳಗೆ ಸ್ಥಾನ ಪಡೆದ ಏಕೈಕ ಭಾರತೀಯರಾಗಿದ್ದಾರೆ.

ಪ್ರಧಾನಿ ಮೋದಿಯವರು 2014ರಲ್ಲಿ ಇನ್‌ಸ್ಟಾಗ್ರಾಂ ಸೇರಿದ್ದರು. ಇತರ ಜಾಗತಿಕ ನಾಯಕರಿಗೆ ಹೋಲಿಸಿದರೆ ಮೋದಿಯವರು ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಸಕ್ರಿಯವಾಗಿದ್ದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗಿಂತ ದುಪ್ಪಟ್ಟು ಹಿಂಬಾಲಕರನ್ನು ಮೋದಿ ಹೊಂದಿದ್ದಾರೆ. ನಂತರದಲ್ಲಿರುವ ಯಾವುದೇ ನಾಯಕರ ಒಟ್ಟು ಹಿಂಬಾಲಕರ ಸಂಖ್ಯೆ, ಮೋದಿ ಹಿಂಬಾಲಕರ ಸಂಖ್ಯೆಗಿಂತ ಕಡಿಮೆಯಿದೆ. ದ್ವಿತೀಯ ಸ್ಥಾನ ಪಡೆದಿರುವ ಟ್ರಂಪ್ 4.32 ಕೋಟಿ (43.2 ದಶಲಕ್ಷ) ಇನ್‌ಸ್ಟಾ ಹಿಂಬಾಲಕರನ್ನು ಹೊಂದಿದ್ದಾರೆ.

ಭಾರತೀಯ ರಾಜಕಾರಣಿಗಳಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ (1.61 ಕೋಟಿ) ದ್ವಿತೀಯ ಸ್ಥಾನದಲ್ಲಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ (1.26 ಕೋಟಿ) ತೃತೀಯ ಸ್ಥಾನದಲ್ಲಿದ್ದಾರೆ.

ಇನ್‌ಸ್ಟಾ ಖಾತೆಗಳು

1. ಇನ್‌ಸ್ಟಾಗ್ರಾಂ - 69.8 ಕೋಟಿ
2. ಕ್ರಿಸ್ಟಿಯಾನೊ ರೊನಾಲ್ಡೊ - 67 ಕೋಟಿ
3. ಲಿಯೊನೆಲ್ ಮೆಸ್ಸಿ - 51.1 ಕೋಟಿ
4. ಸೆಲೆನಾ ಗೊಮೆಜ್ - 41.5 ಕೋಟಿ
5. ಕೈಲಿ ಜೆನ್ನರ್ - 39.1 ಕೋಟಿ
16. ವಿರಾಟ್ ಕೊಹ್ಲಿ - 27.4 ಕೋಟಿ
37. ನರೇಂದ್ರ ಮೋದಿ - 10 ಕೋಟಿ

ವಿವಿಧ ಸ್ಥಳಗಳಿಗೆ ಜಿಬಿಎ ಮುಖ್ಯ ಆಯುಕ್ತರ ಭೇಟಿ
ಶೌಚಾಲಯ ನೂರರಷ್ಟು ಸ್ವಚ್ಛವಾಗಿರಲಿ

• **ಬೆಂಗಳೂರು:** ನಗರದಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ಶೇ.100ರಷ್ಟು ಸ್ವಚ್ಛವಾಗಿಡಲು ಕ್ರಮವಹಿಸಿ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚಿಸಿದರು.



ಸಾರ್ವಜನಿಕ ಸಂಪರ್ಕ ಸಭೆ ಭಾಗವಾಗಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಗುರುವಾರ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಸಾರ್ವಜನಿಕ ಶೌಚಾಲಯಗಳನ್ನು ಶೇ.100 ರಷ್ಟು ಸ್ವಚ್ಛವಾಗಿಡಲು ಕ್ರಮವಹಿಸಿ. ದಾಸಪ್ಪ ಆಸ್ಪತ್ರೆಯಲ್ಲಿ ಲಭ್ಯವಿರುವ ಸೌಲಭ್ಯಗಳು, ಕಾರ್ಯನಿರ್ವಹಿಸುವ ವೈದ್ಯರು ಹಾಗೂ ಸಿಬ್ಬಂದಿಗಳ ವಿವರಗಳನ್ನು ಒಳಗೊಂಡ ಮಾಹಿತಿ ಫಲಕವನ್ನು ಆಸ್ಪತ್ರೆಯಲ್ಲಿ ಅಳವಡಿಸಿ. ಆಸ್ಪತ್ರೆ ಆವರಣದಲ್ಲಿ ಬೀಳುವ ಎಲೆಗಳನ್ನು ಸ್ಥಳದಲ್ಲಿಯೇ ಗೊಬ್ಬರವಾಗಿ ಪರಿವರ್ತಿಸಲು ಎಲೆ ಸಂಸ್ಕರಣಾ ಘಟಕವನ್ನು ನಿರ್ಮಿಸಿ. ದಾಸಪ್ಪ ಆಸ್ಪತ್ರೆ ಆವರಣದಲ್ಲಿ ಹಸಿರು ಕಟ್ಟಡ ನಿರ್ಮಾಣ ಹಾಗೂ ಮಲ್ಟಿ-ಲೆವೆಲ್ ಕಾರ್ ಪಾರ್ಕಿಂಗ್ ನಿರ್ಮಾಣಕ್ಕೆ ಅವಕಾಶವಿದೆಯೇ ಎಂಬುದರ ಬಗ್ಗೆ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಿದ್ದಯ್ಯ ರೆಫರಲ್ ಆಸ್ಪತ್ರೆ ಪರಿಶೀಲನೆ ನಡೆಸಿ, ಮೊದಲ ಹಾಗೂ ಎರಡನೇ ಮಹಡಿಗಳು ಸಮರ್ಪಕವಾಗಿ ಬಳಕೆಯಾಗದಿರುವುದನ್ನು ಗಮನಿಸಿ, ಎಲ್ಲಾ ಮಹಡಿಗಳನ್ನು ಪೂರ್ಣ ಪ್ರಮಾಣದಲ್ಲಿ ಸದ್ಬಳಕೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ಬಳಿಕ ಆಸ್ಪತ್ರೆಯ ಲ್ಯಾಬ್ ಹಾಗೂ ಫಾರ್ಮಸಿ ವಿಭಾಗಗಳನ್ನು ಪರಿಶೀಲಿಸಿ, ಸಮರ್ಪಕ ನಿರ್ವಹಣೆ ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ವಿವಿಧ ವಾರ್ಡ್ ಇತರ ಕಚೇರಿಗಳಿಗೆ ಭೇಟಿ ನೀಡಿ, ಕಾರ್ಯನಿರ್ವಹಣೆಯ ಸ್ಥಿತಿಗತಿ, ರಿಜಿಸ್ಟರ್ ನಿರ್ವಹಣೆ ಸೇರಿದಂತೆ ಇತರೆ ದಾಖಲೆಗಳನ್ನು ಪರಿಶೀಲಿಸಿದರು.

ಚಲನಚಿತ್ರ ನಿರ್ದೇಶಕನ ಅಪಹರಣ ಪ್ರಕರಣ
11 ಮಂದಿ ಆರೋಪಿಗಳ ಬಂಧನ

• **ಬೆಂಗಳೂರು:** ಚಲನಚಿತ್ರ ನಿರ್ದೇಶಕರನ್ನು ಅಪಹರಿಸಿ, ಹಲ್ಲೆ ನಡೆಸಿ ಚಿನ್ನಾಭರಣ ಹಾಗೂ ನಗದು ದೋಚಿದ್ದ 11 ಮಂದಿ ಆರೋಪಿಗಳನ್ನು ಆಡುಗೋಡಿ ಪೊಲೀಸರು ಬಂಧಿಸಿದ್ದಾರೆ.

ದೂರುದಾರರು ಹೊಸ ಚಿತ್ರವೊಂದನ್ನು ನಿರ್ದೇಶಿಸಿದ್ದು, ಅದು ಇನ್ನೂ ಬಿಡುಗಡೆಯಾಗಿಲ್ಲ. ಈ ಚಿತ್ರಕ್ಕೆ ಹಣ ಹೂಡಿಕೆ ಮಾಡಿದ ವ್ಯಕ್ತಿ ಹಾಗೂ ನಿರ್ದೇಶಕನ ಜತೆ ಕೆಲಸ ಮಾಡುತ್ತಿದ್ದ ಮತ್ತೊಬ್ಬ ವ್ಯಕ್ತಿಯ ನಡುವೆ ಹಣದ ವಿಚಾರವಾಗಿ ಮನಸ್ತಾಪ ಉಂಟಾಗಿತ್ತು. ಕೆಲವು ತಿಂಗಳ ಹಿಂದೆ ನಿರ್ದೇಶಕರು ಮುಂಬೈಗೆ ತೆರಳಿದ್ದರು. ಈ ಸಂದರ್ಭದಲ್ಲಿ ತಮ್ಮ ಕಾರನ್ನು ಮಾರಾಟ ಮಾಡುವ ವಿಚಾರವನ್ನು ಬೆಂಗಳೂರಿನ ಇಂದಿರಾನಗರದಲ್ಲಿದ್ದ ತಮ್ಮ ನಟಿ ಸ್ನೇಹಿತೆಯೊಬ್ಬರಿಗೆ ತಿಳಿಸಿದ್ದರು.

ನಟಿಯ ಮೂಲಕ ಈ ವಿಷಯ ತಿಳಿದ ಆರೋಪಿಗಳು, ಕಾರು ಮಾರಾಟ ಮಾಡಿಸಿಕೊಡುವುದಾಗಿ ನಂಬಿಸಿ ನಿರ್ದೇಶಕರನ್ನು ಮುಂಬೈನಿಂದ ಬೆಂಗಳೂರಿಗೆ ಕರೆಸಿಕೊಂಡಿದ್ದಾರೆ. ನಗರಕ್ಕೆ ಬಂದ ನಿರ್ದೇಶಕರನ್ನು ಆಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಸ್ಥಳವೊಂದಕ್ಕೆ ಕರೆಸಿಕೊಂಡ ಆರೋಪಿಗಳು, ಅಲ್ಲಿಂದ ಅವರನ್ನು ಕಾರಿನಲ್ಲಿ ಅಪಹರಿಸಿದ್ದಾರೆ.

ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ಅಕ್ರಮವಾಗಿ ಬಂಧನದಲ್ಲಿಟ್ಟು, ಐದಾರು ಮಂದಿ ಸೇರಿ ಕ್ರಿಕೆಟ್ ಸ್ಟಂಪ್ ಹಾಗೂ ಹಾಕಿ ಸ್ಟಿಕ್‌ಗಳಿಂದ ಹಲ್ಲೆ ನಡೆಸಿದ್ದಾರೆ. ಈ ವೇಳೆ ನಿರ್ದೇಶಕರು ಧರಿಸಿದ್ದ ಚಿನ್ನದ ಒಡವೆ ಹಾಗೂ ನಗದನ್ನು ಕಿತ್ತುಕೊಳ್ಳಲಾಗಿದೆ. ನಂತರ ಅವರನ್ನು ತುಮಕೂರು ಜಿಲ್ಲೆಯ ಪಂಡಿತನಹಳ್ಳಿಯ ಮಂದಾರಗಿರಿ ಬೆಟ್ಟದ ಬಳಿ ಕರೆದೊಯ್ದು ಅಲ್ಲಿಯೂ ಹಲ್ಲೆ ನಡೆಸಲಾಗಿತ್ತು ಎಂದು ಆರೋಪಿಸಲಾಗಿದೆ.

ಘಟನೆ ಬಗ್ಗೆ ದೂರು ದಾಖಲಾದ ಹಿನ್ನೆಲೆ ತನಿಖೆ ಕೈಗೊಂಡ ಪೊಲೀಸರು, ಈ ಕೃತ್ಯದಲ್ಲಿ ಭಾಗಿಯಾಗಿದ್ದ 11 ಮಂದಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳಿಂದ ಆರು ಮೊಬೈಲ್ ಫೋನ್‌ಗಳು, ಚಿನ್ನದ ಒಡವೆಗಳು, ಕಾರು ಮತ್ತು ಹಣವನ್ನು ಜಪ್ತಿಮಾಡಿದ್ದಾರೆ. ಬಂಧಿತ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಸದ್ಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸೀರೆ ವೀಕ್ಷಣೆ



ಗುರುವಾರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಖಾದಿ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಭೇಟಿ ನೀಡಿದ ಅವರು ಖಾದಿ ಸೀರೆಯನ್ನು ವೀಕ್ಷಿಸಿದರು.

ಕಿರುಸುದ್ದಿ

ನೆಫ್ರೋ -ಯುರಾಲಜಿ ಸಂಸ್ಥೆಗೆ ಭೇಟಿ



• **ಬೆಂಗಳೂರು:** ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಭಾರಿ ಸುಧಾರಣೆ ತರಲು ಮುಂದಾಗಿರುವ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ನೆಫ್ರೋ -ಯುರಾಲಜಿ ಸಂಸ್ಥೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗುರುವಾರ ಮಧ್ಯಾಹ್ನ ಆಗಮಿಸಿದ ಮೊಹಮ್ಮದ್ ಮೊಹ್ಸಿನ್, ವೈದ್ಯರ ತಂಡದೊಂದಿಗೆ ಸಮಾಲೋಚನೆ ನಡೆಸಿದರು. ಈ ವೇಳೆ ಮಾತನಾಡಿದ ಮೊಹ್ಸಿನ್, ಎಲ್ಲರಿಗೂ ಆರೋಗ್ಯ ಭಾಗ್ಯ ಒದಗಿಸಲು ನಾವು ಬದ್ಧರಾಗಿದ್ದೇವೆ. ಈ ನಿಟ್ಟಿನಲ್ಲಿ ಸರ್ಕಾರ ಮಹತ್ವ ಸುಧಾರಣಾ ಕ್ರಮಗಳನ್ನು ಜಾರಿಗೆ ತರುತ್ತಿದೆ. ಅದನ್ನು ಸೂಕ್ತವಾಗಿ ಪಾಲಿಸಬೇಕಾದ ಅವಶ್ಯಕತೆ ಇದೆ ಎಂದರು.ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ರಮೇಶ್‌ಗೌಡ ನೇಮಕ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜೆಡಿಎಸ್ ಅಧ್ಯಕ್ಷರನ್ನಾಗಿ ಎಚ್.ಎಂ ರಮೇಶ್‌ಗೌಡ ಅವರನ್ನು ನೇಮಕಮಾಡಲಾಗಿದೆ. ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜೆಡಿಎಸ್ ಅಧ್ಯಕ್ಷರಾಗಿದ್ದ ರಮೇಶ್‌ಗೌಡ ಅವರಿಗೆ ಜಿಬಿಎ ಅಧ್ಯಕ್ಷ ಜವಾಬ್ದಾರಿ ನೀಡಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಆದೇಶ ಹೊರಡಿಸಿದ್ದಾರೆ.



ಬೀದಿ ನಾಯಿಗಳಿಗೆ ಆಹಾರ: 150 ಫೀಡಿಂಗ್ ಸ್ಪಾಟ್

• **ಬೆಂಗಳೂರು:** ಪೂರ್ವ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿನಾಯಿಗಳಿಗೆ ಆಹಾರ ನೀಡಲು 150 ಸ್ಥಳದಲ್ಲಿ ಅಧಿಕೃತ ಫೀಡಿಂಗ್ ಸ್ಪಾಟ್‌ಗಳನ್ನಾಗಿ ಗುರುತಿಸಲಾಗಿದೆ ಎಂದು ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ತಿಳಿಸಿದ್ದಾರೆ.

ಬೀದಿನಾಯಿಗಳಿಗೆ ಆಹಾರ ನೀಡಲು ಕೆ.ಆರ್.ಪುರ ಮತ್ತು ಮಹದೇವಪುರ ವಲಯ ವ್ಯಾಪ್ತಿಯಲ್ಲಿ 150 ಸ್ಥಳವನ್ನು ಅಧಿಕೃತ ಫೀಡಿಂಗ್ ಸ್ಪಾಟ್ ಗಳನ್ನಾಗಿ ಗುರುತಿಸಿದ್ದು, ಗುರುತಿಸಲಾದ ಸ್ಥಳಗಳಲ್ಲಿ ಫೀಡಿಂಗ್ ಪಾಯಿಂಟ್ ಎಂಬ ಸೂಚನಾ ಫಲಕವನ್ನು ಅಳವಡಿಸಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.



ಕೇಂದ್ರ ನಗರ ಪಾಲಿಕೆಯಲ್ಲಿ 90 ಸ್ಥಳ: ಕೇಂದ್ರ ನಗರ ಪಾಲಿಕೆ ವ್ಯಾಪ್ತಿ ಬೀದಿನಾಯಿಗಳಿಗೆ ಆಹಾರ ನೀಡಲು 90 ಸ್ಥಳದಲ್ಲಿ ಅಧಿಕೃತ ಫೀಡಿಂಗ್ ಸ್ಪಾಟ್ ಗಳನ್ನಾಗಿ ಗುರುತಿಸಲಾಗಿದೆ ಎಂದು ಪಾಲಿಕೆಯ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದ್ದಾರೆ. ನಗರ ಪಾಲಿಕೆಯ ಪಶು ಸಂಗೋಪನೆ ವಿಭಾಗ ಬೀದಿನಾಯಿಗಳಿಗೆ ಆಹಾರ ನೀಡಲು 90 ಸ್ಥಳ ಅಧಿಕೃತ ಆಹಾರ ನೀಡುವ ಸ್ಥಳಗಳನ್ನು ಗುರುತಿಸಿದ್ದು, ಗುರುತಿಸಲಾದ ಸ್ಥಳಗಳಲ್ಲಿ ಫೀಡಿಂಗ್ ಪಾಯಿಂಟ್ ಎಂಬ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆಂದು ಅಪರ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದ್ದಾರೆ.

ಐಐಎಸ್‌ಸಿ ಸಹಯೋಗದಲ್ಲಿ ಅಂತರ್ಜಲ ದತ್ತಾಂಶ ವಿಶ್ಲೇಷಣೆ | ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್
65 ವಾರ್ಡ್‌ಗಳಲ್ಲಿ ಮುಂಜಾಗ್ರತಾ ಕ್ರಮ

• **ಬೆಂಗಳೂರು:** ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸಹಯೋಗದಲ್ಲಿ ಎಐ ತಂತ್ರಜ್ಞಾನದ ಮೂಲಕ ಬೆಂಗಳೂರು ನಗರದ ಅಂತರ್ಜಲ ದತ್ತಾಂಶವನ್ನು ವಿಶ್ಲೇಷಿಸಿದೆ. 65 ವಾರ್ಡ್ ಗಳಲ್ಲಿ ಅಗತ್ಯ ಮುಂಜಾಗ್ರತಾ ಕ್ರಮವನ್ನು ಕೈಗೊಂಡಿದ್ದೇವೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆಯನ್ನುನೀಡಿರುವ ಅವರು, ದೇಶದಲ್ಲೇ ಮೊದಲ ಬಾರಿಗೆ ಎಐ ಆಧಾರಿತ ತಂತ್ರಜ್ಞಾನದ ಮೂಲಕ ಬರಬಹುದಾದ ನೀರಿನ ಕೊರತೆಯನ್ನು ಸಮರ್ಪಕವಾಗಿ ನಿಭಾಯಿಸುವ ಯೋಜನೆಯನ್ನು ರೂಪಿಸಲಾಗಿದೆ.

ಐಐಎಸ್‌ಸಿ ನೇತೃತ್ವದ ತಂಡ ಐಒಟಿ ತಂತ್ರಜ್ಞಾನದಿಂದ ಲಭ್ಯವಾಗಿ ರುವಂತಹ ದತ್ತಾಂಶಗಳನ್ನು ಎಐ ಆಧಾರಿತವಾಗಿ ವಿಶ್ಲೇಷಿಸಿದೆ. ಈ ವಿಶ್ಲೇಷಣೆಯ ನಂತರ ಬೆಂಗಳೂರು ನಗರದಲ್ಲಿ 65 ವಾರ್ಡ್‌ಗಳಲ್ಲಿ ನೀರಿನ ಕೊರತೆ ಕಾಣುವ ಸಾಧ್ಯತೆಯನ್ನು ತೋರಿಸಲಾಗಿದೆ. ಇದನ್ನು ಸಮರ್ಥ ವಾಗಿ ನಿಭಾಯಿಸಲು ಬೆಂಗಳೂರು ಜಲಮಂಡಳಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ. ಎಂದು ತಿಳಿಸಿದ್ದಾರೆ.

ಕುಡಿಯುವ ನೀರನ್ನು ಅನ್ಯ ಬಳಕೆಗಳಿಗೆ ಅಂದರೆ ವಾಹನ ಶುದ್ಧೀಕರಣ, ತೋಟಗಾರಿಕೆ ಹಾಗೂ ಮನೆ ಅಂಗಳ ತೊಳೆಯಲು ಬಳಸಿದ್ದಲ್ಲಿ ದಂಡ ವಿಧಿಸಲಾಗುವುದು. ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಕಡ್ಡಾಯವಾಗಿ ಸಂಸ್ಕರಿಸಿದ ನೀರನ್ನೇ ಬಳಸುವಂತೆ ಆದೇಶಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನೀರಿನ ಸಂಪರ್ಕಗಳ ಮಂಜೂರಾತಿ: ಬೇಸಿಗೆಯ ದೃಷ್ಟಿಯಿಂದ 65 ವಾರ್ಡ್‌ಗಳಲ್ಲಿ ನೀರಿನ ಸಂಪರ್ಕ ಪಡೆದಿಲ್ಲದವರನ್ನು ಗುರುತಿಸಿ ಕೂಡಲೇ ಸಂಪರ್ಕ ಒದಗಿಸುವುದು ಹಾಗೂ ಈ ವಾರ್ಡ್‌ಗಳ ವ್ಯಾಪ್ತಿಯಲ್ಲಿರುವ ಅಪಾರ್ಟ್‌ಮೆಂಟ್‌ಗಳಿಗೆ ತ್ವರಿತಗತಿಯಲ್ಲಿ ಸಂಪರ್ಕ ನೀಡಲು ಸೂಚಿಸಲಾಗಿದೆ ಅಂತರ್ಜಲ ಮಟ್ಟವನ್ನು ವೃದ್ಧಿಸುವ ಉದ್ದೇಶದಿಂದ ಈ 65 ವಾರ್ಡ್‌ಗಳ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲು ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.



ಕೊಳಗೇರಿಗೆ ಸಿಂಟೆಕ್ಸ್ ಟ್ಯಾಂಕ್

ನೀರಿನ ಸಮಸ್ಯೆ ಇರುವ ಕೊಳಚೆಗೇರಿ ಪ್ರದೇಶಗಳನ್ನು ಹಾಗೂ ಹೆಚ್ಚು ಜನಸಾಂದ್ರತೆ ಇರುವ ಸ್ಥಳಗಳನ್ನು ಗುರುತಿಸಿ, ಅಲ್ಲಿ ಸಿಂಟೆಕ್ಸ್ ಟ್ಯಾಂಕ್ ಮತ್ತು ತಾತ್ಕಾಲಿಕ ನೀರು ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಅತ್ಯಗತ್ಯವಿರುವ ಕಡೆ ನೀರಿನ ಟ್ಯಾಂಕರ್‌ಗಳನ್ನು ಒದಗಿಸಲು ಸೂಚಿಸಲಾಗಿದೆ. 65 ವಾರ್ಡ್‌ಗಳಲ್ಲಿ ಕೊಳವೆ ಬಾವಿಗಳಿಗೆ ತೊಂದರೆಯಾಗದಂತೆ ಹಾಗೂ ಆರ್.ಓ ಪ್ಲಾಂಟ್‌ಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಣೆಯಾಗುವಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷರು ಮಾಹಿತಿ ನೀಡಿದ್ದಾರೆ.

> **ಬೆಂಗಳೂರು ನಗರದ ಎಲ್ಲಾ ಪ್ರದೇಶಗಳಿಗೂ ಸಮರ್ಪಕ ರೀತಿಯಲ್ಲಿ ನೀರು ವಿತರಣೆಯಾಗಬೇಕು. ನೀರಿನ ಉಳಿತಾಯಕ್ಕಾಗಿ ಏರಿಯೇಟರ್‌ಗಳ ಅಳವಡಿಕೆಗೆ ಹೆಚ್ಚಿನ ಗಮನ ಹರಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ.**
> ■ **ಡಾ.ರಾಮ್ ಪ್ರಸಾತ್ ಮನೋಹರ್, ಜಲಮಂಡಳಿ ಅಧ್ಯಕ್ಷ**

ಅಸಮರ್ಪಕ ನಿರ್ವಹಣೆಯಿಂದ ಜಲಾವೃತ

• **ಬೆಂಗಳೂರು:** ಪೂರ್ವ ನಗರ ಪಾಲಿಕೆಯ ಮಹದೇವಪುರ ವಿಧಾನಸಭಾ ಕ್ಷೇತ್ರದ ಗುಂಜೂರು ಕ್ಲಬ್ ರಸ್ತೆ ಪ್ರದೇಶ ವ್ಯಾಪ್ತಿಯಲ್ಲಿನ ಅಸಮರ್ಪಕ ಮಳೆ ನೀರು ಕಾಲುವೆಯಿಂದಾಗಿ ಭಾರಿ ಮಳೆಯ ಸಂದರ್ಭಗಳಲ್ಲಿ ಪದೇ-ಪದೇ ಜಲಾವೃತವಾಗುತ್ತಿದೆ.

ಮಳೆಗಾಲದಲ್ಲಿ ನೀರು ನಿಲ್ಲುವುದರ ಮೂಲಕ ಪ್ರವಾಹ ಸಮಸ್ಯೆಯುಂಟಾಗಿ ಸಾರ್ವಜನಿಕರ ಮತ್ತು ವಾಹನ ಸಂಚಾರಕ್ಕೆ ಅಡ್ಡಿಯಾಗಿ ಸಂಚಾರ ದಟ್ಟಣೆ ಉಂಟಾಗುತ್ತಿರುತ್ತದೆ. ಈ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವ ಉದ್ದೇಶದಿಂದ ಮಳೆನೀರು ಕಾಲುವೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದು ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ತಿಳಿಸಿದರು.

ಮಳೆಗಾಲ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಒಂದು ತಿಂಗಳೊಳಗಾಗಿ ಮಳೆನೀರು ಕಾಲುವೆ ಕಾಮಗಾರಿಯನ್ನು ಪೂರ್ಣಗೊಳಿಸುವ ಗುರಿ ಹೊಂದಿದ್ದು, ಕಾಮಗಾರಿಯ ಪ್ರಗತಿ ಪರಿಶೀಲನೆ ವೇಳೆ ಆದ್ಯತೆ ಮೇರೆಗೆ ಉತ್ತಮ ಗುಣಮಟ್ಟದೊಂದಿಗೆ ನಿಗದಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಆಯುಕ್ತರು ಸೂಚಿಸಿದರು.

ಈ ಮಳೆನೀರು ಕಾಲುವೆಯ ಕಾಮಗಾರಿ ಸಂಪೂರ್ಣಗೊಂಡ ನಂತರ ಗುಂಜೂರು ಪಾಳ್ಯ ಕೆರೆಗೆ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಲಾಗುತ್ತಿದ್ದು, ಭವಿಷ್ಯದಲ್ಲಿ ಜಲಾವೃತ ಸಮಸ್ಯೆಯನ್ನು ತಡೆಯಲು ಇದು ಸಹಾಯಕವಾಗಲಿದೆ ಎಂದರು.



ಪಾರದರ್ಶಕ ವಿತರಣೆಗೆ ಕ್ರಮ: ಜಿಬಿಎ ಆಯುಕ್ತ
ಇ-ಖಾತೆಗೆ ಸಮಸ್ಯೆ ಆಗದಂತೆ ಕ್ರಮ

• **ಬೆಂಗಳೂರು:** ಇ-ಖಾತಾ ಮಂಜೂರು ಮಾಡುವ ಸಂದರ್ಭದಲ್ಲಿ ಖಾತಾದಾರರಿಗೆ ಯಾವುದೇ ಸಮಸ್ಯೆ ಆಗದಂತೆ ಪರಿಶೀಲನಾ ಪ್ರಕ್ರಿಯೆಯನ್ನು ಸರಳೀಕರಿಸಿ, ಪಾರದರ್ಶಕ ಹಾಗೂ ಸಮಯಬದ್ಧ ವಿತರಣೆಗೆ ಕ್ರಮವಹಿಸುವಂತೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ಸೂಚಿಸಿದರು.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಕಂದಾಯ ಹಾಗೂ ಘನತ್ಯಾಜ್ಯ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ವಿಭಾಗದ ವ್ಯಾಪ್ತಿಯಲ್ಲಿದ್ದರೂ ತೆರಿಗೆ ವ್ಯಾಪ್ತಿಗೆ ಒಳಪಡಿಸದ ಎಲ್ಲಾ ಆಸ್ತಿಗಳನ್ನು ಗುರುತಿಸಿ, ಕಂದಾಯ ವಸೂಲಾತಿಯನ್ನು ಹೆಚ್ಚಿಸಿ. ಬಿ-ಖಾತಾದಿಂದ ಎ ಖಾತೆಗೆ ಪರಿವರ್ತನೆಗೆ ಸಂಬಂಧಿಸಿದ ಬಾಕಿ ಮನವಿಗಳು ಉಳಿಯದಂತೆ ಪ್ರಕ್ರಿಯೆಯನ್ನು ವೇಗಗೊಳಿಸಿ, ಎಲ್ಲಾ ಅರ್ಜಿಗಳನ್ನು ಸಮಯಬದ್ಧವಾಗಿ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ಸಂಬಂಧಿತ ಕಾರ್ಯಗಳನ್ನು ನಿಯಮಾನುಸಾರ ಹಾಗೂ ಸಮಯಬದ್ಧವಾಗಿ ಜಾರಿಗೊಳಿಸಿ, ಸಂಬಂಧಿತ ವಿವರವನ್ನು ಸಮಗ್ರವಾಗಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಿ. ವಿಭಾಗದ ಕಾರ್ಯಚಟುವಟಿಕೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಇತರೆ ಇಲಾಖೆಗಳೊಂದಿಗೆ ನಿಯಮಿತ ಸಮನ್ವಯ ಸಭೆಗಳನ್ನು ನಡೆಸಿ, ಸಂಯೋಜಿತ ಕ್ರಮಗಳನ್ನು ಕೈಗೊಳ್ಳುವಂತೆ ಕಂದಾಯ ಅಧಿಕಾರಿಗಳಿಗೆ ಸೂಚಿಸಿದರು.



ಪೌರ ಕಾರ್ಮಿಕರಿಗೆ ಕಲ್ಯಾಣ ಇಲಾಖೆಯಿಂದ ನೀಡಲಾಗುವ ಸೌಲಭ್ಯಗಳು, ಹೆಲ್ತ್ ಕಾರ್ಡ್ ಹಾಗೂ ಆರೋಗ್ಯ ಸಂಬಂಧಿತ ಸೌಲಭ್ಯಗಳನ್ನು ಅರ್ಹರಿಗೆ ಸಮರ್ಪಕವಾಗಿ ಒದಗಿಸುವಂತೆ ಸೂಚಿಸಿ, ಎಲ್ಲಾ ಫಲಾನುಭವಿಗಳಿಗೆ ಸಮಯಬದ್ಧವಾಗಿ ಸೌಲಭ್ಯಗಳು ತಲುಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮುಂಬರುವ ಮಳೆಯ ಸಂದರ್ಭದಲ್ಲಿ ತ್ಯಾಜ್ಯವು ನೀರು ಹರಿವ ಮಾರ್ಗಗಳನ್ನು ಅಡ್ಡಿಪಡಿಸಿ ಸಮಸ್ಯೆ ಉಂಟು ಮಾಡದಂತೆ ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಳ್ಳಿ. ಮಲ್ಲೇಶ್ವರ ವಿಭಾಗದ ಹತ್ತು ವಾರ್ಡ್‌ಗಳ ಆಯ್ದ ಸ್ಥಳಗಳಲ್ಲಿ ಸೌಂದರ್ಯೀಕರಣ ಕಾಮಗಾರಿಯನ್ನು ಕೈಗೊಳ್ಳುವಂತೆ ಸೂಚಿಸಿದರು.

500 ಅಭ್ಯರ್ಥಿಗಳಿಗೆ ಉಚಿತ ವಸತಿ ಸಹಿತ ತರಬೇತಿ

• **ಬೆಂಗಳೂರು:** ಯುಪಿಎಸ್‌ಸಿ ಪರೀಕ್ಷೆಯಲ್ಲಿ ರಾಜ್ಯದ ಹಿಂದುಳಿದ ಸಮುದಾಯದ ಅಭ್ಯರ್ಥಿಗಳು ಉತ್ತಮ ಸಾಧನೆ ಮಾಡಿದರೆ ಭವಿಷ್ಯದಲ್ಲಿ 500ಕ್ಕಿಂತ ಹೆಚ್ಚು ಅಭ್ಯರ್ಥಿಗಳಿಗೆ ಇಲಾಖೆ ವತಿಯಿಂದ ಉಚಿತ ವಸತಿ ಸಹಿತ ತರಬೇತಿ ಕೊಡಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಭರವಸೆ ನೀಡಿದರು.

ಕೆಂಗೇರಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಿಂದುಳಿದ ಸಮುದಾಯದ ಅಭ್ಯರ್ಥಿಗಳಿಗೆ ನೀಡಲಾಗುವ ಉಚಿತ ವಸತಿ ಸಹಿತ ಐಎಎಸ್ ಮತ್ತು ಕೆಎಎಸ್ ತರಬೇತಿ ಕೇಂದ್ರವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು. ದೆಹಲಿಯಲ್ಲಿ ತರಬೇತಿ ಕೇಂದ್ರ ತೆರೆಯಬೇಕೆಂದು ನಿರ್ಧಾರ ಮಾಡಲಾಗಿತ್ತು. ಆದರೆ, ಸ್ಥಳ ಸಿಗದ ಕಾರಣ, ಬೆಂಗಳೂರಿನಲ್ಲಿ ತರಬೇತಿ ಕೇಂದ್ರ ತೆರೆಯಲಾಗಿದೆ. ಪ್ರಸ್ತುತ 150 ಮಂದಿ ಹಿಂದುಳಿದ ಸಮುದಾಯದ ಅಭ್ಯರ್ಥಿಗಳಿಗೆ ಉಚಿತ ಊಟ, ವಸತಿ ಸಹಿತ ಪರೀಕ್ಷೆಗೆ ಹತ್ತು ತಿಂಗಳು ತರಬೇತಿ ನೀಡಲಾಗುತ್ತಿದೆ. ಸರ್ಕಾರ ನಿಮ್ಮ ಜವಾಬ್ದಾರಿ ತೆಗೆದುಕೊಂಡಿದೆ. ಇಷ್ಟು ಮೊತ್ತದ ಹಣವನ್ನು ಈ ಕಾರ್ಯಕ್ರಮಕ್ಕೆ ವ್ಯಯಿಸಲು ಸರ್ಕಾರಕ್ಕೆ ಕಷ್ಟ ಆಗುವುದಿಲ್ಲ, ನೀವು ಉತ್ತಮ ಫಲಿತಾಂಶ ಪಡೆದು ಭಾರತೀಯ ಸೇವೆಗೆ ಸೇರಿದರೆ ಅದೇ ನಮಗೆ ತೃಪ್ತಿ ಎಂದರು.

ಐಎಎಸ್ ಮತ್ತು ಕೆಎಎಸ್ ತರಬೇತಿ ಕೇಂದ್ರಕ್ಕೆ ಸಚಿವ ತಂಗಡಗಿ ಚಾಲನೆ

ತಪಸ್ಸಿನಿಂದ ಸಾಧನೆ ಸಾಧ್ಯ: ದೇಶದಲ್ಲೇ ಉಚಿತವಾಗಿ ವಸತಿ ಸಹಿತ ಯುಪಿಎಸ್‌ಸಿ ಪರೀಕ್ಷೆಗೆ ಎರಡು ರಾಜ್ಯಗಳಲ್ಲಿ ಸರ್ಕಾರದಿಂದ ತರಬೇತಿ ನೀಡಲಾಗುತ್ತಿದೆ. ಆ ರಾಜ್ಯಗಳ ಪಟ್ಟಿಗೆ ಇದೀಗ ಕರ್ನಾಟಕ ಕೂಡ ಸೇರಿದೆ. ಶ್ರಮ ಹಾಗೂ ತಪಸ್ಸಿನಿಂದ ಯಾವುದೇ ಸಾಧನೆ ಸಾಧ್ಯ. ಇಲ್ಲಿರುವ ಪ್ರತಿಯೊಬ್ಬ ತಪಸ್ಸಿನಿಂದ ಓದಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಏಕಾಗ್ರತೆಯಿಂದ ಓದಿ ಯಶಸ್ಸು ಪಡೆಯಿರಿ ಎಂದು ಸಚಿವರು ಅಭ್ಯರ್ಥಿಗಳಿಗೆ ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಒಕ್ಕಲಿಗ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ, ಆಯುಕ್ತ ಕೆ.ದಯಾನಂದ್, ಅಧಿಕಾರಿಗಳಾದ ಪ್ರದೀಪ್, ಜಗದೀಶ್, ಮಧುಸೂದನ್ ರೆಡ್ಡಿ, ಭವ್ಯ ಉಪಸ್ಥಿತರಿದ್ದರು.

ತಾಯಿ ಎದುರಲ್ಲೇ ರೌಡಿಶೀಟರ್ ಕೊಚ್ಚಿ ಕೊಲೆ

• **ಬೆಂಗಳೂರು:** ಕೆಲ ತಿಂಗಳ ಹಿಂದೆ ಜೈಲಿನಿಂದ ಬಿಡುಗಡೆಯಾದ ರೌಡಿ ಶೀಟರ್‌ನನ್ನು ತಾಯಿಯ ಕಣ್ಣೆದುರೇ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ ಘಟನೆ ಥಣಿಸಂದ್ರದ ಅಮರಜ್ಯೋತಿ ಲೇಔಟ್‌ನಲ್ಲಿ ನಡೆದಿದೆ. 3 ವರ್ಷಗಳ ಹಿಂದಿನ ಕೃತ್ಯಕ್ಕೆ ಪ್ರತೀಕಾರ ವಾಗಿ ಈ ಕೊಲೆ ನಡೆದಿದೆ ಎಂದು ಶಂಕಿಸಲಾಗಿದೆ ಡಿ.ಜೆ.ಹಳ್ಳಿ ಠಾಣಾ ವ್ಯಾಪ್ತಿಯ ರೌಡಿಶೀಟರ್ ಪವನ್ ಕುಮಾರ್ (28) ಕೊಲೆಯಾದವ. ಹೆಲ್ಮೆಟ್ ಧರಿಸಿ ಮೂರು ದ್ವಿಚಕ್ರ ವಾಹನದಲ್ಲಿ ಆರು ಮಂದಿ ದುಷ್ಕರ್ಮಿಗಳು ಪವನ್‌ನ ಮನೆ ಬಳಿ ಬಂದು ಆತನ ತಾಯಿಯ ಕಣ್ಣೆದುರೇ ಕೃತ್ಯ ಎಸಗಿದ್ದಾರೆ.

ಕಳೆದ ಕೆಲ ತಿಂಗಳ ಹಿಂದೆ ಜೈಲಿನಿಂದ ಹೊರ ಬಂದಿದ್ದನು.



ಮೂರು ವರ್ಷಗಳ ಹಿಂದೆ ನಡೆ ದಿದ್ದ ರೌಡಿಶೀಟರ್ ಕಪಿಲ್ ಹತ್ಯೆ ಪ್ರಕರಣದಲ್ಲಿ ಬಂಧಿತನಾಗಿದ್ದ ಪವನ್ 2025ರ ಮೇ ತಿಂಗಳಲ್ಲಿ ಜೈಲಿನಿಂದ ಬಿಡುಗಡೆಯಾಗಿದ್ದರು. ಒಂದೂವರೆ ತಿಂಗಳ ಹಿಂದಷ್ಟೆ ಬೇಕರಿಯನ್ನು ಆರಂಭಿಸಿದ್ದರು. ಆದರೆ, ಕಪಿಲ್‌ನ ಹತ್ಯೆಯಾದ ಮಾದರಿಯಲ್ಲೇ ಹೆಲ್ಮೆಟ್ ಧರಿಸಿದ್ದ ತಂಡ ಪವನ್ ಕುಮಾರ್ ಹತ್ಯೆ ಮಾಡಿದೆ. ಕಪಿಲ್‌ನ ಸಹೋದರ ಸೇರಿದಂತೆ ಹಲವರ ವಿರುದ್ಧ ಈ ಹತ್ಯೆಯ ಆರೋಪ ಕೇಳಿಬಂದಿದೆ.

ಚಿಕ್ಕಪೇಟೆ ಅಗ್ನಿ ಅವಘಡ: ಜಿಬಿಎ ಮುಖ್ಯ ಆಯುಕ್ತರ ಸೂಚನೆ
ಘಟನೆ ಕುರಿತು ಸಮಗ್ರ ವರದಿಗೆ ಸಮಿತಿ

• **ಬೆಂಗಳೂರು:** ನಗರದ ಚಿಕ್ಕಪೇಟೆ ವ್ಯಾಪ್ತಿಯ ವಾಣಿಜ್ಯ ಪ್ರದೇಶದಲ್ಲಿ ಅವಘಡಗಳು ಸಂಭವಿಸದಂತೆ ಹಾಗೂ ಅವುಗಳನ್ನು ನಿಯಂತ್ರಿಸುವ ಕುರಿತು ಸಮಗ್ರ ವರದಿ ಸಿದ್ಧಪಡಿಸಲು ಸಮಿತಿ ರಚಿಸುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚಿಸಿದರು.

ಕೇಂದ್ರ ನಗರ ಪಾಲಿಕೆ ಚಿಕ್ಕಪೇಟೆ ವ್ಯಾಪ್ತಿಯ ಕುಂಬಾರಪೇಟೆಯಲ್ಲಿ ಸಂಭವಿಸಿದ ಅಗ್ನಿ ಅವಘಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಚಿಕ್ಕಪೇಟೆ ವ್ಯಾಪ್ತಿಯ ನಗರ್ತಪೇಟೆಯಲ್ಲಿ ಕಳೆದ ವರ್ಷವೂ ಅಗ್ನಿ ಅವಘಡ ಸಂಭವಿಸಿತ್ತು. ಇದೀಗ ಮತ್ತೆ ಕುಂಬಾರಪೇಟೆಯಲ್ಲಿ ಅಗ್ನಿ ಅವಘಡ ಸಂಭವಿಸಿರುವ ಹಿನ್ನೆಲೆ, ಅವಘಡಕ್ಕೆ ಕಾರಣಗಳೇನು ಹಾಗೂ ಇಂತಹ ಘಟನೆಗಳನ್ನು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು ಎಂಬುದರ ಕುರಿತು ಸಮಗ್ರ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಜಿಬಿಎ ಮತ್ತು ಕೇಂದ್ರ ನಗರ ಪಾಲಿಕೆ, ಅಗ್ನಿಶಾಮಕ ಹಾಗೂ ವಿದ್ಯುತ್ ಇಲಾಖೆಗಳನ್ನು ಒಳಗೊಂಡ ಸಮಿತಿ ರಚಿಸಲು ಸೂಚನೆ ನೀಡಿದರು.



ಹೈಡ್ರೆಂಟ್ ವ್ಯವಸ್ಥೆ ಕಲ್ಪಿಸಿ: ಅಗ್ನಿ ಅವಘಡಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಉದ್ದೇಶದಿಂದ ಪ್ರಮುಖ ಸ್ಥಳಗಳಲ್ಲಿ ಹೈಡ್ರೆಂಟ್ ವ್ಯವಸ್ಥೆ ಕಲ್ಪಿಸಲು ಕ್ರಮವಹಿಸಬೇಕು. ಜೊತೆಗೆ ಹೈಡ್ರೆಂಟ್ ವ್ಯವಸ್ಥೆಯ ಮೇಲ್ವಿಚಾರಣೆಗೆ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲು ಸೂಚನೆ ನೀಡಿದರು.

ಪ್ರಮುಖ ಸೂಚನೆಗಳು

- ಚಿಕ್ಕಪೇಟೆ ವ್ಯಾಪ್ತಿಯ ಎಲ್ಲಾ ವಾಣಿಜ್ಯ ಕಟ್ಟಡಗಳಲ್ಲಿಯೂ ಫೈರ್ ಸೇಫ್ಟಿ ಹಾಗೂ ಫೈರ್ ಎಕ್ಸ್‌ಟಿಂಗ್ವಿಶರ್ ವ್ಯವಸ್ಥೆ ಕಡ್ಡಾಯವಾಗಿರಬೇಕು. ಅಳವಡಿಸದ ಕಟ್ಟಡಗಳನ್ನು ಮುಲಾಜಿಲ್ಲದೆ ಸೀಲ್ ಮಾಡಿ
- ಅನಧಿಕೃತ ಕಟ್ಟಡಗಳಿಗೆ ತಕ್ಷಣವೇ ವಿದ್ಯುತ್ ಸಂಪರ್ಕ ಕಡಿತಗೊಳಿಸಿ
- ನಕ್ಷೆ ಉಲ್ಲಂಘಿಸಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸದಿದ್ದರೆ ಕಟ್ಟಡ ಮಾಲೀಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ
- ಅಸುರಕ್ಷಿತ ಕಟ್ಟಡವನ್ನು ಪರಿಶೀಲಿಸಿ, ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ತಕ್ಷಣ ನೋಟಿಸ್ ಜಾರಿ ಮಾಡಿ

ವಿದ್ಯುತ್ ವಿತರಣಾ ಜಾಲದ ಮೇಲೆ ಸೈಬರ್ ದಾಳಿ
ಗ್ರಾಹಕರ ದತ್ತಾಂಶ ಸುರಕ್ಷಿತವಾಗಿರಿಸಲಿ

• **ಬೆಂಗಳೂರು:** ರಾಜ್ಯದ ವಿದ್ಯುತ್ ವಿತರಣಾ ಜಾಲದ ಮೇಲೆ ಹೆಚ್ಚುತ್ತಿರುವ ಸೈಬರ್ ದಾಳಿಗಳನ್ನು ತಡೆಯಲು ಮತ್ತು ಗ್ರಾಹಕರ ದತ್ತಾಂಶವನ್ನು ಸುರಕ್ಷಿತವಾಗಿರಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಮಹತ್ವದ ಹೆಜ್ಜೆ ಇಟ್ಟಿದೆ.

ಸುಮಾರು 30 ಕೋಟಿ ರೂ. ವೆಚ್ಚದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಅತ್ಯಾಧುನಿಕ ಸೈಬರ್ ಸೆಕ್ಯೂರಿಟಿ ಆಪರೇಷನ್ ಸೆಂಟರ್ ಸ್ಥಾಪಿಸಲು ಬೆಸ್ಕಾಂ ಮುಂದಾಗಿದೆ. ನಗರದ ಕೆ.ಆರ್.ವೃತ್ತದ ಸಮೀಪವಿರುವ ಬೆಸ್ಕಾಂ ಕೇಂದ್ರ ಕಚೇರಿಯಲ್ಲಿ ಈ ಹೈಟೆಕ್ ಕೇಂದ್ರ ತಲೆ ಎತ್ತಲಿದ್ದು, ರಾಜ್ಯದ ಇತಿಹಾಸದಲ್ಲೇ ಇಂತಹದೊಂದು ಪ್ರಥಮ ಪ್ರಯತ್ನ ಇದಾಗಿದೆ.



ವಿದ್ಯುತ್ ಜಾಲಕ್ಕೆ ಭದ್ರತೆ ಏಕೆ?: ಬೆಸ್ಕಾಂ ಇತ್ತೀಚಿನ ದಿನಗಳಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆ ಮತ್ತು ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ವ್ಯಾಪಕಗೊಳಿಸುತ್ತಿದೆ. ಈ ಸಂದರ್ಭದಲ್ಲಿ ಹ್ಯಾಕರ್‌ಗಳು ವಿದ್ಯುತ್ ಜಾಲಕ್ಕೆ ಕನ್ನ ಹಾಕಿ ಸರಬರಾಜಿನಲ್ಲಿ ವ್ಯತ್ಯಯ ಉಂಟು ಮಾಡುವ ಅಥವಾ ದತ್ತಾಂಶ ಕದಿಯುವ ಸಾಧ್ಯತೆ ಇರುತ್ತದೆ. ಈ ಹೊಸ ಕೇಂದ್ರವು ಐಟಿ ಮತ್ತು ಆಪರೇಷನಲ್ ಟೆಕ್ನಾಲಜಿ ಎರಡನ್ನೂ ರಕ್ಷಿಸಲಿದೆ.ಈ ಕೇಂದ್ರವು ಕೇವಲ ಸಾಮಾನ್ಯ ವೈರಸ್‌ಗಳನ್ನಷ್ಟೇ ಅಲ್ಲದೆ, ಗಂಭೀರ ಸ್ವರೂಪದ ಸೈಬರ್ ಬೆದರಿಕೆಗಳ ಮೇಲೆ ನಿಗಾ ಇಡಲಿದೆ.

ಅನಧಿಕೃತ ಸಿಸ್ಟಮ್ ಪ್ರವೇಶ ಮತ್ತು ಪಾಸ್‌ವರ್ಡ್ ಹ್ಯಾಕಿಂಗ್. ಮಾಲ್ವೇರ್ ಮತ್ತು ಡಿನಾಯಲ್ ಆಫ್ ಸರ್ವಿಸ್ ದಾಳಿಗಳು. ವೆಬ್‌ಸೈಟ್ ಮತ್ತು ಮೊಬೈಲ್ ಆಪ್‌ಗಳ ಮೇಲಿನ ಸೈಬರ್ ದಾಳಿಗಳನ್ನು ತಡೆಯಲಿದೆ. ಈ ಎಐ ಆಧಾರಿತ ಕೇಂದ್ರವು ಯಾವುದೇ ದಾಳಿಯನ್ನು ಕ್ಷಣಾರ್ಧದಲ್ಲಿ ಗುರುತಿಸಿ, ವಿದ್ಯುತ್ ಸರಬರಾಜಿಗೆ ತೊಂದರೆಯಾಗದಂತೆ ತಡೆಯಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಯೋಜನೆಯ ವೆಚ್ಚದ ವಿವರ

- ಒಟ್ಟು 30 ಕೋಟಿ ರೂ. ಯೋಜನಾ ವೆಚ್ಚ
- ಆರಂಭಿಕ ಸೆಟಪ್ ಮತ್ತು ಸಾಫ್ಟ್‌ವೇರ್ ಪರವಾನಗಿಗಾಗಿ 3.6 ಕೋಟಿ ರೂ.
- ನಿರ್ವಹಣೆ ಮತ್ತು ತಾಂತ್ರಿಕ ಚಂದಾದಾರಿಕೆಗಳಿಗಾಗಿ 16.1 ಕೋಟಿ ರೂ.
- ಸಿಬ್ಬಂದಿ ವೆಚ್ಚಕ್ಕೆ 9.9 ಕೋಟಿ ರೂ.

ಇಂದು ನಗರದಲ್ಲಿ...

- ವ್ಯವಹಾರದಲ್ಲಿ ಸುಸ್ಥಿರ ನಾವೀನ್ಯತೆ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ, ಸ್ಥಳ: ಜೈನ್ ಯುನಿವರ್ಸಿಟಿ, ಲಾಲ್‌ಬಾಗ್ ರಸ್ತೆ, ಬೆಳಗ್ಗೆ 9ಕ್ಕೆ
- ಜಾನಪದ ಅಕಾಡೆಮಿಯಿಂದ ಪ್ರಶಸ್ತಿ ಪ್ರದಾನ, ಸ್ಥಳ: ರವೀಂದ್ರ ಕಲಾ ಕ್ಷೇತ್ರ, ಬೆಳಗ್ಗೆ 11
- ಕಾರ್ಮಿಕ ಇಲಾಖೆಯಿಂದ ವಿಶಿಷ್ಟಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನ ವಿತರಣೆ ಕಾರ್ಯಕ್ರಮ, ಸ್ಥಳ: ಗಾಯಿತ್ರಿ ವಿಹಾರ್, ಅರಮನೆ ಮೈದಾನ ಬೆಳಗ್ಗೆ 11ಕ್ಕೆ
- ಶಂಕರಾಚಾರ್ಯ ವಿಧುಶೇಖರ ಭಾರತಿ ಸನ್ನಿಧಾನಂ ಅವರ ದಿವ್ಯ ಆಶೀರ್ವಾದ, ಸ್ಥಳ: ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಬಸವನಗುಡಿ ಸಂಜೆ 6ಕ್ಕೆ

ಜಿಂಬಾಬ್ವೆ ವಿರುದ್ಧ ಭರ್ಜರಿ ಗೆಲುವು | ಸೆಮಿ ಆಸೆ ಜೀವಂತ | ಮಿಂಚಿದ ಬ್ಯಾಟಿಂಗ್ ಪಡೆ | ಭಾರತಕ್ಕೆ ಹಾದಿ ಮಾಡಿಕೊಟ್ಟ ಹರಿಣರು

ವಿಂಡೀಸ್ ಪಂದ್ಯ ಗೆದ್ದರೆ ಸೆಮಿಫೈನಲ್‌ಗೆ ಭಾರತ

• **ಚೆನ್ನೈ:** ತನ್ನ ಅಸಲು ಲಯಕ್ಕೆ ಮರಳಿದ ಭಾರತ ತಂಡವು ಗೆಲ್ಲಲೇಬೇಕಾದ ಪಂದ್ಯದಲ್ಲಿ ಜಿಂಬಾಬ್ವೆ ಮೇಲೆ 72 ರನ್‌ಗಳ ಜಯದೊಂದಿಗೆ ಸವಾರಿ ನಡೆಸಿತು. ತಾನ್ಯಾಕೆ ನಂಬರ್ 1 ತಂಡವೆಂದೂ, ಒಂದು ಪಂದ್ಯದ ಸೋಲಿನಿಂದ ಹೆಚ್ಚಿನ ಪರಿಣಾಮ ಬೀಳದು ಎಂದು ಸಾಬೀತು ಮಾಡಿ ಸೆಮಿ ರೇಸ್‌ನಲ್ಲಿ ಉಳಿಯಿತು.

ದ.ಆಫ್ರಿಕಾ ಪಡೆ ವಿಂಡೀಸ್ ಪಡೆಯನ್ನು ಸೋಲಿಸಿ ಭಾರತ ಹಾದಿ ಸುಗಮಗೊಳಿಸಿತು. ಮಿಕ್ಕಿರುವ ಕೆಲಸವನ್ನು ಮಾಡುವಲ್ಲಿ ಭಾರತ ನಿಸ್ಸಂಶಯವಾಗಿ ಯಶಸ್ವಿಯಾಯಿತು. ಲೀಲಾಜಾಲವಾದ ಬ್ಯಾಟಿಂಗ್, ಕರಾರುವಾಕ್ ಬೌಲಿಂಗ್ ಮಾಡಿದ ಭಾರತ ಗೆಲ್ಲಲೇಬೇಕಾದ ಒತ್ತಡದಲ್ಲಿದೆ ಎಂದು ಅನ್ನಿಸಲೇ ಇಲ್ಲ. ಗುರುವಾರದ ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದು ಮೊದಲ ಇನ್ನಿಂಗ್ಸ್‌ನಲ್ಲಿ ದಾಖಲೆಯ 256 ರನ್ ಬಾರಿಸಿತು. 4 ವಿಕೆಟ್ ಮಾತ್ರ ಕಳೆದುಕೊಂಡಿತು. ಗುರಿ ಕಾಯ್ದುಕೊಳ್ಳುವಾಗ ಅಚ್ಚುಕಟ್ಟಾದ ಬೌಲಿಂಗ್‌ನೊಂದಿಗೆ 184 ರನ್‌ಗಳಿಗೆ ತಡೆಯೊಡ್ಡಿ ಜಿಂಬಾಬ್ವೆ ತಂಡವನ್ನು ಸೆಮಿ ರೇಸ್‌ನಿಂದ ಹೊರನೂಕಿತು.

ಬ್ಯಾಟಿಂಗ್‌ಗಿಳಿದ ಭಾರತದ ಆರೂ ಬ್ಯಾಟರು ಭೇಷ್ ಎನಿಸಿಕೊಂಡರು. ಲಯಕ್ಕೆ ಮರಳಿದ ಅಭಿಷೇಕ್ 55 ರನ್ ಗಳಿಸಿ ಉತ್ತಮ ಬ್ಯಾಟರ್ ಎನಿಸಿಕೊಂಡರು. ಪಾಂಡ್ಯ ಅಜೇಯ ಅರ್ಧಶತಕ ಬಾರಿಸಿದರು. ತಿಲಕ್ ವರ್ಮಾ ಬ್ಯಾಟಿಂಗ್ ವಿಶೇಷವಾಗಿತ್ತು. ಅಕ್ಷರ್ ಮತ್ತು ವರುಣ್ ಉತ್ತಮ ಬೌಲರ್ಸ್ ಎನಿಸಿದರು. ಈ ಗೆಲುವಿನೊಂದಿಗೆ ರನ್‌ರೇಟ್ ಕೂಡ ಹೆಚ್ಚು ಮಾಡಿಕೊಂಡಿರುವ ಭಾರತ ಸೆಮಿ ರೇಸ್‌ನಲ್ಲಿ ಭದ್ರವಾಗಿದ್ದು, ವಿಂಡೀಸ್ ವಿರುದ್ಧದ ಪಂದ್ಯ ನಿರ್ಣಾಯಕವಾಗಲಿದೆ.

ಅಬ್ಬರದ ಆರಂಭ: ಉತ್ತಮ ಬ್ಯಾಟಿಂಗ್ ಮಾಡುತ್ತಿಲ್ಲವೆಂಬ ಟೀಕೆಗಳಿಗೆ ಅಭಿಷೇಕ್ ಶರ್ಮ ತೆರೆ ಎಳೆದರು. 30 ಬಾಲ್ ಮಾತ್ರದಲ್ಲಿ 55 ರನ್ ಚಚ್ಚಿದರು. ರಿಂಕು ಬದಲಿಗೆ ಬ್ಯಾಟಿಂಗ್‌ಗಿಳಿದ ಸಂಜು(24) ಅಬ್ಬರದ ಆರಂಭ ನೀಡಿ ಬುನಾದಿ ಹಾಕಿಕೊಟ್ಟರು. ಇಶಾನ್(38) ಮೂರನೇ ಕ್ರಮಾಂಕದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. ಇಷ್ಟು ದಿನ ಪರದಾಡಿದ ಮಧ್ಯಮ ಕ್ರಮಾಂಕದ ಬ್ಯಾಟಿಗರು ಸ್ಫೋಟಕ ಬ್ಯಾಟಿಂಗ್ ಮಾಡಿದರು. ಸೂರ್ಯ 33 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಬೆನೆಟ್ ಪರಾಕ್ರಮ

ಗುರಿ ಬೆನ್ನತ್ತುವಾಗ ಜಿಂಬಾಬ್ವೆ ಭಾರೀ ಹಿನ್ನಡೆ ಅನುಭವಿಸಿತು. ಮೊದಲಿನಿಂದಲೂ ವಿಕೆಟ್ ಕಳೆದುಕೊಳ್ಳದಿದ್ದರೂ ಭಾರತ ಬೌಲರ್‌ಗಳು ಅವರನ್ನು ಕಟ್ಟಿಹಾಕಿದರು. 44 ರನ್ ಗಳಿಸಿದಾಗ ಜಿಂಬಾಬ್ವೆಯ ಮೊದಲ ವಿಕೆಟ್ ಪತನಗೊಂಡಿತು. ಆದಾದ ಬಳಿಕ ಹಿನ್ನಡೆ ಅನುಭವಿಸಿದ ಜಿಂಬಾಬ್ವೆ ರನ್ ಗಳಿಸಲು ಹೆಚ್ಚಿನ ಪ್ರಯತ್ನ ಪಟ್ಟಿತು. ಆದಾಗ್ಯೂ ಬೇಗನೇ ವಿಕೆಟ್ ಕಳೆದುಕೊಳ್ಳಲೇ ಇಲ್ಲ. ಗೆಲ್ಲಲು ಬೇಕಾದ ದೊಡ್ಡ ಸ್ಕೋರ್ ಬಾರಿಸಲಾಗದಿದ್ದರೂ 20 ಓವರ್ ಸಂಪೂರ್ಣ ಬ್ಯಾಟಿಂಗ್ ಮಾಡಿ 154 ರನ್ ಗಳಿಸಿತು. ತಂಡದ ಪರ ಬೆನೆಟ್ ಭರ್ಜರಿ ಬ್ಯಾಟಿಂಗ್ ಮಾಡಿದರು. ಮೊದಲಿನಿಂದಲೂ ಭಾರತ ತಂಡವನ್ನು ದಂಡಿಸಿದ ಅವರು ವಿಕೆಟ್ ಬೀಳುತ್ತಿದ್ದರೂ ಹೋರಾಟ ನಿಲ್ಲಿಸಲಿಲ್ಲ. ಒಟ್ಟು 97 ರನ್‌ಗಳಿಸಿ ಅಜೇಯರಾಗಿ ಉಳಿದರು.



ಪಾಂಡ್ಯ-ತಿಲಕ್ ಜುಗಲ್‌ಬಂದಿ

ಮಧ್ಯಮ ಕ್ರಮಾಂಕದಲ್ಲಿ ಪಾಂಡ್ಯ ಮತ್ತು ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಭಾರತ ಸ್ಕೋರ್ ಹಿಗ್ಗಿಸಿದರು. ಬಾನೆತ್ತರದ ಸಿಕ್ಸರ್‌ಗಳಿಂದಲೇ ಆರಂಭಿಸಿದ ತಿಲಕ್ ವರ್ಮಾ ಈ ಬಾರಿ ಬರೋಬ್ಬರಿ 275ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದರು. 23 ಬಾಲ್ ಮಾತ್ರ ಎದುರಿಸಿದ ಪಾಂಡ್ಯ ತಮ್ಮ ನೈಜ ಆಟದೊಂದಿಗೆ 4 ಸಿಕ್ಸರ್ ಮತ್ತು 2 ಬೌಂಡರಿಗಳೊಂದಿಗೆ 50 ರನ್ ಚಚ್ಚಿದರು. ತಿಲಕ್ ವರ್ಮಾ ಕೇವಲ 16 ಬಾಲ್‌ಗಳಲ್ಲಿ 3 ಬೌಂಡರಿ 4 ಸಿಕ್ಸರ್‌ಗಳೊಂದಿಗೆ ಔಟಾಗದೆ 44 ರನ್ ಬಾರಿಸಿದರು.

158 ಭಾರತೀಯರ ಕನಿಷ್ಠ ಸ್ಟ್ರೈಕ್‌ರೇಟ್!

ಭಾರತ ತಂಡದ ಯಾವುದೇ ಬ್ಯಾಟರ್‌ಗಳೂ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬೀಳಲೇ ಇಲ್ಲ. ಬಂದವರೆಲ್ಲಾ ಮೊದಲ ಬಾಲ್‌ನಿಂದಲೇ ಬೌಂಡರಿಗಟ್ಟುವ ಸ್ಪಷ್ಟ ನಿರ್ಧಾರ ಮಾಡಿಬಿಟ್ಟಿದ್ದರು. ಯಾರೊಬ್ಬರೂ ತಮ್ಮ ಸ್ಕೋರುಗಳ ಕಡೆ ಗಮನವೇ ಹರಿಸಲಿಲ್ಲ. ಸಿಂಗಲ್ ಪಡೆಯಲೋ ಅಥವಾ ಡಾಟ್ ಮಾಡಲು ಹೋಗಿ ಔಟಾಗಲೇ ಇಲ್ಲ. ಔಟಾಗದೆ ಉಳಿದವರೂ ಕೂಡ ಸಿಂಗಲ್ ಪಡೆಯಲು ಯತ್ನಿಸಲೇ ಇಲ್ಲ. ಗೌರವಿಸಬೇಕಾದ ಎಸೆತಗಳನ್ನು ಗೌರವಿಸಿದ್ದು ಬಿಟ್ಟರೆ ಇನ್ನುಳಿದ ಬಾಲ್‌ಗಳನ್ನೆಲ್ಲಾ ಬೌಂಡರಿಗಟ್ಟಿದರು. ಹೀಗಾಗಿ ಭಾರತ ತಂಡದ ಆಟಗಾರರ ಕನಿಷ್ಠ ಸ್ಟ್ರೈಕ್ ರೇಟ್ 158 ಆಗಿತ್ತು. ಇಶಾನ್ ಕಿಶನ್ 158, ಅಭಿಷೇಕ್ ಶರ್ಮ 160, ಸೂರ್ಯ 253, ಪಾಂಡ್ಯ 217 ಮತ್ತು ತಿಲಕ್ 275 ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದರು.

ಸ್ಕೋರ್‌ಬೋರ್ಡ್

ಭಾರತ 20 ಓವರ್‌ಗಳಲ್ಲಿ 256/4

ಸಂಜು	ಸಿ ಬುರ್ಲ್ ಬಿ ಮುಝರ್ಬಾನಿ	24
ಅಭಿಷೇಕ್	ಸಿ ರಜಾ ಬಿ ಮಾಪೋಸಾ	55
ಕಿಶನ್	ಸಿ ಗರಾವ ಬಿ ರಜಾ	38
ಸೂರ್ಯ	ಸಿ ಮುಸೆಕಿವಾ ಬಿ ಗರಾವ	33
ಪಾಂಡ್ಯ	ನಾಟೌಟ್	50
ತಿಲಕ್	ನಾಟೌಟ್	44
ಇತರೆ		12

ಬೌಲಿಂಗ್ ವಿವರ

ರಿಚರ್ಡ್	4-0-62-1
ಬ್ಲೆಸ್ಸಿಂಗ್	4-0-43-1
ಮಾಪೋಸಾ	2-0-40-1
ಈವಾನ್ಸ್	4-0-52-0
ರಜಾ	3-0-29-1
ಬೆನೆಟ್	2-0-16-0
ಬರ್ಲ್	1-0-10-0

ಜಿಂಬಾಬ್ವೆ 20 ಓವರ್‌ಗಳಲ್ಲಿ 184/6

ಬೆನೆಟ್	ನಾಟೌಟ್	97
ಮರುಮಾನಿ	ಸಿ ಕಿಶನ್ ಬಿ ಅಕ್ಷರ್	20
ಮೇಯೆರ್ಸ್	ಸಿ ವರ್ಮಾ ಬಿ ಚಕ್ರವರ್ತಿ	6
ರಜಾ	ಸಿ ಅಭಿಷೇಕ್ ಬಿ ಅರ್ಷದೀಪ್	31
ಬರ್ಲ್	ಎಲ್‌ಬಿ ಬಿ ಅರ್ಷದೀಪ್	0
ಟೋನಿ	ಬಿ ಅರ್ಷದೀಪ್	11
ಮುಸೆಕಿವಾ	ಸಿ ಸ್ಯಾಮ್ಸನ್ ಬಿ ದುಬೆ	7
ಈವಾನ್ಸ್	ನಾಟೌಟ್	1
ಇತರೆ		11

ಬೌಲಿಂಗ್ ವಿವರ

ಅರ್ಷದೀಪ್	4-0-24-3
ಹಾರ್ದಿಕ್	3-0-21-0
ಬೂಮ್ರಾ	3-0-21-0
ವರುಣ್	4-0-35-1
ದುಬೆ	2-0-46-1

ಇತಿಹಾಸ ಬರೆದ ಭಾರತ

ಈ ಗೆಲುವಿನ ಮೂಲಕ ಭಾರತ ಐತಿಹಾಸಿಕ ದಾಖಲೆಯೊಂದನ್ನು ಮಾಡಿತು. ವಿಶ್ವಕಪ್‌ನಲ್ಲಿ ಭಾರತ 300 ರನ್ ಬಾರಿಸುತ್ತದೆ ಎಂಬ ಮಾತುಗಳು ಎಲ್ಲೆಡೆ ಹರಿದಾಡುತ್ತಿದ್ದವು. ಆದರೆ ಭಾರತ ಮಾತ್ರ 150 ರನ್ ಬಾರಿಸುವುದಕ್ಕೂ ಪರದಾಡುತ್ತಿತ್ತು. ಅಂತಹ ಸ್ಥಿತಿಯಲ್ಲಿ ಜಿಂಬಾಬ್ವೆ ವಿರುದ್ಧ ಸ್ಫೋಟಕ ಬ್ಯಾಟಿಂಗ್ ಮಾಡಿ ಬರೋಬ್ಬರಿ 256 ಚಚ್ಚಿದೆ. ಇದು ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಗಳಿಸಿದ ಅತಿ ಹೆಚ್ಚು ರನ್ ಆಗಿದೆ. ಇದಲ್ಲದೆ, ವಿಶ್ವಕಪ್‌ನಲ್ಲಿ ತಂಡವೊಂದು ಬಾರಿಸಿದ ಎರಡನೇ ಅತಿ ಹೆಚ್ಚು ರನ್ ಆಗಿದೆ. 2009ರಲ್ಲಿ ಶ್ರೀಲಂಕಾ 260 ರನ್ ಬಾರಿಸಿತ್ತು. ಅದು ವಿಶ್ವಕಪ್‌ನ ಅತಿ ಹೆಚ್ಚು ರನ್ ಆಗಿದೆ.

ದಕ್ಷಿಣ ಆಫ್ರಿಕಾ ಸೆಮಿಗೆ

• **ಅಹಮದಾಬಾದ್:** ಕಳೆದ ಪಂದ್ಯದಲ್ಲಷ್ಟೇ ಭಾರತ ತಂಡವನ್ನು ಸೋಲಿಸಿ ಕೋಟ್ಯಂತರ ಅಭಿಮಾನಿಗಳ ಪಾಲಿಗೆ ವಿಲನ್ ಆಗಿದ್ದ ದ.ಆಫ್ರಿಕಾ ತಂಡವು ಗುರುವಾರ ವೆಸ್ಟ್ ಇಂಡೀಸ್ ವಿರುದ್ಧ ಗೆದ್ದು ಭಾರತ ಅಭಿಮಾನಿಗಳ ಪಾಲಿಗೆ ಆಸರೆಯಾದ ನೆರಳಾಯಿತು. ಜತೆಗೆ ತನ್ನ ಸೆಮಿಫೈನಲ್ ಪ್ರವೇಶ ಖಚಿತ ಪಡಿಸಿಕೊಂಡಿದೆ.

ಭಾರತ ಸೆಮಿಫೈನಲ್‌ಗೇರಬೇಕಾದರೆ ದ.ಆಫ್ರಿಕಾ ವಿಂಡೀಸ್ ತಂಡದ ವಿರುದ್ಧ ಗೆಲ್ಲಲೇಬೇಕಿತ್ತು. ಈ ಪಂದ್ಯದಲ್ಲೂ ಕೂಡ ಕಳೆದ ಪಂದ್ಯದ ಲಯವನ್ನೇ ಪ್ರದರ್ಶಿಸಿದ ಹರಿಣರು ವಿಶ್ವಕಪ್‌ನ ಬಲಿಷ್ಠ ತಂಡ, ಸೋಲದಿರುವ ಅಜೇಯ ಪಡೆ ಎನಿಸಿಕೊಂಡಿದೆ. ಗುರುವಾರದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಬುಲಾವ್ ನೀಡಿದ ಮಾರ್ಕ್ರಂ ಪಡೆ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ವಿಂಡೀಸ್ ತಂಡದ ಹೆಡೆಮುರಿ ಕಟ್ಟಿತು. ಆದಾಗ್ಯೂ ರೋಮಾರಿಯೋ ಶೆಫರ್ಡ್ ಹಾಗೂ ಜೇಸನ್ ಹೋಲ್ಡರ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಉತ್ತಮ ಪ್ರದರ್ಶನ ನೀಡಿದ ವಿಂಡೀಸ್ ತನ್ನ ಪಾಲಿನ ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 176 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಪೇರಿಸಿತು. ಪ್ರತಿಯಾಗಿ ದ.ಆಫ್ರಿಕಾ ಮೊದಲಿನ ಮೂರು ಬ್ಯಾಟರ್‌ಗಳ ಹೊಡೆತದಾಟದೊಂದಿಗೆ 16.1 ಓವರ್‌ಗಳಲ್ಲಿ 1 ವಿಕೆಟ್ ಮಾತ್ರ ಕಳೆದುಕೊಂಡು 177 ರನ್ ಬಾರಿಸಿ ಗೆದ್ದಿತು. ಪಂದ್ಯದ ವಿರಳತೆ ವಿಂಡೀಸ್, ಆಫ್ರಿಕಾಗಿಂತ ಭಾರತದ ಅಭಿಮಾನಿಗಳನ್ನೇ ಆತಂಕಕ್ಕೀಡು ಮಾಡಿತು. ಏಡನ್ ಮಾರ್ಕ್ರಂ ಅಜೇಯ 82 ರನ್ ಬಾರಿಸಿ ಪಂದ್ಯದ ಹೀರೋ ಎನಿಸಿದರು. ಡಿಕಾಕ್ ಮತ್ತು ರ್ಯಾನ್ ರಿಕೆಲ್ಟನ್ ಕೂಡ ಭರ್ಜರಿ ಬ್ಯಾಟಿಂಗ್ ಮಾಡಿದರು. ಎದುರಾಳಿ ವಿಂಡೀಸ್ ಕಡೆಯವರೂ ಕೂಡ ಉತ್ತಮ ಬ್ಯಾಟರ್ ಎನಿಸುವಂತೆ ಆಡಿದರು. ಲುಂಗಿ ಎನ್‌ಗಿಡಿ ಪಂದ್ಯದ ಉತ್ತಮ ಬೌಲರ್ ಎನಿಸಿಕೊಂಡರು. ಈ ಗೆಲುವಿನೊಂದಿಗೆ ದ.ಆಫ್ರಿಕಾ ಬಹುತೇಕ ಸೆಮಿಫೈನಲ್ ಖಚಿತಪಡಿಸಿಕೊಂಡಿದೆ. ವಿಂಡೀಸ್ ಭಾರತದೊಂದಿಗೆ ಗೆಲ್ಲಲೇಬೇಕಾದ ಅನಿವಾರ್ಯತೆಗೆ ಸಿಲುಕೊಂಡಿದೆ.



ಶೆಫರ್ಡ್-ಹೋಲ್ಡರ್ ಆಸರೆ

ಮೊದಲ ಇನ್ನಿಂಗ್ಸ್‌ನಲ್ಲಿ ಮೂರು ತಿರುವುಗಳಾದವು. ಮೊದಲ ಓವರ್‌ನಲ್ಲಿ ವಿಂಡೀಸ್ 17 ರನ್ ಬಾರಿಸಿ ಮಿಂಚಿತ್ತು. ದೊಡ್ಡ ಸ್ಕೋರ್‌ನತ್ತ ಸಾಗುತ್ತಿತ್ತು. ಆದರೆ ಬಳಿಕ ಚುರುಕುಗೊಂಡ ಆಫ್ರಿಕಾ, ಸರಸರನೇ ವಿಕೆಟ್‌ಗಳನ್ನು ಪಡೆಯಿತು. ಅಲ್ಲಿ 83 ರನ್ ಆನ್ನುವಷ್ಟರಲ್ಲಿ 7 ವಿಕೆಟ್ ಕಳೆದುಕೊಂಡಿತ್ತು. ಈ ಬಳಿಕ ಮತ್ತೊಂದು ತಿರುವು ಸಿಕ್ಕಿತು. ರೋಮಾರಿಯೊ ಶೆಫರ್ಡ್ ಮತ್ತು ಹೋಲ್ಡರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ತಮ್ಮ ತಂಡದ ಕುಸಿತ ಉಳಿಸಿದ ಈ ಜೋಡಿ 20 ಓವರ್ ತನಕ ಬ್ಯಾಟಿಂಗ್ ಮಾಡಿ 175ರ ಗಡಿ ದಾಟುವಂತೆ ಮಾಡಿತು. ಶೆಫರ್ಡ್ 52, ಹೋಲ್ಡರ್ 49 ರನ್‌ಗಳಿಸಿದರು.

ಸಂಕ್ಷಿಪ್ತ ಸ್ಕೋರ್

ವಿಂಡೀಸ್ 20 ಓವರ್‌ಗಳಲ್ಲಿ 176/8: ಶೆಫರ್ಡ್ 52★, ಹೋಲ್ಡರ್ 49; ಎನ್‌ಗಿಡಿ 30/3
ಆಫ್ರಿಕಾ 16.1 ಓವರ್‌ಗಳಲ್ಲಿ 177/1: ಮಾರ್ಕ್ರಂ 82★, ಡಿಕಾಕ್ 47, ರಿಕಲ್ಟನ್ 48★; ಚೇಸ್ 46/1

ಮಾರ್ಕ್ರಂ ಆರ್ಭಟ

ಗುರಿ ಬೆನ್ನತ್ತುವಾಗ ವಿಂಡೀಸ್‌ಗೆ ಯಾವುದೇ ಖುಷಿ ಪಡುವ ಘಳಿಗೆ ಕೂಡಿ ಬರಲಿಲ್ಲ. ಅಕ್ಷರಶಃ ಅತ್ಯುತ್ತಮ ಬ್ಯಾಟಿಂಗ್ ಮಾಡಿದ ನಾಯಕ ಮಾರ್ಕ್ರಂ ಮನಬಂದಂತೆ ದಂಡಿಸಿದರು. ಉತ್ತಮ ಎಸೆತಕ್ಕೆ ಗೌರವ ನೀಡುತ್ತಾ, ವೀಕ್ ಎಸೆತಗಳನ್ನು ಥಳಿಸುತ್ತಾ ಲೀಲಾಜಾಲವಾಗಿ ಅರ್ಧಶತಕ ಬಾರಿಸಿದರು ಮಾರ್ಕ್ರಂ. ಅವರಿಗೆ ಸಾಥ್ ನೀಡುವಲ್ಲಿ ಡಿಕಾಕ್ ಕೂಡ ಅಷ್ಟೇ ಸಫಲರಾದರು. 24 ಬಾಲ್‌ಗಳಲ್ಲಿ 47 ರನ್‌ಗಳಿಸಿ ಡಿಕಾಕ್ ಔಟಾದಂತೆ ಮೂರನೇ ಕ್ರಮಾಂಕದಲ್ಲಿ ರಿಕಲ್ಟನ್ ಬಂದರು. ಅವರು ಡಿಕಾಕ್ ಆಟವನ್ನೇ ಮುಂದುವರಿಸಿದರು. ಓವರ್‌ಗಳಿಗೆ ಕನಿಷ್ಠ ಹತ್ತರಂತೆ ಬಾರಿಸಿದ ದ.ಆಫ್ರಿಕಾ 16.1 ಓವರ್‌ಗಳಲ್ಲೇ ಗುರಿ ಮುಟ್ಟಿತು. ಮಾರ್ಕ್ರಂ 46 ಬಾಲ್‌ಗಳಲ್ಲಿ ಅಜೇಯ 82 ರನ್ ಬಾರಿಸಿದರು. ರಿಕಲ್ಟನ್ 28 ಬಾಲ್‌ಗಳಲ್ಲಿ ಅಜೇಯ 48 ರನ್ ಗಳಿಸಿದರು.

ಇಂದಿನ ಪಂದ್ಯ

ಇಂಗ್ಲೆಂಡ್ VS ನ್ಯೂಜಿಲೆಂಡ್
ಸಂಜೆ 7 (ಕೊಲಂಬೋ)

ಸೂಪರ್-8 ಅಂಕಪಟ್ಟಿ

ಗುಂಪು 1

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ದ.ಆಫ್ರಿಕಾ (Q)	2	2	0	0	4	+2.890
ವಿಂಡೀಸ್	2	1	1	0	2	+1.791
ಭಾರತ	2	1	1	0	2	-0.100
ಜಿಂಬಾಬ್ವೆ	2	0	2	0	0	-4.475

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್ (Q)	2	2	0	0	4	+1.491
ಕಿವೀಸ್	2	1	0	1	3	+3.050
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	2	0	2	0	0	-2.800

ಕಿರುಸುದ್ದಿ

ಟಿಟಿ: ದಾಖಲೆ ಮಾಡಿದ ಭಾರತ ಜೋಡಿ

• **ಹೊಸದಿಲ್ಲಿ:** ಭಾರತದ ಅಗ್ರ ಟೇಬಲ್ ಟೆನಿಸ್ ಜೋಡಿಯಾದ ಮನುಶ್ ಶಾ ಮತ್ತು ಮಾನವ್ ಟಕ್ಕರ್ ಇತಿಹಾಸ ಸೃಷ್ಟಿಸಿದರು. ಲೀಗ್ ಹಂತದಿಂದ ಹಿಡಿದು ಕ್ವಾರ್ಟರ್ ಪಂದ್ಯಗಳಲ್ಲೂ ಉತ್ತಮ ಪ್ರದರ್ಶನ ನೀಡಿ ಭಾರತದ ಪದಕ ಆಸೆ ಜೀವಂತವಾಗಿರಿಸಿದ್ದ ಅವರು ಕ್ವಾರ್ಟರ್‌ಫೈನಲ್ ಪಂದ್ಯದಲ್ಲೂ ತಮ್ಮ ಕರಾರುವಾಕ್ ಪ್ರದರ್ಶನದೊಂದಿಗೆ ಗೆಲುವು ಸಾಧಿಸಿದರು. ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯ ಅವರಿಗೆ ಕೇವಲ ಗೆಲುವಾಗದೆ, ಇತಿಹಾಸ ಸೃಷ್ಟಿಸುವ ಸಾಧನೆಯಾಗಿತ್ತು. ಅರನೇ ಸೀಡ್‌ನ ಮನುಶ್ ಮತ್ತು ಮಾನವ್ ಮಾರ್ಟಿನ್ ಅಲ್ಲೆಗ್ರೊ ಹಾಗೂ ಅಡ್ರೀನ್ ರಾಸ್ಸೆನ್‌ಫೊಸ್ಸೆ ಅವರನ್ನು ಎದುರಿಸಿದ್ದರು. ಈ ಪಂದ್ಯದಲ್ಲಿ ಮೊದಲಿನಿಂದಲೂ ಸಮಯೋಚಿತ ಪ್ರದರ್ಶನ ನೀಡಿದ ಅವರು, 3-0(11-8, 11-9, 11-9)ರಿಂದ ಭರ್ಜರಿ ಗೆಲುವು ಸಾಧಿಸಿ ಮಿಂಚಿದರು. ಇದರೊಂದಿಗೆ ಎದುರಾಳಿಗಳೊಂದಿಗಿದ್ದ ಮುಖಾಮುಖಿಯನ್ನು 2-0ಕ್ಕೆ ಹಿಗ್ಗಿಸಿದರು.

ವಿಶ್ವದಾಖಲೆ: ಪ್ರತಿ ಪಂದ್ಯದಲ್ಲೂ ತಮ್ಮ ಪರಾಕ್ರಮದೊಂದಿಗೆ ದಾಖಲೆಗಳನ್ನು ಮಾಡುತ್ತಾ ಬಂದ ಈ ಜೋಡಿ, ಡಬ್ಲ್ಯುಟಿಟಿ ಗ್ರ್ಯಾಂಡ್ ಸ್ಮ್ಯಾಷ್ ಇವೆಂಟ್‌ನ ಸೆಮಿಫೈನಲ್ ಲಗ್ಗೆ ಹಾಕಿದ ಮೊದಲ ಭಾರತೀಯ ಜೋಡಿ ಎನಿಸಿದೆ.

ಬೆಂಗಳೂರಿಗಿಂದು ಪಂಜಾಬ್ ಸವಾಲು


• **ಬೆಂಗಳೂರು:** ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಬೆಂಗಳೂರು ಎಫ್‌ಸಿ ಮತ್ತು ಪಂಜಾಬ್ ಎಫ್‌ಸಿ ತಂಡಗಳ ನಡುವೆ ಹೈ-ವೋಲ್ಟೇಜ್ ಪಂದ್ಯ ನಡೆಯಲಿದೆ. ಪಂಜಾಬ್ ಎಫ್‌ಸಿ ತಂಡವು ಸತತ ಎರಡನೇ ಪಂದ್ಯಕ್ಕಾಗಿ ಬೆಂಗಳೂರಿಗೆ ಆಗಮಿಸಿದ್ದು, ಜಮ್‌ಶೆಡ್‌ಪುರ ಎಫ್‌ಸಿ ವಿರುದ್ಧದ 1-0 ಸೋಲಿನ ಬಳಿಕ ಚೇತರಿಸಿಕೊಳ್ಳುವ ಗುರಿ ಹೊಂದಿದೆ. ಮತ್ತೊಂದೆಡೆ, ಬೆಂಗಳೂರು ಎಫ್‌ಸಿ ಈ ಸೀಸನ್‌ನ ತನ್ನ ಮೂರನೇ ಪಂದ್ಯಕ್ಕೆ ಸಜ್ಜಾಗಿದೆ. ನಾರ್ತ್-ಈಸ್ಟ್ ಯುನೈಟೆಡ್ ವಿರುದ್ಧದ ಪಂದ್ಯ 1-1 ಸಮಬಲದಲ್ಲಿ ಅಂತ್ಯಗೊಂಡ ನಂತರ, ಸುನಿಲ್ ಚೆಟ್ರಿ ಸಾರಥ್ಯದ ತಂಡವು ಗೆಲುವಿನ ಹಾದಿಗೆ ಮರಳಲು ಎದುರು ನೋಡುತ್ತಿದೆ.

ಎರಡೂ ತಂಡಗಳು ಪೂರ್ಣ 3 ಅಂಕಗಳಿಗಾಗಿ ಹೋರಾಡಲಿರುವುದರಿಂದ ಮೈದಾನದಲ್ಲಿ ತೀವ್ರ ಪೈಪೋಟಿ ನಿರೀಕ್ಷಿಸಲಾಗಿದೆ. ಎರಡೂ ಕ್ಲಬ್‌ಗಳು ಹೊಸ ಆಟಗಾರರನ್ನು ಸೇರಿಸಿಕೊಂಡಿರುವುದು ಪಂದ್ಯದ ಕುತೂಹಲವನ್ನು ಹೆಚ್ಚಿಸಿದೆ. ಬೆಂಗಳೂರು ಎಫ್‌ಸಿ ತಂಡ ಮಧ್ಯಮೈದಾನದಲ್ಲಿ ಬ್ರಾಯನ್ ಸಾಂಚೆಝ್ ಅವರ ದೃಷ್ಟಿ ಮತ್ತು ಆಟದ ಸೃಜನಶೀಲತೆ ತಂಡಕ್ಕೆ ಬಲ ತುಂಬಿದೆ. ವಿಂಗರ್ ಆಶಿಕ್ ಕುರುಣಿಯಾನ್ ಅವರ ವೇಗವು ಎದುರಾಳಿ ರಕ್ಷಣಾ ಪಡೆಯನ್ನು ಮಣಿಸಲು ಪ್ರಮುಖ ಅಸ್ತ್ರವಾಗಿದೆ. ಹಾಗೆಯೇ ಸಿರೋಜಿದ್ದಿನ್ ಕುಜ್ಜಿಯೇವ್ ಅವರ ತಾಂತ್ರಿಕ ಕೌಶಲ್ಯವು ತಂಡಕ್ಕೆ ಹೊಸ ಚೈತನ್ಯ ನೀಡಲಿದೆ. ಪಂಜಾಬ್ ಎಫ್‌ಸಿ ತಂಡವು ಮಿಡ್‌ಫೀಲ್ಡ್‌ನಲ್ಲಿ ಡ್ಯಾನಿ ರಾಮಿರೆಜ್ ಆಟದ ವೇಗವನ್ನು ನಿಯಂತ್ರಿಸಿದರೆ, ಮುಂಚೂಣಿಯಲ್ಲಿ ದೈಹಿಕವಾಗಿ ಬಲಿಷ್ಠವಾಗಿರುವ ಎಫಿಯಾಂಗ್ ನುಂಗುಸಿ ಗೋಲು ಗಳಿಸುವ ಜವಾಬ್ದಾರಿ ಹೊತ್ತಿದ್ದಾರೆ.

ಬ್ಯಾಡ್ಮಿಂಟನ್: ಭಾರತ ನೀರಸ ಆರಂಭ

• **ಹೊಸದಿಲ್ಲಿ:** ಸೂಪರ್ ಬ್ಯಾಡ್ಮಿಂಟನ್ ಪಂದ್ಯಾವಳಿಗಳಲ್ಲಿ ತಮ್ಮದೇ ವಿಶಿಷ್ಟ ಆಟಗಳ ಮೂಲಕ ವಿಶ್ವದ ಗಮನ ಸೆಳೆದಿರುವ ಭಾರತೀಯ ಶಟ್ಲರ್‌ಗಳು ತಮ್ಮ ಲಯವನ್ನು ಮುಂದುವರಿಸಲು ವಿಫಲರಾಗಿದ್ದಾರೆ. ಗುರುವಾರ ಶುರುವಾಗಿರುವ ಜರ್ಮನ್ ಓಪನ್ ಸೂಪರ್-300 ಬ್ಯಾಡ್ಮಿಂಟನ್ ಪಂದ್ಯಾವಳಿಯ ಮೊದಲ ದಿನವೇ ಭಾರತೀಯರಿಗೆ ಹಿನ್ನಡೆಯಾಗಿದೆ.

ನಾಕೌಟ್ ಮಾದರಿಯ ಕೂಟದ 32ರ ಸುತ್ತಿನ ಪಂದ್ಯದಲ್ಲಿ ಕಿರಣ್ ಜಾರ್ಜ್ ಅವರು ಟಾಪ್ ಸೀಡ್‌ನ ಕ್ರಿಸ್ಟೋ ಪೊಪೊವ್ ಅವರೊಂದಿಗೆ ಸೋತರು.



47 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ, ಮೊದಲಿನಿಂದಲೂ ಬಿಗಿ ಹಿಡಿತ ಸಾಧಿಸಿದ ಅವರು, ಕಿರಣ್‌ಗೆ ಅವಕಾಶವೇ ನೀಡಲಿಲ್ಲ. ಆರಂಭಿಕ ಸೆಟ್‌ನಲ್ಲಿ 10 ಅಂಕವಷ್ಟೇ ಗಳಿಸಿ ನಿರಾಸೆ ಮೂಡಿಸಿದ್ದ ಕಿರಣ್ ಮುನ್ನಡೆ ಬಿಟ್ಟುಕೊಟ್ಟರು. ಮುಂದಿನ ಸೆಟ್‌ನಲ್ಲಿ ತಮ್ಮ ಪ್ರದರ್ಶನದ ದಿಕ್ಕು ಬದಲಾಯಿಸಿದರು. ಆದಾಗ್ಯೂ 20-22ರಿಂದ ಎದುರಾಳಿ ಪಂದ್ಯವನ್ನು ಗೆದ್ದು ಕಿರಣ್ ಅವರನ್ನು ಹೊರನೂಕಿದರು.

ಮತ್ತೋರ್ವ ಭಾರತೀಯ ತರುಣ್ ಮನ್ನೆಪಲ್ಲಿ ಚೀನಾದ ವಾಂಗ್ ಅವರೊಂದಿಗೆ ರೋಚಕ ಪಂದ್ಯದಲ್ಲಿ ಸೋತರು. ಅಲ್ಲಿ ಮೊದಲನೇ ಸೆಟ್‌ನಲ್ಲಿ ಗೆದ್ದು ಗೆಲುವಿನ ಹಳಿ ಆರಂಭಿಸುವ ಭರವಸೆಯಲ್ಲಿದ್ದ ಅವರಿಗೆ ನಂತರ ಭಾರೀ ಹಿನ್ನಡೆಯಾಯಿತು ಇನ್ನು ಮಹಿಳೆಯರ ವಿಭಾಗದಲ್ಲಿ ಮಾಳ್ವಿಕಾ ಬನ್ಸೋಡ್ ಅಮೆರಿಕದ ಬೇವಾನ್ ಝಾಂಗ್ ಅವರೊಂದಿಗೆ ಸೋತರು. ಮೊದಲಿಗೆ ಮುನ್ನಡೆ ಸಾಧಿಸಿದ ಮಾಳ್ವಿಕಾ ನಂತರದಲ್ಲಿ ಹಿನ್ನಡೆ ಅನುಭವಿಸಿದರು. ಇನ್ನು ಶ್ರೀಯಾನ್ ಮಿರ್ ಕೂಡ ವಾಂಗ್ ಝಿ ಅವರೊಂದಿಗೆ ಸೋತರು. ಆ ಪಂದ್ಯದಲ್ಲಿ ಯಾವುದೇ ಹೆಚ್ಚಿನ ಹೊಡೆದಾಟ ಕಾಣಸಲಿಲ್ಲ. ಮೊದಲ ಸೆಟ್‌ನಲ್ಲಿ 21-9ರಿಂದ ಗೆದ್ದ ಎದುರಾಳಿ ಎರಡನೇ ಸೆಟ್‌ನಲ್ಲಿ 21-14ರಿಂದ ಗೆದ್ದರು.

ಮೊದಲ ಸುತ್ತಿನಲ್ಲೇ ಸೋತ ಭರವಸೆಯ ಶಟ್ಲರ್ಸ್

ರಣಜಿ ಫೈನಲ್: ಸಂಕಷ್ಟದಲ್ಲಿ ಕರ್ನಾಟಕ | ಮಯಾಂಕ್ ಅಗರ್‌ವಾಲ್ ಆಸರೆ

ಪ್ರಶಸ್ತಿಯ ಸನಿಹಕ್ಕೆ ಜಮ್ಮು-ಕಾಶ್ಮೀರ

▸ **ವಿಜಯಕುಮಾರ ಬೆಳ್ಳೇರಿಮಠ**

• **ಹುಬ್ಬಳ್ಳಿ:** ಪ್ರವಾಸಿ ಜಮ್ಮು ಮತ್ತು ಕಾಶ್ಮೀರ ತಂಡದ ಬ್ಯಾಟರ್‌ಗಳು ಸತತ ಎರಡು ದಿನ ರಾಜ್ಯ ತಂಡದ ಬೌಲರ್‌ಗಳ ಬೆವರಿಳಿಸಿದರೆ, ಮೂರನೇ ದಿನ ಬೌಲರ್‌ಗಳು ಕಾಟ ಕೊಟ್ಟರು. ಇದರಿಂದಾಗಿ ಇಲ್ಲಿ ನಡೆದಿರುವ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ಸಂಕಷ್ಟಕ್ಕೆ ಸಿಲುಕಿದೆ. 9ನೇ ಬಾರಿ ಪ್ರಶಸ್ತಿಗೆ ಮುತ್ತಿಕ್ಕುವ ಕನಸು ಕಮರುವಂತಾಗಿದೆ. ಪಂದ್ಯದ 3ನೇ ದಿನದ ಆಟದ ಅಂತ್ಯಕ್ಕೆ ಕರ್ನಾಟಕ ತಂಡ 220ಕ್ಕೆ ಮಹತ್ವದ 5 ವಿಕೆಟ್‌ಗಳನ್ನು ಕಳೆದುಕೊಂಡು ಪರದಾಡುತ್ತಿದೆ.

ಮಯಾಂಕ್ ಆಸರೆ: ಮಾಜಿ ನಾಯಕ ಮಯಾಂಕ್ ಅಗರ್‌ವಾಲ್ ಮಾತ್ರ, (207 ಎಸೆತಗಳಲ್ಲಿ ಅಜೇಯ 130) ಶತಕ ಗಳಿಸುವ ಮೂಲಕ ಕ್ರೀಸ್ ಕಾಯ್ದುಕೊಂಡು ಆಸರೆಯಾಗಿದ್ದಾರೆ. ವಿಕೆಟ್ ಕೀಪರ್ ಕೃತಿಕ್ ಕೃಷ್ಣ ಅವರಿಗೆ ಜೊತೆಯಾಗಿದ್ದಾರೆ (75 ಎಸೆತಗಳಲ್ಲಿ 27 ರನ್). ಆದರೆ, ಆತಿಥೇಯ ತಂಡ ಪ್ರಶಸ್ತಿ ಗಳಿಸಬೇಕೆಂದರೆ ಈ ಇಬ್ಬರೂ ಬ್ಯಾಟರ್‌ಗಳ ಜೊತೆಯಾಟ ಬೆಟ್ಟದಂಥ ಗುರಿಯನ್ನು ತಲುಪುವವರೆಗೂ ಮುಂದುವರಿಯಬೇಕಿರುವುದು ಅನಿವಾರ್ಯ. ಮೂರನೇ ದಿನದಾಟದ ಅತ್ಯಂತಕ್ಕೆ ಆತಿಥೇಯ ಕರ್ನಾಟಕ 69 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 220 ರನ್ ಗಳಿಸಿದೆ. ಮೊದಲ ಇನಿಂಗ್ಸ್ ಲೀಡ್ ಪಡೆಯಲು ಇನ್ನೂ 364 ರನ್ ಗಳಿಸಬೇಕಿದ್ದು, ದೊಡ್ಡ ಸವಾಲನ್ನು ಮೀರುವುದು ಕಷ್ಟ ಸಾಧ್ಯವೆನ್ನಿಸಿದೆ. ಆದಾಗ್ಯೂ, ಆಸರೆಯಾಗಿರುವ ಮಯಾಂಕ್ ಹೋರಾಟ ಜಾರಿಯಿಟ್ಟಿದ್ದಾರೆ.



ಚಿತ್ರ: ಮಂಜುನಾಥ ಜರತಾರಘರ

ಆರಂಭಿಕ ಆಘಾತ

ಜಮ್ಮು ಕಾಶ್ಮೀರ ತಂಡ ನೀಡಿದ ಬೃಹತ್ ಗುರಿ ಬೆನ್ನಟ್ಟಿದ ಕರ್ನಾಟಕ ಆರಂಭಿಕ ಆಘಾತ ಅನುಭವಿಸಿತು. ನಬಿ ಎಸೆದ 11ನೇ ಓವರ್‌ನಲ್ಲಿ ಭರವಸೆಯ ಆಟಗಾರ ಕೆ.ಎಲ್.ರಾಹುಲ್ (13 ರನ್, 39 ಎಸೆತ, 2 ಬೌಂಡರಿ) ವಿಕೆಟ್ ಕೀಪರ್ ಕನ್ಹಯ್ಯ ವಾಧ್ವಾನ್‌ಗೆ ಕ್ಯಾಚಿತ್ತು ನೀಡಿ ಬೇಸರದಿಂದ ಪೆವಿಲಿಯನ್‌ಗೆ ತೆರಳಿದರು. ಇನ್ನೊಂದು ಬದಿ ಬಾಲಿಂಗ್ ಮಾಡುತ್ತಿದ್ದ ಸುನೀಲ್ ಕುಮಾರ 11 ರನ್‌ಗಳಿದ್ದ ನಾಯಕ ದೇವದತ್ತ ಪಡಿಕಲ್ ಅವರ ವಿಕೆಟ್ ಉರುಳಿಸಿದರು. ಮೊದಲ ಸ್ಲಿಪ್‌ನಲ್ಲಿದ್ದ ಅಬ್ದುಲ್ ಸಮದ್ ಕೆಳ ಮಟ್ಟದಲ್ಲಿ ಬಂದ ಕ್ಯಾಚ್ ಪಡೆದು ಸಂಭ್ರಮಿಸಿದರು. ನಬಿ ಎಸೆದ 18ನೇ ಓವರ್‌ನಲ್ಲಿ ಕರುಣ್ ನಾಯರ್ ಹಾಗೂ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಆರ್. ಸ್ಮರಣ್ ಸಹ ಸೊನ್ನೆ ಸುತ್ತಿದರು.

ಸಂಕ್ಷಿಪ್ತ ಸ್ಕೋರ್

ಜಮ್ಮು ಕಾಶ್ಮೀರ 584/10(173.1 ಓ)
ಲೋತ್ರಾ; 72, ಅಬೀದ್ ಮುಷ್ತಾಕ 28, ಆಕಿಬ್ ನಬಿ 2, ಯುಧ್ವೀರ 30, ಸುನೀಲಕುಮಾರ 1
ಕರ್ನಾಟಕ ಬೌಲಿಂಗ್:
ಪ್ರಸಿದ್ಧ 5 ವಿಕೆಟ್, 34.1 ಓವರ್, 98 ರನ್,
ಕರ್ನಾಟಕ 220-5(69)
ಕೆ.ಎಲ್.ರಾಹುಲ್; 13, ಮಯಂಕ್: ಔಟಾಗದೆ 130 ರನ್, 207 ಎ, 17 ಬೌ, ಶ್ರೇಯಸ್; 27 ರನ್, 83 ಎ, 1 ಬೌ, ಕೃತಿಕ್ : ಬ್ಯಾಟಿಂಗ್ 27 ರನ್, 75 ಎ, 2 ಬೌ.
ಜಮ್ಮು ಕಾಶ್ಮೀರ ಬೌಲಿಂಗ್
ಆಕಿಬ್ ನಬಿ: 3 ವಿಕೆಟ್, 14 ಓವರ್, 32 ರನ್

ಮೂರನೇ ದಿನ ಆಗಿದ್ದೇನು?

ಮೂರನೇ ದಿನದಾಟದ ಮೊದಲ ಅವಧಿಯಲ್ಲಿ ರಾಜ್ಯದ ಬೌಲರ್‌ಗಳು ಮಿಕ್ಕ ನಾಲ್ಕು ವಿಕೆಟ್ ಗಳಿಸಿದರಾದರೂ ಅಷ್ಟರೊಳಗೆ ಕಾಶ್ಮೀರ ತಂಡ 584 ರನ್ ಗಳಿಸಿಯಾಗಿತ್ತು. ಬ್ಯಾಟಿಂಗ್‌ಗೆ ಅನುಕೂಲಕರ ವಾತಾವರಣ ಕಲ್ಪಿಸಿರುವ ಪಿಚ್‌ನಲ್ಲಿ ಕರ್ನಾಟಕದ ಆಟಗಾರರೂ ತಕ್ಕ ಉತ್ತರ ನೀಡಬಹುದು ಎಂಬ ನಿರೀಕ್ಷೆಯನ್ನು ವೇಗದ ಬೌಲರ್ ಆಕಿಬ್ ನಬಿ ದಾರ್ (14 ಓವರ್‌ಗಳಲ್ಲಿ 32ಕ್ಕೆ 3 ವಿಕೆಟ್) ಹುಸಿಯಾಗಿಸಿದರು. ಸುನೀಲ್ ಕುಮಾರ್ ಹಾಗೂ ಯುಧವೀರ್ ಸಿಂಗ್ ಸಹ ತಲಾ ಒಂದು ವಿಕೆಟ್ ಗಳಿಸುವ ಮೂಲಕ ಆಕಿಬ್ ನಬಿ ಅವರಿಗೆ ಸಾಥ್ ನೀಡಿದರು. ಇವರಿಬ್ಬರ ದಾಳಿಗೆ ಕರ್ನಾಟಕ ಬ್ಯಾಟಿಗರು ಹಿನ್ನಡೆ ಅನುಭವಿಸಿದರು. ಪಡಿಕ್ಕಲ್, ಕರುಣ್ ಮತ್ತು ಸ್ಮರಣ್ ಕೈಕೊಟ್ಟರು.

ಚೆಸ್: ಗುಕೇಶ್ ಪಂದ್ಯ ಡ್ರಾ

• **ಹೊಸದಿಲ್ಲಿ:** ಪ್ರೋಗ್ರಾಗರ್ ಚೆಸ್ ಫೆಸ್ಟಿವಲ್ ಮಾಸ್ಟರ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅಮೆರಿಕದ ಹನ್ಸ್ ನೀಮನ್ ವಿರುದ್ಧ ಕಠಿಣ ಹೋರಾಟದ ಬಳಿಕ ಡ್ರಾಗೆ ತೃಪ್ತಿಪಟ್ಟರು. ಪಂದ್ಯ ರೋಚಕವಾಗಿತ್ತು. ಕಪ್ಪು ಕಾಯಿಗಳೊಂದಿಗೆ ಆಡಿದ ಗುಕೇಶ್ ಮೊದಲಿನಿಂದಲೂ ಚಾಣಾಕ್ಷ್ಯ ಆಟವಾಡಿ ದರು. ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಮಧ್ಯಮದಲ್ಲಿ ಅಲ್ಪ ಮುನ್ನಡೆ ಸಾಧಿಸಿದರೂ ಕೊನೆಯಲ್ಲಿ ಪಂದ್ಯ ಡ್ರಾಗೆ ತಲುಪಿತು. ಹಾಲಿ ಚಾಂಪಿಯನ್




ಅರ್ವಿಂದ್ ಚಿತಂಬರಂ ಉಜ್ಬೇಕಿಸ್ತಾನದ ನೋಡಿರ್‌ಬೇಕ್ ಅವರೊಂದಿಗೆ ವಿರುದ್ಧ ಸೋಲನುಭವಿಸಿದರು. ಫಿಲಿಡರ್ ಡಿಫೆನ್ಸ್ ಆಡಿದ ಅರವಿಂದ್, ಕೊನೆಯಲ್ಲಿ ಚಾಣಾಕ್ಷ್ಯತೆ ಮೆರೆದರೂ ಗೆಲ್ಲಲು ಸಾಧ್ಯವಾಗಲಿಲ್ಲ, ಕನಿಷ್ಠ ಪಕ್ಷ ಡ್ರಾ ಮಾಡಿಕೊಳ್ಳಲೂ ಆಗಲಿಲ್ಲ, ಜರ್ಮನಿಯ ಟಾಪ್ ಸೀಡ್ ಕೀಮರ್ ನೆದರ್‌ಲ್ಯಾಂಡ್ಸ್ ಆಟಗಾರ ಜಾರ್ಡನ್ ವಿರುದ್ಧ ಸೋಲು ಕಂಡರು. ಬರ್ಲಿನ್ ಡಿಫೆನ್ಸ್‌ನ ಹೊಸ ಆಲೋಚನೆಯಿಂದ ಕೀಮರ್ ಗೊಂದಲಕ್ಕೀಡಾದರು. ಉಜ್ಬೇಕಿಸ್ತಾನದ ಯಾಕುಬೊವ್ ಸ್ಪೇನ್‌ನ ಈಚಾಜಿಫ಼ ಅಲ್ಲಿಟ್ಟಿ ಎಜ್ಜೆಬ್ಜಿಟಿ ವಿರುದ್ಧ ಜಯಿಸಿದರು. ಸ್ಥಳೀಯ ಆಟಗಾರ ಡೆವಿಡ್ ನವಾರಾ ಇರಾನ್‌ನ ಪರ್ಹಾಮ್ ವಿರುದ್ಧ ಮೇಲುಗೈ ಸಾಧಿಸಿದರು.

ಚಾಲೆಂಜರ್ಸ್ ವಿಭಾಗದಲ್ಲಿ: ಚಾಲೆಂಜರ್ಸ್ ವಿಭಾಗದಲ್ಲಿ ಮಹಿಳಾ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಹಂಗೇರಿಯ ಟಾಪ್ ಸೀಡ್ ಬೆಂಜಾಮಿನ್ ಗ್ಲೇಡುರಾ ವಿರುದ್ಧ ಉತ್ತಮ ಗೆಲ್ಲುವ ಹಂತಕ್ಕೆ ಹೋದರೂ ಡ್ರಾಗೆ ತೃಪ್ತಿಪಟ್ಟರು. ಇನ್ನೊಂದೆಡೆ ಭಾರತದ ಸೂರ್ಯ ಶೇಖರ್ ನೆದರ್‌ಲ್ಯಾಂಡ್ಸ್‌ನ ಥಾಮಸ್ ವಿರುದ್ಧ ಸೋಲು ಕಂಡರು.

ಪದಬಂಧ

▸ **ರಾಜಾ ಸಂಗಮೇಶ ಹಿರೇಮಠ**



5908

ಎಡದಿಂದ ಬಲಕ್ಕೆ
1.ಒದಗಿ ಬಂದ ಸುಸಂದರ್ಭ (3)
3.ಸಾಯುವವರೆಗೂ ಎಂಬರ್ಥದ ಶಬ್ದ (5)
5.ಸಂತೋಷದ ಸಮಾನಪದ (3)
7.ಕಾಷ್ಟ, ಸರಳಭಾಷೆಯಲ್ಲಿ (3)
8.ವರ್ಗಕೋಣೆಯಲ್ಲಿ ಇರುವಿಕೆ (3)
9. ಅರದ ನಡುವೆ ಕಳವಳಗೊಂಡವನಿದ್ದಾನೆ (3)
10. ಬೇಡಿದ್ದನ್ನು ಕೊಡುವ ಆಕಳು (3)
11. ಹಾಡುಗಾರನಲ್ಲಿ ತಿರುಗಿದ್ದಾನೆ (3)
12. ಗಂಗೆಯೊಂದಿಗೆ ಇರುವ ಜೋಡುನದಿ (3)
13. ಸೂರ್ಯನ ಮಗನಾಗಿ ಕರ್ಣ (3)
15. ತಲೆದೋರಿದ ಮಡ್ಡಿನ ಬರ (5)
16. ಕಟುವಿನ ನಡುವೆ ಕೊಳೆಯಿದೆ (3)

ಮೇಲಿನಿಂದ ಕೆಳಕ್ಕೆ
2.ಕಾಲುವೆಗೆ ಬಿದ್ದ ಹರಿಯುವ ಹಂಚು (3)
3.ಪದವಿ-ಉನ್ನತಸ್ಥಾನ ಹೊಂದಿದವ (4)
4.ಹುಣ್ಣಿಮೆ-ಅಮಾವಾಸ್ಯೆಯ ನಂತರದ ಮೂರನೆಯ ದಿನ (3)
6.ವಿಷಸರ್ಪ ಚಲನಚಿತ್ರವಾಗಿ ತಲೆಕೆಳಗಾಗಿದೆ (5)
7.ನಸುಕಿನಲ್ಲಿ ಕರ ಹಿಡಿದು ದಾರಿ ತೋರಿದ ಆಶಾವಾದಿ (5)
11.ಹಕ್ಕಿಗಳ ಮಧುರವಾದ ಧ್ವನಿ (4)
12. ಯೌವನದಲ್ಲಿ ತಲೆಕೆಳಗಾಗಿದೆ (3)
14.ಉಸಿರಾಡುವ ಗಾಳಿಯಷ್ಟೇ ನಂಬಿಕೆ (3)

5907 ಉತ್ತರ

ಎಡದಿಂದ ಬಲಕ್ಕೆ:
1.ಗಿರಿಧರ
3.ವಿತರಕ 5.ನರ್ತನ
6.ಯುಗಾಂತರ
8.ರವಿವಾರ 10.ಅನುಜ
11.ನಮನ 13.ಪುರಾಣ
15.ನವರಾತ್ರಿ
16.ಗಲಿಬಿಲಿ

ಮೇಲಿನಿಂದ ಕೆಳಕ್ಕೆ :
1.ಗಿಟುಕುಹಾಯು
2.ರತನ 3.ವಿಜ್ಞಾನ
4.ಕಳ್ಳವ್ಯಾಪಾರ 7.ತನುಜ
9.ವಿಮಾನ 10.ಅರ್ಜುನ
12.ನಕಲಿ 12.ಪುತ್ರಿ
14.ಗಣ


ನಾಡಿನ ಸರ್ವತೋಮುಖ ಬೆಳವಣಿಗೆಯನ್ನೇ ಜೀವನದ
ಗುರಿಯಾಗಿಸಿಕೊಂಡು ಹೋರಾಡಿದ
ಮುತ್ಸದ್ದಿ ರಾಜಕಾರಣಿ
ತಳಮಟ್ಟದಿಂದ ಪಕ್ಷವನ್ನು ಕಟ್ಟಿ ಬೆಳೆಸಿದ
ಪಕ್ಷದ ನಿಷ್ಠಾವಂತ ಶಿಸ್ತಿನ ಸಿಪಾಯಿ
ರೈತರಿಗೆ, ಮಹಿಳೆಯರಿಗೆ, ದೀನ-ದಲಿತರಿಗೆ ನೆಮ್ಮದಿಯ ಬದುಕನ್ನು
ಕಲ್ಪಿಸಿಕೊಡುವಲ್ಲಿ ಹಗಲಿರುಳು ಶ್ರಮಿಸಿದ
ರೈತ ನಾಯಕ
ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಬಿಜೆಪಿ
ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾದ
ಸನ್ಮಾನ್ಯ ಶ್ರೀ
ಬಿ.ಎಸ್. ಯಡಿಯೂರಪ್ಪ
ರವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು
ಸಂದೀಪ ಬಿ ರೆಡ್ಡಿ
ಅಧ್ಯಕ್ಷರು, - ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್
ಹಾಗೂ ಬಿಜೆಪಿ ಯುವ ಮುಖಂಡರು,
ಚಿಕ್ಕಬಳ್ಳಾಪುರ
ಅಲೋಕ್ ವಿಶ್ವನಾಥ್
ಯುವ ಬಿಜೆಪಿ ಮುಖಂಡರು
ಯಲಹಂಕ ವಿಧಾನಸಭಾ ಕ್ಷೇತ್ರ
ಚಿಕ್ಕಬಳ್ಳಾಪುರ ಜಿಲ್ಲೆಯ ಸಮಸ್ತ ನಾಗರೀಕ ಬಂಧುಗಳು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಸಿನಿ ದಿಗಂತ



ಹಯಗ್ರೀವ 2 ಪಾತ್ರಗಳಲ್ಲಿ ಧನ್ವೀರ್



ಕೆ.ಪಿ.ಸಿ.ಪ್ರೊಡಕ್ಷನ್ಸ್ ಲಾಂಛನದಲ್ಲಿ ಶ್ರೀಮತಿ ಪದ್ಮ ಸಮೃದ್ಧಿ ಮಂಜುನಾಥ್ ಅವರು ನಿರ್ಮಿಸಿರುವ, ರಘುಕುಮಾರ್ ಓ.ಆರ್. ಅವರ ನಿರ್ದೇಶನದ ಬಹುನಿರೀಕ್ಷಿತ ಚಿತ್ರ ಹಯಗ್ರೀವ ಫೆಬ್ರವರಿ 27ರ ಇಂದು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ. ಇತ್ತೀಚೆಗಷ್ಟೇ ಬಿಡುಗಡೆಯಾಗಿರುವ ಈ ಚಿತ್ರದ ಟ್ರೇಲರ್ ಅತಿ ಹೆಚ್ಚು ವೀಕ್ಷಣೆಯಾಗುವ ಮೂಲಕ ವೈರಲ್ ಆಗಿದೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರರಂಗದ ಸದಸ್ಯರು ಹಾಜರಿದ್ದು ಸಿನಿಮಾದ ವಿಶೇಷತೆಯ ಕುರಿತಂತೆ ಮಾತನಾಡಿದರು.

ಹಯಗ್ರೀವ ನಮ್ಮ ಸಂಸ್ಥೆಯಿಂದ ಹೊರಬರುತ್ತಿರುವ ಮೂರನೇ ಚಿತ್ರ ಎಂದ ಮಾತನಾಡಿದ ನಿರ್ಮಾಪಕ ಸಮೃದ್ಧಿ ಮಂಜುನಾಥ್, ನಾನು ಸಿನಿಮಾಪ್ರೇಮಿ. ಹೆಚ್ಚು ಹೆಚ್ಚು ಚಿತ್ರಗಳನ್ನು ನೋಡುತ್ತಿರುತ್ತೇನೆ. ರಘುಕುಮಾರ್ ಅವರು ನಿರ್ದೇಶಿಸಿದ್ದ ಒಂದು ಕಿರುಚಿತ್ರವನ್ನು ನೋಡಿದ್ದೆ. ಆ ಚಿತ್ರ ನನಗೆ ಬಹಳ ಇಷ್ಟವಾಗಿತ್ತು. ಹಾಗಾಗಿ ಅವರನ್ನು ಕರೆಸಿಕೊಂಡು ಒಂದೊಳ್ಳೆ ಕಥೆ ನಿಮ್ಮಲ್ಲಿದ್ದರೆ ಹೇಳಿ, ಸಿನಿಮಾ ಮಾಡೋಣ ಅಂತ ಹೇಳಿದೆ. ಆಗ ಅವರು ಹಯಗ್ರೀವ ಚಿತ್ರದ ಈ ಕಥೆಯನ್ನು ನನಗೆ ಹೇಳಿದರು. ದರ್ಶನ್ ಅವರ ಮೂಲಕ ನನಗೆ ಧನ್ವೀರ್ ಅವರ ಪರಿಚಯವಾಯಿತು. ಧನ್ವೀರ್ ಸೇರಿದಂತೆ ಚಿತ್ರದಲ್ಲಿರುವ ಎಲ್ಲಾ ಕಲಾವಿದರ ಅಭಿನಯ ಹಾಗೂ ತಂತ್ರಜ್ಞರ ಕಾರ್ಯ ಚೆನ್ನಾಗಿದೆ. ಕನ್ನಡದಲ್ಲಿ ತೀರ ಅಪರೂಪ ಎನ್ನಬಹುದಾದ ಕಥೆಯಿದು. ಪ್ರೇಕ್ಷಕ ಮಹಾಪ್ರಭು ಕೊಟ್ಟ ದುಡ್ಡಿಗೆ ಮೋಸವಾಗದಂಥ ಚಿತ್ರವಿದು. ಫೆಬ್ರವರಿ 27ರಂದು ಹಯಗ್ರೀವ ಚಿತ್ರ ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ. ಚಿತ್ರವನ್ನು ರಾಜ್ಯದ ಜನರೆಲ್ಲ ನೋಡಿ ಪ್ರೋತ್ಸಾಹಿಸುತ್ತಾರೆಂಬ ನಂಬಿಕೆಯಿದೆ ಎಂದು ಹೇಳಿದರು.

ಆನಂತರ ಮಾತನಾಡಿದ ನಿರ್ದೇಶಕ ರಘುಕುಮಾರ್, ನಮ್ಮ ಚಿತ್ರದ ಕಥೆಯನ್ನು ಇಂಡಿಯನ್ ಮೈಥಾಲಜಿಯನ್ನು ಪ್ರಮುಖವಾಗಿಟ್ಟುಕೊಂಡು ಹೆಣೆಯಲಾಗಿದೆ. ಈ ರೀತಿಯ ಕಥೆ ಕನ್ನಡದಲ್ಲಿ ಅಪರೂಪ ಎನ್ನಬಹುದು. ಧನ್ವೀರ್ ಗೌಡ ನಾಯಕರಾಗಿ ನಟಿಸಿರುವ ಈ ಚಿತ್ರದಲ್ಲಿ ನಾಯಕಿಯಾಗಿ ಸಂಜನಾ ಆನಂದ್ ಅವರು ಅಭಿನಯಿಸಿದ್ದಾರೆ. ಸಾಧು ಕೋಕಿಲ, ಶರತ್ ಲೋಹಿತಾಶ್ವ, ಶೋಭ್‌ರಾಜ್, ಅಶ್ವಿನಿಗೌಡ, ಗಿಲ್ಲಿನಟ ಸೇರಿದಂತೆ ಮುಂತಾದ ಕಲಾವಿದರು ಹಯಗ್ರೀವ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಜ್ಯುಡಾ ಸ್ಯಾಂಡಿ ಅವರ ಸಂಗೀತ ನಿರ್ದೇಶನ, ಗಿರೀಶ್ ಆರ್. ಗೌಡ ಅವರ ಛಾಯಾಗ್ರಹಣ ಹಾಗೂ ಕೆ.ಎಂ. ಪ್ರಕಾಶ್ ಅವರ ಸಂಕಲನವಿರುವ ಈ ಚಿತ್ರಕ್ಕೆ ಶೈಲೇಶ್‌ಕುಮಾರ್ ಹಾಗೂ ಚೇತನ್ ಸಿದ್ ಅವರುಗಳು ಸಂಭಾಷಣೆಯನ್ನು ಬರೆದಿದ್ದಾರೆ ಎಂದು ಹೇಳಿದರು.



ನಂತರ ಚಿತ್ರದ ನಾಯಕ ಧನ್ವೀರ್ ಗೌಡ ಮಾತನಾಡುತ್ತ ನಮ್ಮ ಹಯಗ್ರೀವ ಚಿತ್ರಕ್ಕೆ ದರ್ಶನ್ ಅವರ ಆಶೀರ್ವಾದವಿದೆ, ಅವರ ಫ್ಯಾನ್ಸ್ ಎಲ್ಲರೂ ಸಪೋರ್ಟ್ ಮಾಡುತ್ತಿದ್ದಾರೆ, ಇತ್ತೀಚೆಗಷ್ಟೇ ವಿಜಯಲಕ್ಷ್ಮಿ ದರ್ಶನ್ ಅವರು ನಮ್ಮ ಚಿತ್ರದ ಟ್ರೇಲರನ್ನು ಬಿಡುಗಡೆ ಮಾಡಿ ಶುಭ ಹಾರೈಸಿದ್ದರು, ನಿರ್ದೇಶಕ ರಘುಕುಮಾರ್ ಅವರು ಹೇಳಿದ ಸ್ಟೋರಿ ಲೈನ್ ನನಗೆ ತುಂಬಾ ಇಷ್ಟವಾಯಿತು. ಈ ಥರದ ಕಥೆ ಕನ್ನಡ ಚಿತ್ರರಂಗದಲ್ಲಿ ಹಿಂದೆಂದೂ ಬಂದಿಲ್ಲ, ನಿರ್ದೇಶಕ ರಘುಕುಮಾರ್ ಅವರು ನನಗೆ ಕಥೆ ಹೇಳಿದ ರೀತಿಯಲ್ಲೇ ಚಿತ್ರವನ್ನು ಸಹ ತೆರೆಯ ಮೇಲೆ ತಂದಿದ್ದಾರೆ. ನನ್ನ ಪಾತ್ರ ಎರಡು ಶೇಡ್‌ಗಳಲ್ಲಿ ಮೂಡಿಬರಲಿದೆ. ಒಂದು ಪೊಲೀಸ್ ಅಧಿಕಾರಿಯ ಪಾತ್ರವಾದರೆ, ಮತ್ತೊಂದು ಪಾತ್ರ ಯಾವುದೆಂದು ನೀವು ಸಿನಿಮಾದಲ್ಲೇ ನೋಡಬೇಕು. ನಾಯಕಿ ಸಂಜನಾ ಆನಂದ್ ಅವರು ಚಿತ್ರದಲ್ಲಿ ತುಂಬಾ ಚೆನ್ನಾಗಿ ನಟಿಸಿದ್ದಾರೆ. ಸಾಕಷ್ಟು ಹಿರಿಯ ಕಲಾವಿದರ ಜೊತೆಗೆ ಅಭಿನಯಿಸಿದ್ದು ನನಗೆ ಬಹಳ ಖುಷಿಯಾಯಿತು. ಮೊದಲಿನಿಂದಲೂ ನೀವೆಲ್ಲರೂ ನೀಡುತ್ತಾ ಬಂದಿರುವ ಪ್ರೋತ್ಸಾಹ ಈ ಚಿತ್ರಕ್ಕೂ ಸಹ ಇರಲಿ ಎಂದರು. ಚಿತ್ರದ ಕಾರ್ಯಕಾರಿ ನಿರ್ಮಾಪಕ ಮಹೇಶ್‌ಗೌಡ ಕೂಡ ಈ ಸಂದರ್ಭದಲ್ಲಿ ಹಾಜರಿದ್ದರು,

ತಮ್ಮ ಪಾತ್ರದ ಬಗ್ಗೆ ಮಾಹಿತಿ ನೀಡಿದ ನಾಯಕಿ ಸಂಜನಾ ಆನಂದ್, ಚಿತ್ರತಂಡಕ್ಕೆ ಧನ್ಯವಾದ ಹೇಳಿದರು. ಚಿತ್ರದಲ್ಲಿ ನಟಿಸಿರುವ ನಟ ಅಶ್ವಿನ್‌ಹಾಸನ್ ಹಾಗೂ ಹಿರಿಯನಟಿ ಆಶಾರಾಣಿ ಅವರು ತಮ್ಮ ಪಾತ್ರಗಳ ಕುರಿತಂತೆ ಮಾಹಿತಿ ಹಂಚಿಕೊಂಡರು.

ಇಂಡಿಯನ್ ಮೈಥಾಲಜಿಯನ್ನು ಪ್ರಧಾನವಾಗಿಟ್ಟುಕೊಂಡು ಹೆಣೆಯಲಾದಂಥ ಕಥೆ ಈ ಚಿತ್ರದಲ್ಲಿದೆ, ಈ ರೀತಿಯ ಕಥೆಗಳು ಕನ್ನಡದಲ್ಲಿ ತೀರ ಅಪರೂಪ ಎನ್ನಬಹುದು. ಧನ್ವೀರ್‌ಗೌಡ ನಾಯಕರಾಗಿ ನಟಿಸಿರುವ ಈ ಚಿತ್ರದಲ್ಲಿ ನಾಯಕಿಯಾಗಿ ನಟಿ ಸಂಜನಾ ಆನಂದ್ ಅವರು ಅಭಿನಯಿಸಿದ್ದಾರೆ. ಸಾಧು ಕೋಕಿಲ, ಶರತ್ ಲೋಹಿತಾಶ್ವ, ಶೋಭ್‌ರಾಜ್‌ರಂಥ ಹಿರಿಯ ಕಲಾವಿದರ ಜತೆ ಅಶ್ವಿನಿಗೌಡ, ಗಿಲ್ಲಿನಟ ಸೇರಿದಂತೆ ಸಾಕಷ್ಟು ಕಲಾವಿದರು ಹಯಗ್ರಿವ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಕವಳ ಕೆಂಪು ನೆತ್ತರಿನ ಸುತ್ತ..

- ಸಮುದ್ರಖನಿ ನಟನೆಯ ಈ ಚಿತ್ರಕ್ಕೆ ಕ್ರೇಜಿಸ್ಟಾರ್ ರವಿಚಂದ್ರನ್ ಚಾಲನೆ



ರಾಧಾಕೃಷ್ಣ ಆರ್ಟ್ಸ್ ಹಾಗೂ ಡ್ರೀಮ್ ವರ್ಲ್ಡ್ ಸಿನಿಮಾಸ್ ಮೂಲಕ ಲೋಕೇಶ್ ಬಿ. ಹಾಗೂ ಅಡವಯ್ಯ ಪೂಜಾರ್ ಅವರ ನಿರ್ಮಾಣದ ಕವಳ ಚಿತ್ರದ ಮುಹೂರ್ತ ಸಮಾರಂಭ ನಗರದ ಕಾಡು ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಅದ್ದೂರಿಯಾಗಿ ನೆರವೇರಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕ್ರೇಜಿ ಸ್ಟಾರ್ ರವಿಚಂದ್ರನ್ ಅವರು ಕವಳ ಚಿತ್ರಕ್ಕೆ ಚಾಲನೆ ನೀಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.



ಈ ಹಿಂದೆ ಆ.ಎಕ್ಸ್.ಸೂರಿ, ಭೈರಾದೇವಿ ಚಿತ್ರಗಳನ್ನು ನಿರ್ದೇಶಿಸಿದ್ದ ಶ್ರೀ ಜೈ ಅವರು ಈ ಚಿತ್ರದ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಸಂದೀಪ್ ನಾಗರಾಜ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರದಲ್ಲಿ ತಮಿಳಿನ ಹೆಸರಾಂತ ತಂತ್ರಜ್ಞ ಸಮುದ್ರಖನಿ ಅವರು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ಶ್ರೀಜೈ ಕವಳ ಎಂದರೆ ತಾಂಬೂಲ. ಅದನ್ನು ಜಗಿದಾಗ ಬರುವ ಕೆಂಪುಬಣ್ಣವನ್ನು ಚಿತ್ರದಲ್ಲಿ ಹೇಳಿದ್ದೇವೆ. ಒಂದಷ್ಟು ನೈಜ ಘಟನೆಗಳನ್ನು ಸ್ಫೂರ್ತಿಯಾಗಿಟ್ಟುಕೊಂಡು ಈ ಚಿತ್ರದ ಕಥೆ ಹೆಣೆದಿದ್ದೇನೆ. ಒಂದು ಸ್ಟ್ರಾಂಗ್ ರೀಜನ್ ಗೋಸ್ಕರ ಹರಿಯುವ ರಕ್ತಧಾರೆ. ರೌಡಿ ಶೀಟರ್ ಕವಳನ ಕಥೆ ಸ್ಫೂರ್ತಿಯಾಗಿರಬಹುದು. ಆದರೆ ಇದು, ಆತನದೇ ಕಥೆಯಲ್ಲ. ಯುಗಾದಿಯ ನಂತರ ಚಿತ್ರೀಕರಣ ಆರಂಭಿಸಿ ಕಾಶಿ, ಹೈದರಾಬಾದ್ ಸೇರಿದಂತೆ ಹಲವಾರು ಲೊಕೇಶನ್‌ಗಳಲ್ಲಿ ಶೂಟ್ ಮಾಡುವ ಯೋಜನೆಯಿದೆ. ಸಮುದ್ರ ಖನಿ ಅವರದು ಹೊರ ರಾಜ್ಯದಿಂದ ಬಂದವರ ಹೇಗೆ ಕನ್ನಡ ಮಾತಾಡುತ್ತಾರೋ ಅದೇ ರೀತಿಯ ವ್ಯಕ್ತಿಯ ಪಾತ್ರ. ನಿರ್ಮಾಪಕರು ನನ್ನನ್ನು ನಂಬಿ ದೊಡ್ಡಮಟ್ಟದ ಬಂಡವಾಳ ಹಾಕುತ್ತಿದ್ದಾರೆ. ಸ್ಕ್ರಿಪ್ಟ್ ನಿಜಕ್ಕೂ ಅದ್ಭುತವಾಗಿ ಮೂಡಿಬಂದಿದೆ ಎಂದರು.

ನಿರ್ಮಾಪಕ ಲೋಕೇಶ್ ಮಾತನಾಡುತ್ತ ನಾನೊಬ್ಬ ಎಂಟರ್‌ಪ್ರ್ಯುನರ್, ಸ್ಟಾರ್ಟಪ್ ಬ್ಯುಸಿನೆಸ್ ಮಾಡುತ್ತಿದ್ದೇನೆ. ನನಗೆ ಮೊದಲಿಂದಲೂ ಸಿನಿಮಾ ಮಾಡುವ ಬಗ್ಗೆ ಒಲವಿತ್ತು, ಹಾಗಾಗಿ ಈ ಚಿತ್ರಕ್ಕೆ ಬಂಡವಾಳ ಹಾಕುತ್ತಿದ್ದೇನೆ ಎಂದರು.

ಮತ್ತೊಬ್ಬ ನಿರ್ಮಾಪಕ ಅಡವಯ್ಯ ಪೂಜಾರ್ ಅವರು ಮಾತನಾಡಿ ಸಮುದ್ರ ಖನಿಯಂಥ ವ್ಯಕ್ತಿಗಳು ನಮ್ಮ ಮೊದಲ ಚಿತ್ರದಲ್ಲಿ ನಟಿಸುತ್ತಿರುವುದು ಖುಷಿಯ ವಿಷಯ, ನಾನು ಸುಮಾರು 40 ಕಥೆಗಳನ್ನು ಕೇಳಿ ಕೊನೆಗೆ ಇದನ್ನು ಫೈನಲ್ ಮಾಡಿದ್ದೇನೆ. ಗೂಗ್ಲಿಯಲ್ಲಿ ಸಂದೀಪ್ ಅವರ ಅಭಿನಯ ನೋಡಿದ್ದೆ. ತುಂಬಾ ಟ್ಯಾಲೆಂಟೆಡ್, ನಾಯಕನ ಪಾತ್ರಕ್ಕೆ ಅವರೇ ಬೇಕೆಂದು ನಿರ್ದೇಶಕರಿಗೆ ನಾನೇ ಒತ್ತಾಯಿಸಿದೆ. ಸಮುದ್ರಖನಿ ಅವರ ಒಪ್ಪುತ್ತಾರೆ ಎಂಬ ನಂಬಿಕೆಯಿರಲಿಲ್ಲ, ನಮ್ಮ ಅಕ್ಕ ಪಕ್ಕ ನಡೆಯುವ ಘಟನೆಗಳೇ ಈ ಚಿತ್ರದಲ್ಲಿವೆ ಎಂದು ಹೇಳಿದರು.



ನಂತರ ನಟ ಸಮುದ್ರಖನಿ ಅವರು ಮಾತನಾಡುತ್ತ ಕನ್ನಡದಲ್ಲಿ ಪುನೀತ್ ರಾಜಕುಮಾರ್ ಅವರ ಜತೆ ಎರಡು ಸಿನಿಮಾ ಮಾಡಿದ್ದು ಮರೆಯಲಾಗದ ಅನುಭವ. ನನಗೂ ಕನ್ನಡ ಸ್ವಲ್ಪಸ್ವಲ್ಪ ಬರುತ್ತೆ. ಇದರಲ್ಲಿ ನೆಗೆಟಿವ್ ಶೇಡ್ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ ಎಂದು ಹೇಳಿದರು. ನಾಯಕ ಸಂದೀಪ್ ನಾಗರಾಜ್ ಮಾತನಾಡಿ ನಾನು ಈ ಪಾತ್ರ ಮಾಡುತ್ತೇನೆ ಎಂದು ನನ್ನನ್ನು ನಂಬಿ ಇಂಥ ದೊಡ್ಡ ಪಾತ್ರ ಕೊಟ್ಟಿದ್ದಾರೆ. ಆ ನಂಬಿಕೆಯನ್ನು ಉಳಿಸಿಕೊಂಡು ಪಾತ್ರಕ್ಕೆ ಜೀವ ತುಂಬಿ ಅಭಿನಯಿಸುತ್ತೇನೆ ಎಂದು ಹೇಳಿದರು.

ಇನ್ನು ಈ ಚಿತ್ರಕ್ಕೆ ಎ.ಕರುಣಾಕರನ್ ಅವರ ಛಾಯಾಗ್ರಹಣ, ಕೆ.ಕೆ.ಸೆಂಥಿಲ್ ಪ್ರಸಾದ್ ಅವರ ಸಂಗೀತ ಸಂಯೋಜನೆ, ಅರ್ಜುನ್ ರಾಜ್, ವಿಕ್ರಮ್ ಮೋರ್ ಅವರ ಸಾಹಸ ಸಂಯೋಜನೆ, ಕಲೈ, ಮುರಳಿ ಮಾಸ್ಟರ್ ಅವರ ನೃತ್ಯ ನಿರ್ದೇಶನ, ದೀಪು ಎಸ್.ಕುಮಾರ್ ಅವರ ಸಂಕಲನ ಈ ಚಿತ್ರಕ್ಕಿದೆ. ಕವಳ ಚಿತ್ರದ ಉಳಿದ ಪಾತ್ರಗಳಲ್ಲಿ ಹಿರಿಯ ನಟರಾದ ಅಚ್ಯುತ್ ಕುಮಾರ್, ರಂಗಾಯಣ ರಘು, ನಾಜರ್, ಈಶ್ವರಿರಾವ್, ಬಲ ರಾಜವಾಡಿ, ಕಿಶೋರ್, ಶ್ರವಣ್, ಗಿಲ್ಲಿನಟ, ಪ್ರಕಾಶ್ ತುಮ್ಮಿನಾಡ್ ಹಾಗೂ ಇತರರು ನಟಿಸುತ್ತಿದ್ದಾರೆ.



ಶೇಷ 2016 ಪೊಲೀಸ್ ವ್ಯವಸ್ಥೆಯ ಸತ್ಯದರ್ಶನ

ಕನ್ನಡ ಹಾಗೂ ಮಲಯಾಳಂ ಸೇರಿದಂತೆ 2 ಭಾಷೆಗಳಲ್ಲಿ ಅದ್ದೂರಿಯಾಗಿ ತಯಾರಾಗಿರುವ, ಹಾಗೂ ಕನ್ನಡ ಚಿತ್ರರಂಗದಲ್ಲಿ ಸಾಕಷ್ಟು ನಿರೀಕ್ಷೆ ಹಾಗೂ ಕುತೂಹಲಗಳನ್ನು ಹುಟ್ಟುಹಾಕಿರುವ ಚಿತ್ರ, ಶೇಷ 2016. ಇದೇ ಮಾರ್ಚ್ 6ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ಈ ಚಿತ್ರವು ತೆರೆಕಾಣಲಿದೆ, ಸದ್ಯ ಪೊಲೀಸ್ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಹಾಗೂ ಪ್ರಾಮಾಣಿಕತೆಯ ನಡುವಿನ ಸಂಘರ್ಷದ ಕಥೆಯನ್ನು ನಿರ್ದೇಶಕ ಪ್ರದೀಪ್ ಅರಸೀಕೆರೆ ಅವರು ಈ ಚಿತ್ರದ ಮೂಲಕ ಹೇಳುವ ಪ್ರಯತ್ನ ಮಾಡಿದ್ದಾರೆ, ಮರಡಿ ಗುಡ್ಡ ಎಂಟರ್‌ಟೈನ್ಮೆಂಟ್ಸ್ ಅಡಿ ಉಮೇಶ್‌ಗೌಡ, ಮಂಜುವಾಣಿ. ವಿ.ಎಸ್. ಹಾಗೂ ವೀಣಾ.ಎಸ್. ಅವರುಗಳು ಈ ಚಿತ್ರವನ್ನು ಬಿಗ್ ಬಜೆಟ್‌ನಲ್ಲಿ ನಿರ್ಮಾಣ ಮಾಡಿದ್ದಾರೆ. ಪ್ರದೀಪ್ ಅರಸೀಕೆರೆ ಅವರ ಕಥೆ ಚಿತ್ರಕಥೆ ಹಾಗೂ ನಿರ್ದೇಶನವಿರುವ ಈ ಚಿತ್ರದಲ್ಲಿ ಮಲಯಾಳಂ ನಟ ಜಾನ್ ಕೈಪಳ್ಳಿ ಹಾಗೂ ಕಾಂತಾರ ಖ್ಯಾತಿಯ ನಟ ಪ್ರಮೋದ್ ಶೆಟ್ಟಿ ಅವರುಗಳು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ,





ನಮ್ಮ ಪೊಲೀಸ್ ಇಲಾಖೆಯಲ್ಲಿ ಭ್ರಷ್ಟ ಅಧಿಕಾರಿಗಳ ಜತೆಗೆ ಅಷ್ಟೇ ಪ್ರಾಮಾಣಿಕ ಅಧಿಕಾರಿಗಳೂ ಸಹ ಇರುತ್ತಾರೆ ಎಂಬುದನ್ನು ಈ ಚಿತ್ರದ ಕಥೆಯಲ್ಲಿ ಹೇಳಲಾಗಿದೆ, ಜನರಲ್ಲಿ ಜಾಗೃತಿ ಮೂಡಿಸುವ, ಉತ್ತಮ ಸಮಾಜಕ್ಕೆ ಸಂದೇಶ ನೀಡುವ ಚಿತ್ರ ಶೇಷ 2016 ಎನ್ನಬಹುದು. ಈಗಾಗಲೇ ಈ ಚಿತ್ರತಂಡವು ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಸಿನಿಮಾದ ವಿಶೇಷತೆಯ ಬಗ್ಗೆ ಹೇಳಿಕೊಂಡು ಬಂದಿದೆ, ಚಿತ್ರತಂಡ ಹೋದೆಡೆಯಲ್ಲೆಲ್ಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ದೊರಕುತ್ತಿದೆ,

ನಿರ್ದೇಶಕ ಪ್ರದೀಪ್ ಅರಸೀಕೆರೆ ಹೇಳಿದಂತೆ ಒಳ್ಳೆಯದು ಹಾಗೂ ಕೆಟ್ಟದರ ನಡುವಿನ ಸಂಘರ್ಷದ ನಂತರ ಉಳಿಯುವುದೇ ಶೇಷ. 2016ರಲ್ಲಿ ಕರ್ನಾಟಕ ಹಾಗೂ ಕೇರಳ ರಾಜ್ಯಗಳ ಗಡಿಭಾಗದಲ್ಲಿ ನಡೆಯುವ ನೈಜಕೆಗೆ ಹತ್ತಿರವಾದ ಕಥೆಯನ್ನು ಈ ಚಿತ್ರದಲ್ಲಿ ಹೇಳಲಾಗಿದೆ, ಪೊಲೀಸ್ ಇಲಾಖೆಯಲ್ಲಿ ಕೆಲವು ಧನದಾಹಿ ಅಧಿಕಾರಿಗಳು ನಡೆಸುತ್ತಿರುವ ಭ್ರಷ್ಟಾಚಾರದ ಕುರಿತಂತೆ ಶೇಷ 2016 ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ, ಸಾಮಾನ್ಯವಾಗಿ ಎಲ್ಲದಕ್ಕೂ ಒಂದೊಂದು ಪರ್ಯಾಯ ವ್ಯವಸ್ಥೆ ಇದ್ದೇ ಇರುತ್ತದೆ. ಸರ್ಕಾರಿ ಆಸ್ಪತ್ರೆ ಇಲ್ಲದಿದ್ದರೆ, ಖಾಸಗಿ ಹಾಸ್ಪಿಟಲ್‌ಗಳು, ಸರ್ಕಾರಿ ಶಾಲೆಗಳು ಇಲ್ಲದಿದ್ದರೆ ಖಾಸಗಿ ಶಾಲೆಗಳು ಇರುತ್ತವೆ, ಆದರೆ ಪೊಲೀಸ್ ಠಾಣೆಗೆ ಯಾವುದೇ ಬದಲಿ ವ್ಯವಸ್ಥೆ ಇಲ್ಲ, ಇಂಥ ಇಲಾಖೆಯಲ್ಲಿ ನಡೆಯುವ ಭ್ರಷ್ಟಾಚಾರದಿಂದ ಸಾರ್ವಜನಿಕರು ಹೇಗೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ, 35 ದಿನಗಳ ಕಾಲ ಶೇಷ 2016 ಚಿತ್ರದ ಚಿತ್ರೀಕರಣ ನಡೆಸಲಾಗಿದ್ದು, ಮಾರ್ಚ್ 6ರಂದು ಕನ್ನಡ ಹಾಗೂ ಮಲಯಾಳಂ ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯಾಗಲಿದೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಂತಾರ ಮುಂತಾದ ಚಿತ್ರಗಳಲ್ಲಿ ನಟಿಸಿರುವ ನಟ ಪ್ರಮೋದ್ ಶೆಟ್ಟಿ ಅವರು ಈ ಚಿತ್ರದಲ್ಲೂ ಸಹ ಪೊಲೀಸ್ ಅಧಿಕಾರಿಯಾಗಿಯೇ ಕಾಣಿಸಿಕೊಂಡಿದ್ದಾರೆ, ಆದರೆ ಅದು ಒಳ್ಳೇ ಪೊಲೀಸೋ ಅಥವಾ ಕೆಟ್ಟ ಪೊಲೀಸೋ ಎಂಬುದನ್ನು ನೀವು ತೆರೆಯ ಮೇಲೇ ನೋಡಬೇಕು ಎಂದು ಅವರು ಮಾಧ್ಯಮದ ಜತೆ ಮಾತನಾಡುತ್ತಾ ಹೇಳಿಕೊಂಡಿದ್ದಾರೆ, ಹಿರಿಯನಟ ದೇವರಾಜ್ ಅವರು ಎಸ್.ಪಿ. ಪಾತ್ರವನ್ನು ನಿರ್ವಹಿಸಿದ್ದಾರೆ. ಜತೆಗೆ ಸಿದ್ದಿಂಗು ಶ್ರೀಧರ್, ಅರ್ಚನಾ ಕೊಟ್ಟಿಗೆ, ಸಾಯಿಭೈರವ, ದಿನೇಶ್ ಮಂಗ್ಳೂರು, ಯಶ್ ಶೆಟ್ಟಿ ಸೇರಿದಂತೆ ಸಾಕಷ್ಟು ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ, ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತ ಸಂಯೋಜನೆ, ಆರ್.ಎಸ್.ಆನಂದ್‌ಕುಮಾರ್ ಅವರ ಛಾಯಾಗ್ರಹಣ, ಅಯೂಬ್‌ಖಾನ್ ಅವರ ಸಂಕಲನ, ಗಿರೀಶ್ ಅವರ ಸಾಹಸ ಸಂಯೋಜನೆ ಈ ಚಿತ್ರಕ್ಕಿದೆ.

ಮಹಾಭಾರತದ ಶಿಖಂಡಿಯೇ ಶಿಖಂಡಿ ಚಿತ್ರಕ್ಕೆ ಸ್ಫೂರ್ತಿ..



ಮಹಾಭಾರತ ಕಥೆಯಲ್ಲಿ ಬರುವ ಶಿಖಂಡಿಯ ಪಾತ್ರವನ್ನು ಸ್ಫೂರ್ತಿಯಾಗಿಟ್ಟುಕೊಂಡು ಮಾರಕಾಸ್ತ್ರ ಖ್ಯಾತಿಯ ನಿರ್ದೇಶಕ ಗುರುಮೂರ್ತಿ ಅವರು ಇದೀಗ ಶಿಖಂಡಿ ಎಂಬ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ, ಮಾರಕಾಸ್ತ್ರ ಚಿತ್ರದ ನಂತರ ಗುರುಮೂರ್ತಿ ಅವರು ನಿರ್ದೇಶನ ಮಾಡುತ್ತಿರುವ ಎರಡನೇ ಚಿತ್ರ ಇದಾಗಿದೆ, ಪೋಲಾ ಪ್ರವೀಣ್ ಕುಮಾರ್ ಅವರ ನಿರ್ಮಾಣದ ಈ ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು, ವೇದಿಕೆಯಲ್ಲಿ ನಿರ್ಮಾಪಕ ಸಂಜಯ್‌ಗೌಡ್ರು, ಹಾಗೂ ನಿರ್ದೇಶಕ ಜಡೇಶ್ ಕೆ. ಹಂಪಿ ಅವರುಗಳು ಶಿಖಂಡಿ ಚಿತ್ರದ ಮೋಷನ್ ಪೋಸ್ಟರನ್ನು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಗುರುಮೂರ್ತಿ ಅವರು, ಮಹಾಭಾರತದಲ್ಲಿ ಶಿಖಂಡಿ ಪುನರ್ಜನ್ಮ ಎತ್ತಿ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ, ಅದೇ ಎಳೆಯನ್ನು ಪ್ರಮುಖವಾಗಿ ಇಟ್ಟುಕೊಂಡು ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಈ ಕಥೆಯನ್ನು ಹೆಣೆದು ಶಿಖಂಡಿ ಚಿತ್ರವನ್ನು ನಿರ್ದೇಶಿಸಿದ್ದೇನೆ. ಚಿತ್ರದ ಕಾನ್ಸೆಪ್ಟ್ ಕೇಳಿ ಇಷ್ಟಪಟ್ಟ ನಿರ್ಮಾಪಕರು ನಿರ್ಮಾಣಕ್ಕೆ ಮುಂದಾದರು. ಈಗಾಗಲೇ ಚಿತ್ರದ ಚಿತ್ರೀಕರಣ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ವರ್ಕ್ ಕೊನೇ ಹಂತದಲ್ಲಿದೆ, ಈಗ ಮೋಷನ್ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಿತ್ರದ ಪ್ರಚಾರಕ್ಕೆ ಚಾಲನೆ ನೀಡಿದ್ದೇವೆ, ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಶಿಖಂಡಿ ಚಿತ್ರವನ್ನು ಬಿಡುಗಡೆ ಮಾಡುವುದಾಗಿ ಹೇಳಿದರು.

ನಿರ್ಮಾಪಕ ಪೋಲಾ ಪ್ರವೀಣ್ ಕುಮಾರ್ ಮಾತನಾಡಿ ನನ್ನ ನಿರ್ಮಾಣದ ಮೊದಲ ಚಿತ್ರವಿದು. ಈ ಸಿನಿಮಾ ಮಾಡಲು ಎರಡು ಕಾರಣಗಳಿವೆ. ಒಂದು ಅದ್ಭುತವಾದ ಕಥೆ, ಮತ್ತೊಂದು ವಿಶೇಷ ಚೇತನರಾಗಿದ್ದರೂ ಗುರುಮೂರ್ತಿ ಅವರಿಗೆ ಸಿನಿಮಾ ಮೇಲಿರುವ ಅದಮ್ಯವಾದ ಪ್ರೀತಿ. ಒಂದೊಳ್ಳೆ ಚಿತ್ರವನ್ನು ನಿಮ್ಮ ಮುಂದೆ ತರುತ್ತಿದ್ದೇವೆ ಎಂದು ಹೇಳಿದರು.

ನಾಯಕ ಯುವರಾಜ್‌ಗೌಡ ಮಾತನಾಡುತ್ತ ಈ ಚಿತ್ರದಲ್ಲಿ ನಾನು ಎಂ.ಎನ್.ಸಿ. ಕಂಪನಿಯಲ್ಲಿ ಕೆಲಸ ಮಾಡುವ ಸೂರ್ಯ ಎಂಬ ಪಾತ್ರವನ್ನು ನಿರ್ವಹಿಸಿದ್ದೇನೆ, ಆತನಿಗೂ ಮಹಾಭಾರತದ ಶಿಖಂಡಿಗೂ ಏನು ಸಂಬಂಧ ಎನ್ನುವುದು ನೀವು ಚಿತ್ರ ನೋಡಿದಾಗ ತಿಳಿಯುತ್ತೆ ಎಂದರು. ಚಿತ್ರದ ನಾಯಕಿ ಖ್ಯಾತಿ ಮಾತನಾಡುತ್ತ ಈ ಚಿತ್ರದಲ್ಲಿ ಡಾ.ಸಂಗೀತಾ ಎಂಬ ಪಾತ್ರ, ಆಸ್ಪತ್ರೆ ಕಟ್ಟಬೇಕೆಂಬ ಕನಸಿಟ್ಟುಕೊಂಡಿದ್ದ ಆಕೆ, ಆಸ್ಪತ್ರೆ ಕಟ್ಟುವ ಹಾದಿಯಲ್ಲಿ ಏನೇನಾಗುತ್ತೆ ಎನ್ನುವುದೇ ನನ್ನ ಪಾತ್ರ, ಎಂದರು.

ಬಿಗ್‌ಬಾಸ್ ನೀತು, ನಿವಿತಾಸ್ವಾಮಿ ಅಲ್ಲದೆ ಮಂಗಳಮುಖಿ ಚಾಂದಿನಿ ತಮ್ಮ ಪಾತ್ರಗಳ ಬಗ್ಗೆ ವಿವರಿಸಿದರು, ಹಿರಿಯ ಕಲಾವಿದರಾದ ರಘು ರಾಮನಕೊಪ್ಪ, ದೀಪಕ್ ಶೆಟ್ಟಿ, ವಿಜಯ್ ಚೆಂಡೂರ್, ಛಾಯಾಗ್ರಾಹಕ ಸ್ವಾಮಿ, ಸಂಗೀತ ನಿರ್ದೇಶಕ ಮಂಜು ಕವಿ, ಸಾಹಿತಿ ಕಿನ್ನಾಳ್‌ರಾಜ್, ಪ್ರದ್ಯೋತನ್, ನೃತ್ಯ ನಿರ್ದೇಶಕ ಜಗ್ಗು ಮಾಸ್ಟರ್ ಸಿನಿಮಾ ಕುರಿತಂತೆ ಮಾತನಾಡಿದರು.

ಕಮಲಶಿಲೆಯಲ್ಲಿ ದೇವಿ ಮಹಾತ್ಮೆ ಚಿತ್ರಕ್ಕೆ ಚಾಲನೆ



ಈ ಹಿಂದೆ ಮರ್ಯಾದೆ ಪ್ರಶ್ನೆ ಎಂಬ ಚಿತ್ರವನ್ನು ನಿರ್ದೇಶಿಸಿದ್ದ ನಾಗರಾಜ್ ಸೋಮಯಾಜಿ ಅವರ ನಿರ್ದೇಶನದಲ್ಲಿ ಇದೀಗ ಮತ್ತೊಂದು ಚಿತ್ರ ಮೂಡಿಬರುತ್ತಿದೆ, ಆ ಚಿತ್ರದ ಹೆಸರು ದೇವಿ ಮಹಾತ್ಮೆ. ಈಗಾಗಲೇ ತನ್ನ ಫಸ್ಟ್‌ಲುಕ್ ಪೋಸ್ಟರ್ ಮೂಲಕ ಚಿತ್ರರಂಗದಲ್ಲಿ ದೊಡ್ಡ ಮಟ್ಟದ ಕುತೂಹಲವನ್ನು ಹುಟ್ಟು ಹಾಕಿರುವ ಈ ಚಿತ್ರಕ್ಕೆ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕಮಲಶಿಲೆಯ ಶ್ರೀ ಬ್ರಾಹ್ಮಿ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಮುಹೂರ್ತ ಸಮಾರಂಭ ನೆರವೇರಿದೆ. ಈ ಸಂದರ್ಭದಲ್ಲಿ ದೇವಿ ಮಹಾತ್ಮೆ ಚಿತ್ರದ ನಿರ್ಮಾಪಕರಾದ ಗಾಂಧಿ ರಾಜನ್, ಧರ್ಮದರ್ಶಿಗಳಾದ ಸಚ್ಚಿದಾನಂದ ಚಾತ್ರರು, ನಿರ್ದೇಶಕ ನಾಗರಾಜ್ ಸೋಮಯಾಜಿ, ಛಾಯಾಗ್ರಾಹಕ ಎಸ್.ಕೆ.ರಾವ್ ಸೇರಿದಂತೆ ಚಿತ್ರದ ಪ್ರಮುಖರು ಭಾಗವಹಿಸಿದ್ದರು.

ದೇವಿ ಮಹಾತ್ಮೆ ಚಿತ್ರಕ್ಕಾಗಿ ಯೇ ಒಂದೊಳ್ಳೆ ತಂಡವು ರೆಡಿಯಾಗಿದೆ. ನಾಗರಾಜ ಸೋಮಯಾಜಿ ಅವರು ಈ ಚಿತ್ರಕ್ಕೆ ಅತ್ಯುತ್ತಮ ಕಥೆಯನ್ನು ಬರೆದಿದ್ದಾರೆ. ಬರವಣಿಗೆಯಲ್ಲಿ ಅರವಿಂದ್ ಕುಪ್ಪೀಕರ್, ಭಾಸ್ಕರ ಬಂಗೇರ, ಗುರು ಆರ್ಯ ಹಾಗೂ ವಾದಿರಾಜ ಶೆಟ್ಟಿ ಅವರುಗಳು ಸಾಥ್ ಕೊಟ್ಟಿದ್ದಾರೆ. ಇನ್ನು ಈ ಚಿತ್ರಕ್ಕೆ ಎಸ್.ಕೆ. ರಾವ್ ಅವರ ಕ್ಯಾಮರಾ ವರ್ಕ್, ಪ್ರಸಾದ್ ಕೆ.ಶೆಟ್ಟಿ ಅವರ ಸಂಗೀತ ನಿರ್ದೇಶನ ಇದೆ. ಕಾಮಿಡಿ, ಥ್ರಿಲ್ಲರ್ ಕಂಟೆಂಟ್ ಹೊಂದಿರುವ ದೇವಿ ಮಹಾತ್ಮೆ ಚಿತ್ರದ ಚಿತ್ರೀಕರಣ ಈ ಗುರುವಾರದಿಂದಲೇ ಶುರುವಾಗಿದ್ದು, ಕುಂದಾಪುರದ ಸುತ್ತಮುತ್ತ ಚಿತ್ರದ ಶೂಟಿಂಗ್ ನಡೆಯುತ್ತಿದೆ,


VRIDDHI CREATION
SATHISH PICTURE HOUSE
ವೃದ್ಧಿ ಕ್ರಿಯೇಷನ್ ಮತ್ತು ಸತೀಶ್ ಪಿಕ್ಚರ್ ಹೌಸ್
ಅರ್ಪಿಸುವ
lahari MUSIC
ಇಂದಿನಿಂದ ಆಟ ಶುರು
SATHISH NINASAM IN
THE RISE OF ಅಶೋಕ
NOT ALL BATTLES ARE FOUGHT ON THE BATTLEFIELD.
ನಿರ್ದೇಶಕರು ವಿನೋದ್. ವಿ. ಧೋಂಡಾಳೆ
ನಿರ್ಮಾಪಕರು ವರ್ಧನ್ ಹರಿ - ಜೈಷ್ಣವಿ - ಸತೀಶ್ ನೀನಾಸಂ
ಕನ್ನಡ - ತೆಲುಗು - ತಮಿಳು
ENTIRE KARNATAKA
KVN PRODUCTIONS


RADHA KRISHNA ARTS
DREAM WORLD CINEMAS
SHOOTING STARTS
SAMUTHIRAKANI | SUNDEEP NAGARAJ IN
WRITTEN & DIRECTED BY SHRIJAI
PRODUCED BY LOKESH.B | ADAVAYYA PUJAR
D.O.P A. KARUNAKARA | MUSIC K.K SENTHIL PRASATH | EDITOR DEEPU S KUMAR
STUNTS DR. RAVI VERMA, ARJUN RAJ, VIKRAM MORE | CHOREOGRAPHY KALAI, MURALI, BHUSHAN | ART DIRECTOR PRATHAP MENDON
LYRICS PRAMOD MARAVANTE, V. NAGENDRA PRASAD | PRODUCTION MANAGER M V SOMASHEKHAR | MAKE UP RAGHAVENDRA | COSTUME DESIGNER TEJASWINI
VFX JAGADISH | DIRECTION TEAM SHANMUGHAM, VARNITH NAVEEN, YOGENDRA, KEERTHI, ANISH | PRO NAGENDRA | PUBLICITY DESIGNS KALAAGUDI STUDIOS
YADAV
PRK studios



ಕೆ.ಜಿ. ರಸ್ತೆ
ಸಂತೋಷ್
4ಆಟ

AMB CINEMAS
KAPALI

ಮಾಗಡಿ ರಸ್ತೆ
ಪ್ರಸನ್ನ ಅಂಜನ್
4ಆಟ
ರಾಜಾಜಿನಗರ
ನವರಂಗ್
4ಆಟ
ಕಾಮಾಕ್ಷಿಪಾಳ್ಯ
ವಿಕ್ಟರಿ ಸಿನಿಮಾ
4ಆಟ
ಕತ್ರಿಗುಪ್ಪೆ
ಕಾಮಾಕ್ಯ
4ಆಟ
ಜೆ.ಪಿನಗರ
ಸಿದ್ದೇಶ್ವರ
4ಆಟ
ಉತ್ತರಹಳ್ಳಿ
ವೈಷ್ಣವಿ
4ಆಟ
ಕದಿರೇನಹಳ್ಳಿ
ಮಹದೇಶ್ವರ
4ಆಟ
ಚಿಕ್ಕಲಸಂದ್ರ
ಬಾಲಾಜಿ
4ಆಟ
ಕೋಣನಕುಂಟೆ ಕ್ರಾಸ್
ಮಾನಸ
4ಆಟ
ಕೆಂಗೇರಿ
ರಾಭಿನ್
4ಆಟ
ಉಳ್ಳಾಲ
ವಜ್ರೇಶ್ವರಿ
4ಆಟ
ದೊಲ್ಲರಹಳ್ಳಿ
ವೆಂಕಟೇಶ್ವರ
4ಆಟ
ಆವಲಹಳ್ಳಿ
ವೆಂಕಟೇಶ್ವರ
4ಆಟ
ಪೀಣ್ಯಾ
ಭಾರತಿ
4ಆಟ
ಕಮಲಾನಗರ
ವೀರಭದ್ರೇಶ್ವರ
4ಆಟ
ಸಿಂಗಾಪುರಲೇಔಟ್
ವೈನಿಧಿ
4ಆಟ
ಬೊಮ್ಮನಹಳ್ಳಿ
ಕೃಷ್ಣ
4ಆಟ
ವಿದ್ಯಾಪೀಟ ಸರ್ಕಲ್
ಚಂದ್ರೋದಯಾ
4ಆಟ
ಹರಿನಗರ
ವಿನಾಯಕ
4ಆಟ
ಕೊಡುಗೆಹಳ್ಳಿ
ರಾಜಮುರಳಿ
4ಆಟ
ರಾಜಗೋಪಾಲನಗರ
ಮಾರುತಿ
4ಆಟ
ದೌಡನಪಾಳ್ಯ
ಶ್ರೀನಿವಾಸ
4ಆಟ
ಕಾಡುಗೋಡಿ
ಶ್ರೀನಿವಾಸ
4ಆಟ

ಅಗರ
ತಿರುಮಲ
4ಆಟ
ಗೊಟ್ಟಿಗೆರೆ
ಲಕ್ಷ್ಮೀ
4ಆಟ
ಗರುಡಚಾರಪಾಳ್ಯ
ವಿಜಯಲಕ್ಷ್ಮೀ
4ಆಟ
ಹೊನ್ನಸಂದ್ರ
ಬೃಂಧ
4ಆಟ
ಸುಂಕದಕಟ್ಟೆ
ಮೋಹನ್
4ಆಟ
ಕೆ.ಆರ್.ಪುರಂ
ವೆಂಕಟೇಶ್ವರ
4ಆಟ
ಕೆ.ಪಿ.ಅಗ್ರಹರ
ವೆಂಕಟೇಶ್ವರ
4ಆಟ
ಹೆಸರುಘಟ್ಟ
ಎಸ್.ಎಲ್.ಎನ್
4ಆಟ
ಆರ್.ಟಿ.ನಗರ
ರಾಧಕೃಷ್ಣ
4ಆಟ
ಅತ್ತಿಬೆಲೆ
ಗೌರಿಶಂಕರ್
4ಆಟ
ಆನೇಕಲ್
ಅನ್ನಪೂರ್ಣೇಶ್ವರಿ
4ಆಟ
ಹೊಸೂರು
ರಾಘವೇಂದ್ರ
4ಆಟ
ದೊಡ್ಡಬಳ್ಳಾಪುರ
ವೈಭವ್
4ಆಟ
ಚಿಕ್ಕಬಳ್ಳಾಪುರ
ವಾಣಿ
4ಆಟ
ಚಿಕ್ಕಬಾಣವಾರ
ಆಶೋಕ
4ಆಟ

PVR CINEMAS
ORION
FORUM
VAISHNAVI
REGALIA
MARKETCITY
VEGA CITY
SPIRIT
UPTOWN
GT MALL
AURA
VR
REX
BHARATHIYA CITY
GLOBAL MALL
FALCON CITY

INOX LIVE THE MOVIE
SWAGATH
MANTRI
CENTRAL MALL
GARUDA MALL
LIDO
VALUE MALL
BROOKFIELD
RMZ
GARUDA YALAHANKA
SBR HORIZON

Cinépolis
ETA
RMM
ORION EAST
SHANTINIKETAN
SJR
LULU

GOPALAN CINEMAS
ARCADE
INNOVATION
LEGACY
GRAND
SIGNATURE

ROCKLINE cinemas
INNOVATIVE
MUKTA A2 CINEMAS
KINO CINEMAS KADUGODI
CINEPHILE
ತುಮಕೂರು
INOX LIVE THE MOVIE

ವಿಜಪುರ
ಗೌರಿಶಂಕರ
4ಆಟ
ಕೋಲಾರ
ನಾರಾಯಣಿ
4ಆಟ
ಮಾಲೂರು
ಬೆನಕ
4ಆಟ
ಮಧುಗಿರಿ
ಶಂಕರ್
4ಆಟ
ಮುಳಬಾಗಿಲು
ನಟರಾಜ
4ಆಟ
ನೆಲಮಂಗಲ
ರೂಪ
4ಆಟ
ಚನ್ನಪಟ್ಟಣ
ಶಿವಾನಂದ
4ಆಟ
ಮಾಗಡಿ
ಬಾಲಾಜಿ
4ಆಟ
ಕುಣಿಗಲ್
ಪದ್ಮ
4ಆಟ
ರಾಮನಗರ
ಶಾನ್
4ಆಟ
ಕನಕಪುರ
ವಾಣಿ
4ಆಟ
ತುಮಕೂರು
ಜೈಭಾರತ್
4ಆಟ
ಕೊರಟಗೆರೆ
ಶಿವಗಂಗಾ
4ಆಟ
ಶಿರಾ
ರಂಗನಾಥ
4ಆಟ
ಚಿಂತಾಮಣಿ
ಆರ್ದಶ
4ಆಟ
ಹಲಗುರು
ರವಿ
4ಆಟ
ಮೈಸೂರು
ಸಂಗಂ

DRC Cinemas
PVR CINEMAS
FORUM CENTRE MALL
GARUDA MALL
INOX LIVE THE MOVIE
MVC MYSURU VISION CINEMAS
4ಆಟ

ಮಂಡ್ಯ
ಗುರುಶ್ರೀ
4ಆಟ
ಮದ್ದೂರು
ಮಹಾವೀರ
4ಆಟ
ಹಾಸನ
ಎಸ್.ಬಿ.ಜಿ
4ಆಟ
ಚಾಮರಾಜನಗರ
ಶ್ರೀಭ್ರಮರಾಂಬ
4ಆಟ

ನಂಜನಗೂಡು
ಭಾರ್ಗವಿ
4ಆಟ
ಕೆ.ಆರ್ ನಗರ
ಗೌರಿಶಂಕರ
4ಆಟ
ಕೊಳ್ಳೆಗಾಲ
ಶ್ರೀನಿವಾಸ
4ಆಟ
ಹುಲ್ಲಹಳ್ಳಿ
ಯಜಮಾನ
4ಆಟ
ಗುಂಡ್ಲುಪೇಟೆ
ಸುರ್ಯಾ
4ಆಟ
ಕೆ.ಆರ್.ಪೇಟೆ
ಬಸವೇಶ್ವರ
4ಆಟ
ಪಿರಿಯಾಪಟ್ಟಣ
ಮಹದೇಶ್ವರ
4ಆಟ
ಬೇಲೂರು
ರೇಣುಕ
4ಆಟ
ಕೆ.ಎಂದೊಡ್ಡಿ
ಮಾರುತಿ
4ಆಟ
ಟಿ.ನರಸಿಪುರ
ವಿಜಯ್ ಭಗವಾನ್
4ಆಟ
ಬನ್ನೂರು
ಸೋಮೇಶ್ವರ
4ಆಟ
ಮಳವಳ್ಳಿ
ರಾಜರಾಜೇಶ್ವರಿ
4ಆಟ
ಸರಗೂರು
ಶಂಕರ್
4ಆಟ
ಪಾಂಡವಪುರ
ಲಾಲ್‌ಬಹದ್ದೂರ್
4ಆಟ
ಅರಕೆರೆ
ಮಂಜುನಾಥ
4ಆಟ
ಸಾಥನೂರು
ವೆಂಕಟೇಶ್ವರ
4ಆಟ
ಸಾಲಿಗ್ರಾಮ
ಪದ್ಮಾಂಬ
4ಆಟ
ಗೋಣಿಕೊಪ್ಪ
COORG CINEMA
4ಆಟ
ಕುಂಬಾರಕೊಪ್ಪಲು
ಮಹದೇಶ್ವರ
4ಆಟ
ಹೊಳೆನರಸಿಪುರ
ಎಸ್.ಎಲ್.ಎನ್
4ಆಟ
ಬೆಳ್ಳೂರು ಕ್ರಾಸ್
ಮಾರುತಿ
4ಆಟ
ಚಳ್ಳಕೆರೆ
ರಾಮಕೃಷ್ಣ
4ಆಟ
ಶಿವಮೊಗ್ಗ
ಮಲ್ಲಿಕಾರ್ಜುನ
4ಆಟ
ಶಿಕಾರಿಪುರ
ಶ್ರೀಮಾಲತೇಶ್
4ಆಟ
ಕಡೂರು
ವಿಜಯಲಕ್ಷ್ಮೀ
4ಆಟ

ಚನ್ನಗಿರಿ
ಲಕ್ಷ್ಮೀ
4ಆಟ
ಭದ್ರಾವತಿ
ಸತ್ಯ
4ಆಟ
ದಾವಣಗೆರೆ
ಗೀತಾಂಜಲಿ
4ಆಟ
ಚಿತ್ರದುರ್ಗ
ಬಸವೇಶ್ವರ
4ಆಟ
ಹಿರಿಯೂರು
ನಂಜುಂಡೇಶ್ವರ
4ಆಟ
ಜಗಳೂರು
ನಟರಾಜ
4ಆಟ
ಹರಿನಗರ
ಜಯಶ್ರೀ
4ಆಟ
ಹುಬ್ಬಳಿ
ಸುಧಾ
ಲಕ್ಷ್ಮೀಪ್ರೈಡ್
4ಆಟ
ಬೆಳಗಾಂ
ಚಿತ್ರ
4ಆಟ
ಗದಗ
ಮಹಾಲಕ್ಷ್ಮೀ
4ಆಟ
ಬಿಜಾಪುರ
ಲಕ್ಷ್ಮೀ
4ಆಟ
ರಾಣಿಬೆನ್ನೂರು
ಶಕ್ತಿ
4ಆಟ
ಬಾಗಲಕೋಟೆ
ವಾಸವಿ
4ಆಟ
ಇಳಕಲ್
ಶ್ರೀನಿವಾಸ
4ಆಟ
ಲಕ್ಷ್ಮೀಶ್ವರ
ರವಿ
4ಆಟ
ಸಿಂಧಗಿ
ವಿನಾಯಕ
4ಆಟ
ತಾಳಿಕೋಟೆ
ಅಮೀರ್
4ಆಟ
ಅಂಕಲಿ
ಮಯೂರ
4ಆಟ
ಶಿರಸಿ
ನಟರಾಜ
4ಆಟ
ಅಥಣಿ
ದುರ್ಗಲಕ್ಷ್ಮೀ
4ಆಟ
ಬಾದಾಮಿ
ಮಹಾಕೂಟೇಶ್ವರ
4ಆಟ
ಗೋಕಾಕ್
ಆನಂದ್
4ಆಟ
ಹಾವೇರಿ
ಮಾಧವಿ
4ಆಟ
ಬನ್ನಹಳ್ಳಿ
ವೈಭವ್
4ಆಟ
ಮುಧೋಳ್
ಸುರ್ಯವಂಶಿ
4ಆಟ
ಜಮಖಂಡಿ
ಸುವರ್ಣ
4ಆಟ
ಹಾರೋಗೇರಿ
ಚಂದ್ರಮ
4ಆಟ

ರಾಯಭಾಗ
ದತ್ತ
4ಆಟ
ರಾಮದುರ್ಗ
ಶ್ರೀನಿವಾಸ
4ಆಟ
ಗುಲ್ಬರ್ಗ
ತ್ರಿವೇಣಿ
4ಆಟ
ಗಂಗಾವತಿ
ಶಿವೆ
4ಆಟ
ಕೊಪ್ಪಳ
ಲಕ್ಷ್ಮೀ
4ಆಟ
ಸಿಂಧನೂರು
ಮಂಜುನಾಥ
4ಆಟ
ಶಹಪುರ
ಭವಾನಿ
4ಆಟ
ಕರಟಗಿ
ಲಕ್ಷ್ಮೀ
4ಆಟ
ದೇವದುರ್ಗ
ಭಾರತಿ
4ಆಟ
ಮಾನ್ವಿ
ಅಪರ್ಣಾ
4ಆಟ
ಕುಷ್ಟಗಿ
ಮಾರುತಿ
4ಆಟ
ಬಳ್ಳಾರಿ
ನಟರಾಜಕಾಂಪ್ಲೆಕ್ಸ್
4ಆಟ
ಹೊಸಪೇಟೆ
ಲಕ್ಷ್ಮೀ
4ಆಟ
ಹಗರಬೊಮ್ಮನಹಳ್ಳಿ
ಕೊಟ್ರೇಶ್ವರ
4ಆಟ
ಹುವಿನಹಡಗಲ್ಲಿ
ಶಂಕರ್
4ಆಟ
ಕಂಪ್ಲಿ
ಭಾರತ್
4ಆಟ
ಸಂಡೂರು
ಶ್ರೀನಿವಾಸ
4ಆಟ
ಮಸ್ಕಿ
ಶರಣಬಸವೇಶ್ವರ
4ಆಟ
ಕನಕಗಿರಿ
ರಾಧಿಕಾ
4ಆಟ
ಶಿರವಾರ
ಶಿವಮಾತ
4ಆಟ
ಲಿಂಗಸೂರು
ಎಂಪೈರ್
4ಆಟ

ಮಂಗಳೂರು
ಸುಚಿತ್ರ
Bharath Cinemas
PVR CINEMAS
Cinépolis

ಕುಂದಾಪುರ
Bharath Cinemas

ಹಾಗೂರಾಜ್ಯಾದ್ಯಂತ